ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 3 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 285 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಿನಲ್ಲಿ ನಿರ್ಭಯ, ನಿರಾತಂಕವಾಗಿ ಗಾಂಜಾ ಮಾರಾಟ!!!

ಹೈಕೋರ್ಟ್ ತೀವ್ರ ಕಳವಳ



● ಗಾಂಜಾ ಕೇಸ್‌ಗಳು ಮೈಸೂರಲ್ಲೇ ಏಕೆ ಜಾಸ್ತಿ!? ● ಇಂತಹ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಿದರೆ ಗತಿಯೇನು!!? ● ಆರೋಪಿಯ ಜಾಮೀನು ಅರ್ಜಿ ವಿಚಾರಣೆ ವೇಳೆ ನ್ಯಾ.ನಾಗಪ್ರಸನ್ನ ಅಚ್ಚರಿ ಪ್ರಶ್ನೆ ● ಅಂತಿಮವಾಗಿ ಮೈಸೂರಿನ ಗಾಂಜಾ ಮಾರಾಟ ಆರೋಪಿಗೆ ಷರತ್ತುಬದ್ಧ ಜಾಮೀನು

ಬೆಂಗಳೂರು: ಮೈಸೂರಿನಲ್ಲಿ ಗಾಂಜಾ ಮಾರಾಟ ಜಾಲ ವ್ಯಾಪಿಸಿರುವ ಬಗ್ಗೆ ಹೈಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ. ಗಾಂಜಾ ಮಾರಾಟ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮೈಸೂರಿನ ಸಮೀರ್ ಖಾನ್ ಅಲಿಯಾಸ್ ದಾದು(51) ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಏಕಸದಸ್ಯ ನ್ಯಾಯಪೀಠ, ಲೋಕ್ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೂ ಸೆಟಲ್ ಮಾಡಲಾಗುತ್ತದೆಯೇ ಎಂದು ಕಳವಳ ವ್ಯಕ್ತಪಡಿಸಿದರು.


ನ್ಯಾ.ಎಂ.ನಾಗಪ್ರಸನ್ನ

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ಕೆ.ಮಹದೇವ, ಅರ್ಜಿದಾರರನ್ನು ಮೈಸೂರಿನ ಬಿಇಓ ಕಚೇರಿ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಬಂಧಿಸಿ, 53 ಗ್ರಾಂ ಗಾಂಜಾ ವಶಪಡಿಸಿಕೊಂಡಿರುವುದಾಗಿ ದೂರಿನಲ್ಲಿ ವಿವರಿಸಲಾಗಿದೆ. ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ದಾಖಲಾಗಿರುವ ಕಲಂಗಳು ಜಾಮೀನು ಪಡೆಯಲು ಅರ್ಹವಾಗಿದ್ದರೂ ವಿಚಾರಣಾ ಕೋರ್ಟ್ ಜಾಮೀನು ತಿರಸ್ಕರಿಸಿದೆ. ಆದ್ದರಿಂದ, ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಈಗಾಗಲೇ ಇದೇ ಅರ್ಜಿದಾರರನ್ನು ಮಾದಕ ದ್ರವ್ಯ ಮಾರಾಟದ ಆರೋಪದಡಿ ಮತ್ತೊಂದು ಪ್ರಕರಣದಲ್ಲಿ ವಿಚಾರಣಾ ಕೋರ್ಟ್ ಅಪರಾಧಿ ಎಂದು ತೀರ್ಪು ನೀಡಿರುವುದನ್ನು ನ್ಯಾಯಾಲಯದ ಗಮನಕ್ಕೆ ತಂದರು. ಇದಕ್ಕೆ ಮಹದೇವ, ಆ ಪ್ರಕರಣದಲ್ಲಿ ಅರ್ಜಿದಾರರು ಅಪರಾಧ ಒಪ್ಪಿಕೊಂಡ ಕಾರಣ ಲೋಕ್ ಅದಾಲತ್‌ನಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡಲಾಗಿದೆ ಎಂದರು.

ಈ ಮಾತಿಗೆ ನ್ಯಾಯಮೂರ್ತಿ ನಾಗಪ್ರಸನ್ನ, ಏನ್ರೀ ಇದು ಲೋಕ್ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೆಲ್ಲಾ ಸೆಟಲ್ ಮಾಡಲಾಗುತ್ತದೆಯೇ! ಹೀಗಾದರೆ ಹೇಗೆ? ನಾಳೆ ಎಂಡಿಎಂಎ (ಮಾದಕ ದ್ರವ್ಯ) ಕೇಸುಗಳನ್ನೂ ರಾಜೀ ಸಂಧಾನದ ಮೂಲಕ ಲೋಕ್ ಅದಾಲತ್‌ನಲ್ಲಿ ವಿಲೇವಾರಿ ಮಾಡಬಹುದಲ್ಲವೇ? ಇಂತಹ ■ 6ನೇ ಪುಟಕ್ಕೆ

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ತಯಾರಿಕೆ ಪತ್ತೆ ಹಿನ್ನೆಲೆ

ಬಹುತೇಕ ಕೈಗಾರಿಕಾ ಘಟಕಗಳಲ್ಲಿ ತೀವ್ರ ಶೋಧನೆ

■ 6 ದಿನದಿಂದ ನಿರಂತರ ಕಾರ್ಯಾಚರಣೆ ■ ತಪಾಸಣೆಗೆ ಶ್ವಾನ ದಳ ಬಳಕೆ ■ ಬಂದ್ ಆಗಿರುವ ಉದ್ಯಮಗಳನ್ನೂ ಬಿಡದ ಪೊಲೀಸರು ■ ಒಂಟಿ ಮನೆಗಳ ಮೇಲೆ ಹದ್ದಿನ ಕಣ್ಣು

ಮೈಸೂರು, ಫೆ2(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿಗೆ ಅಪಖ್ಯಾತಿ ತರುತ್ತಿರುವ ಡ್ರಗ್ಸ್ ತಯಾರಿಕಾ ಫ್ಯಾಕ್ಟರಿಗಳ ಡ್ರಗ್ಸ್ ಜಾಲ ಮಟ್ಟ ಹಾಕಲು ಮೈಸೂರು ಪೊಲೀಸರು ಗಂಭೀರ ಕ್ರಮಕ್ಕೆ ಮುಂದಾಗಿದ್ದು, ಶೇಕಡ 80ರಷ್ಟು ಕಾರ್ಯಾಚರಣೆ ಪೂರ್ಣಗೊಳಿಸಿದ್ದಾರೆ.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಟುಕ್ ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡೆಕ್ಷನ್ ಸಲ್ಯೂಷನ್ ಮ್ಯಾನುಫ್ಯಾಕ್ಚರಿಂಗ್ ಕೆಮಿಕಲ್ ಫ್ಯಾಕ್ಟರಿ ಮೇಲೆ ದೆಹಲಿಯ ಎನ್‌ಸಿಬಿ ಪೊಲೀಸರು ಜನವರಿ 28 ರಂದು ದಾಳಿ ಮಾಡಿದ ಮರು ದಿನದಿಂದಲೇ ಮೈಸೂರು ಪೊಲೀಸರು ಪರಿಶೀಲನಾ ಕಾರ್ಯಾಚರಣೆ ಆರಂಭಿಸಿದ್ದಾರೆ.

ಕಳೆದ ಆರು ದಿನಗಳಿಂದ ಮೈಸೂರು ನಗರದ ಎಲ್ಲಾ ಕೈಗಾರಿಕಾ ಪ್ರದೇಶಗಳನ್ನೂ ಪೊಲೀಸರು ಜಾಲಾಡುತ್ತಿದ್ದಾರೆ. ಪ್ರತಿಯೊಂದು ಕಾರ್ಖಾನೆಗೂ ತೆರಳಿ ಸಂಬಂಧಿಸಿದ ಕೈಗಾರಿಕಾ ಘಟಕದ ಮಾಲೀಕರು, ಅಲ್ಲಿ ಉತ್ಪಾದಿಸುವ ವಸ್ತುಗಳು, ಅದರ ಸಾಗಾಟ, ಮಾರಾಟ ಸೇರಿದಂತೆ ಸಮಗ್ರ ಮಾಹಿತಿ(ಡಾಟಾ)ಯನ್ನು ಕಲೆ ಹಾಕುತ್ತಿದ್ದಾರೆ.

ಅದರಲ್ಲೂ ಕೆಮಿಕಲ್ಸ್ ಕಾರ್ಖಾನೆಗಳಲ್ಲಿ ಇಂಚಿಂಚೂ ಬಿಡದೆ ಪರಿಶೀಲನೆ ನಡೆಸುತ್ತಿದ್ದಾರೆ. ಶ್ವಾನ ದಳದೊಂದಿಗೆ ಪ್ರತಿಯೊಂದು ಜಾಗದಲ್ಲೂ ತಪಾಸಣೆ ನಡೆಸುತ್ತಿದ್ದಾರೆ. ಕೆಮಿಕಲ್ಸ್ ಫ್ಯಾಕ್ಟರಿಯಲ್ಲಿ ರಾಸಾಯನಿಕಗಳು ಡ್ರಗ್ಸ್‌ಗೆ ಸಂಬಂಧಿಸಿದ ■ 6ನೇ ಪುಟಕ್ಕೆ


ಮೈಸೂರು ನಗರ ಪೊಲೀಸರು ಕೈಗಾರಿಕೆಗಳ ತಪಾಸಣೆ ಮುಂದುವರೆಸಿರುವುದು.

ಎಲ್ಲಾ ಆಯಾಮದಿಂದಲೂ ತನಿಖೆ

ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ಪತ್ತೆಯಾಗಿದೆ ಎನ್ನಲಾದ ಕೈಗಾರಿಕಾ ಘಟಕದ ಸಂಬಂಧ ಎಲ್ಲಾ ಆಯಾಮದಿಂದಲೂ ತನಿಖೆ ನಡೆಸುತ್ತಿದ್ದೇವೆ. ಈ ಪ್ರಕರಣದಲ್ಲಿ ಇನ್ನು ಹಲವರು ಭಾಗಿಯಾಗಿದ್ದಾರೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ಡ್ರಗ್ಸ್ ಜಾಲ ತಲೆ ಎತ್ತದಂತೆ ಪರಿಣಾಮಕಾರಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈಗಾಗಲೇ ಶೇಕಡ 80ರಷ್ಟು ಕಾರ್ಖಾನೆಗಳ ಪರಿಶೀಲನಾ ಕಾರ್ಯ ಪೂರ್ಣಗೊಂಡಿದೆ. ಮೈಸೂರು ನಗರ ವ್ಯಾಪ್ತಿಯ ಪ್ರತಿಯೊಂದು ಕಾರ್ಖಾನೆ, ಅದರಲ್ಲೂ ಬಂದ್ ಆಗಿರುವ ಕೈಗಾರಿಕೆ, ಒಂಟಿ ಮನೆ ಸೇರಿದಂತೆ ಇತರೆ ಸ್ಥಳಗಳಲ್ಲೂ ತಪಾಸಣೆ ಮುಂದುವರೆಸಲಾಗಿದೆ. - **ಸುಂದರ್ ರಾಜ್,** ಡಿಸಿಪಿ, ಮೈಸೂರು.

ಮೊದಲ ಬಾರಿಗೆ ಪೊಲೀಸರಿಂದ ಡಾಟಾ ಸಂಗ್ರಹ

ಮೈಸೂರು ಪೊಲೀಸರ ಬಳಿ ಕೈಗಾರಿಕೆ, ಒಂಟಿ ಮನೆ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಈ ತನಕ ಯಾವುದೇ ಡಾಟಾ ಇರಲಿಲ್ಲ. ಆದರೆ ಇದೇ ಮೊದಲ ಬಾರಿಗೆ ಸಮಗ್ರ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಹೆಬ್ಬಾಳು ಕೈಗಾರಿಕಾ ಪ್ರದೇಶದ ಕಾರ್ಖಾನೆಯಲ್ಲಿ ಡ್ರಗ್ಸ್ ತಯಾರಿಕೆ ಪತ್ತೆಯಾಗಿರುವುದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದು, ಈಗ ಪ್ರತಿಯೊಂದು ಕೈಗಾರಿಕಾ ಘಟಕಗಳಿಗೆ ಭೇಟಿ ನೀಡಿ ಡಾಟಾ ಸಂಗ್ರಹಿಸುತ್ತಿದ್ದಾರೆ. ಮೈಸೂರಿನ ರಿಂಗ್ ರಸ್ತೆ ಬೆಲವತ್ತ ಬಳಿಯ ಡ್ರಗ್ಸ್ ಫ್ಯಾಕ್ಟರಿಯಲ್ಲಿ 390 ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತು ಪತ್ತೆಯಾದ ಸಂದರ್ಭದಲ್ಲೇ ಈ ಮಾದರಿಯಲ್ಲಿ ಮಾಹಿತಿ ಸಂಗ್ರಹ ಹಾಗೂ ಪರಿಶೀಲನಾ ಕಾರ್ಯ ನಡೆಸಿದ್ದರೆ ಪ್ರಾಯಶಃ ಹೆಬ್ಬಾಳಿನಲ್ಲಿ ಮಾದಕ ವಸ್ತು ತಯಾರಿಕೆಗೆ ಆಸ್ಪದವಿರುತ್ತಿರಲಿಲ್ಲ. ಯಾವುದಾದರೊಂದು ಪ್ರಕರಣ ಪತ್ತೆಯಾದ ನಂತರ ಪೊಲೀಸರು ಅದರ ಬೆನ್ನತ್ತುವ ಬದಲು, ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮ ಕೈಗೊಂಡರೆ ಬಹುತೇಕ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕಬಹುದು.

ಪದವಿ ಹಂತದವರೆಗೆ ಉಚಿತ ಶಿಕ್ಷಣ

ಹೊಸ ಭಾಷ್ಯ ಬರೆದ ಕೇರಳ

ತಿರುವನಂತಪುರಂ: ಉಚಿತ ಶಿಕ್ಷಣ ವ್ಯವಸ್ಥೆಯನ್ನು ಪದವಿ ಹಂತದವರೆಗೂ ವಿಸ್ತರಿಸುವ ಮೂಲಕ ಸಿಎಂ ಪಿಣರಾಯಿ ವಿಜಯನ್ ನೇತೃತ್ವದ ಕೇರಳ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಭಾಷ್ಯ ಬರೆದಿದೆ. ಕೆಲ ದಿನಗಳ ಹಿಂದೆ ಮಂಡನೆಯಾದ ಬಜೆಟ್‌ನಲ್ಲಿ ಈ ಮಹತ್ವದ ಘೋಷಣೆ ಮಾಡಿದ್ದು, 12ನೇ ತರಗತಿವರೆಗೆ ಇದ್ದಂತಹ ಸಂಪೂರ್ಣ ಉಚಿತ ಶಿಕ್ಷಣ ಒದಗಿಸುವ ಯೋಜನೆಯನ್ನು ಪದವಿ ಹಂತದವರೆಗೆ ವಿಸ್ತರಿಸಲಾಗಿದೆ. ಈ ಮೂಲಕ ಪದವಿವರೆಗೂ ಉಚಿತ ಶಿಕ್ಷಣ ಕಲ್ಪಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.




ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಕಲಾ ಮತ್ತು ವಿಜ್ಞಾನ ಪದವಿ ಕೋರ್ಸ್‌ಗಳನ್ನು ಉಚಿತಗೊಳಿಸುವುದಾಗಿ ಘೋಷಿಸುವುದರ ಜೊತೆಗೆ ಸೇಫ್ಟಿ ಇನ್ಶ್ಯೂರೆನ್ಸ್ ಯೋಜನೆಯಡಿ 1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಅಪಘಾತ ವಿಮೆ ಸೌಲಭ್ಯ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ, ವಿವಿಗಳಿಗೆ ಹೆಚ್ಚುವರಿ ಅನುದಾನ, ವಿದ್ಯಾರ್ಥಿವೇತನ ಮತ್ತು ಫೆಲೋಶಿಪ್, ವೃತ್ತಿಪರ ಶಿಕ್ಷಣ ಮತ್ತು ಭವಿಷ್ಯದ ಕೌಶಲ್ಯಗಳಿಗೆ ಒತ್ತು ನೀಡುವ 'ಗ್ಲೋಬಲ್ ಸ್ಕೂಲ್' ಸ್ಥಾಪನೆ, ವಿದ್ಯಾರ್ಥಿ ಗಳಿಗೆ ಸಾರ್ವಜನಿಕ ಹಾಸ್ಟೆಲ್ ಸೇರಿದಂತೆ ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಆದ್ಯತೆ ನೀಡಿ, ಬಜೆಟ್‌ನಲ್ಲಿ ಸಾಕಷ್ಟು ಅನುದಾನ ಮೀಸಲಿಡಲಾಗಿದೆ.

ರಾಜ್ಯದ ಎಲ್ಲಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ

ಏಪ್ರಿಲ್‌ನಿಂದ ಸರ್ಕಾರಿ ಭೂಮಿ ಒತ್ತುವರಿ ತೆರವು

ಬೆಂಗಳೂರು, ಫೆ.2(ಕೆಎಂಶಿ)– ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಏಪ್ರಿಲ್‌ನಿಂದ ಮುಲಾಜಿಲ್ಲದೆ ಭಾರೀ ಪ್ರಮಾಣದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಎಚ್ಚರಿಸಿದ್ದಾರೆ.



ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಮಹಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಒತ್ತುವರಿಯನ್ನು ಯಾವುದೇ ಪ್ರಭಾವಕ್ಕೂ ಮಣಿಯದೆ ತೆರವುಗೊಳಿಸಲು ಮುಂದಾಗಿ ಎಂದು ಉಪವಿಭಾಗಾಧಿಕಾರಿಗಳಿಗೆ ಇಂದಿಲ್ಲಿ ಆದೇಶಿಸಿದರು.

ಉಪವಿಭಾಗಾಧಿಕಾರಿಗಳ ಜೊತೆ ವಿಡಿಯೊ ಕಾನ್ಫರೆನ್ಸಿಂಗ್‌ನಲ್ಲಿ ಸಚಿವರು ಈ ಆದೇಶ ಮಾಡಿದ್ದಲ್ಲದೆ, ಈಗಾಗಲೇ ಗ್ರಾಮ ಲೆಕ್ಕಿಗರು, ಎಲ್ಲೆಲ್ಲಿ ಸರ್ಕಾರಿ ಭೂಮಿ ಒತ್ತುವರಿ ಆಗಿದೆ ಎಂಬುದನ್ನು ಗುರುತಿಸಿದ್ದರು. ಆದರೆ ತೆರವು ಕಾರ್ಯ ಕೈಗೊಂಡಿರಲಿಲ್ಲ. ಈ ವರ್ಷ ಏಪ್ರಿಲ್ ನಂತರ ಬೀಟ್ ಆಪ್‌ನಲ್ಲಿನ ಮಾಹಿತಿ ಆಧರಿಸಿ ಕ್ರಮಬದ್ಧವಾಗಿ ತೆರವು ಕಾರ್ಯಾಚರಣೆ ನಡೆಯಬೇಕು. ತಹಸೀಲ್ದಾರ್ ಕಡೆಯಿಂದ ಭೂ ಒತ್ತುವರಿ ತೆರವು ಕಾರ್ಯವನ್ನು ಎಸಿಗಳು ಮಾಡಬೇಕು. ನಗರ ಪ್ರದೇಶಗಳಿಂದಲೇ ಈ ಕೆಲಸ ಆರಂಭವಾಗಲಿ ಎಂದರು. ಒತ್ತುವರಿ ತೆರವು ನಂತರವೂ ಗ್ರಾಮ ಲೆಕ್ಕಿಗರು ಪ್ರತಿ ಆರು ತಿಂಗಳಿಗೊಮ್ಮೆ ಪ್ರದೇಶಕ್ಕೆ ಭೇಟಿ ನೀಡಿ ಮತ್ತೆ ಒತ್ತುವರಿ ಆಗದಂತೆ ಎಚ್ಚರ ವಹಿಸಬೇಕು.

ಕಂದಾಯ ಅಲ್ಲದೆ, ಬೇರೆ ಇಲಾಖೆಗಳೂ ತಮ್ಮ ಜಮೀನು ಒತ್ತುವರಿ ತೆರವಿಗೆ ಬೀಟ್ ಆಪ್ ತಂತ್ರಾಂಶ ಬಳಸಿಕೊಳ್ಳಬೇಕು.


ಈ ತಂತ್ರಾಂಶ ಸರ್ಕಾರದ ಆಸ್ತಿ ಕಣಜವಾಗಿದ್ದು, ಸಮರ್ಪಕ ಬಳಕೆ ಮಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕೇಂದ್ರ ಸರ್ಕಾರದ ಜನಗಣತಿ ಕಾರಣದಿಂದಾಗಿ ಡಿಸೆಂಬರ್ 31ರ ನಂತರ ಹೊಸ ಕಂದಾಯ ಗ್ರಾಮಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ನಾವು ಅಧಿಕಾರಕ್ಕೆ ಬಂದ ನಂತರ 2.3 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಿದ್ದೇವೆ. ಇದರಲ್ಲಿ ನಿಮ್ಮೆಲ್ಲರ ಶ್ರಮ ಇದೆ. ನಿಮ್ಮ ವ್ಯಾಪ್ತಿಗೆ ಬರುವ ಬಾಕಿ ಮೊಕದ್ದಮೆಗಳ ವಿಲೇವಾರಿಗೆ ಆದ್ಯತೆ ಕೊಡಿ ಎಂದರು.

ಮತ್ತೆ ನಿಫಾ ಆತಂಕ

ಕರ್ನಾಟಕದಲ್ಲಿ ಹೈ ಅಲರ್ಟ್

ಬೆಂಗಳೂರು, ಫೆ2– ದೇಶದ ವಿವಿಧ ರಾಜ್ಯಗಳಲ್ಲಿ ನಿಫಾ ವೈರಸ್ ಮತ್ತೆ ಸದ್ದು ಮಾಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಆರೋಗ್ಯ ಇಲಾಖೆ ಅಲರ್ಟ್ ಆಗಿದೆ.



ಈ ವೈರಸ್ ಸೋಂಕಿತ ಬಾವಲಿಗಳು ತಿಂದಿರುವ ಹಣ್ಣುಗಳನ್ನು ತಿಂದರೆ ಅಥವಾ ಹಂದಿಗಳ ಮಾಂಸವನ್ನು ಸೇವನೆ ಮಾಡುವುದರಿಂದ ಹೆಚ್ಚಾಗಿ ಹರಡಲಿದೆ. ಮನುಷ್ಯರಿಂದ ಮನುಷ್ಯರಿಗೂ ಕೆಲವೊಮ್ಮೆ ಇದು ವರ್ಗಾವಣೆ ಆಗಬಹುದು ಎನ್ನಲಾಗಿದೆ. ಅತ್ಯಂತ ಭಯಾನಕ ಅಂಶವೆಂದರೆ ನಿಫಾ ವೈರಸ್ ಸೋಂಕಿತರ ಮರಣ ಪ್ರಮಾಣ ಶೇ. 60–75 ರಷ್ಟಿರುವ ಕಾರಣ, ಈ ವೈರಸ್ ರಾಜ್ಯದಲ್ಲಿ ಕಾಲಿಡದಂತೆ ಆರೋಗ್ಯ ಇಲಾಖೆ ಕಟ್ಟೆಚ್ಚರ ವಹಿಸಿದೆ. ಶಂಕಿತ ಪ್ರಕರಣಗಳ ಬಗ್ಗೆ ನಿಗಾ ವಹಿಸಲು ಆರೋಗ್ಯಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ನಿಫಾ ಸೋಂಕಿನ ಲಕ್ಷಣಗಳೇನು: ಜ್ವರ, ಮೈ–ಕೈ ನೋವು, ಸುಸ್ತು, ತಲೆನೋವು, ಶೀತ, ಗಂಟಲು ಕೆರೆತ ಅಥವಾ ಗಂಟಲಿನಲ್ಲಿ ನೋವು, ತಲೆನೋವು, ಕುತ್ತಿಗೆಯ ಹಿಂದಿನ ಭಾಗದಲ್ಲಿ ಸೆಳೆತ

ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ನಿಫಾ ವೈರಸ್ ಆತಂಕ ಮನೆ ಮಾಡಿರುವ ಹಿನ್ನೆಲೆ ■ 6ನೇ ಪುಟಕ್ಕೆ

ಮತ್ತೆ ಗವರ್ನ್‌ಮೆಂಟ್ Vs ಗವರ್ನರ್

ದ್ವೇಷ ಭಾಷಣ ಮಸೂದೆ ರಾಷ್ಟ್ರಪತಿ ಅಂಗಳಕ್ಕೆ ಹೊತ್ತಾಕಿದ ರಾಜ್ಯಪಾಲರು

ಬೆಂಗಳೂರು: ರಾಜ್ಯಪಾಲರು ಹಾಗೂ ಸರ್ಕಾರದ ನಡುವೆ ಸಂಘರ್ಷ ಮತ್ತೆ ಶುರುವಾಗಿದೆ. ಸರ್ಕಾರದ ದ್ವೇಷ ಭಾಷಣ ಮಸೂದೆಗೆ ರಾಜ್ಯಪಾಲರು ಸಹಿ ಹಾಕದೇ ರಾಷ್ಟ್ರಪತಿಗಳ ಅಂಗಳಕ್ಕೆ ಕಳಿಸಿದ್ದಾರೆ.


ಗೆಹ್ಲೋಟ್

ಬೆಳಗಾವಿ ಅಧಿವೇಶನದಲ್ಲಿ ಪಾಸ್ ಆಗಿದ್ದ ದ್ವೇಷ ಭಾಷಣ ಬಿಲ್‌ಗೆ ರಾಜ್ಯಪಾಲ ಗೆಹ್ಲೋಟ್ ಬ್ರೇಕ್ ಹಾಕಿದ್ದಾರೆ. ದ್ವೇಷ ಭಾಷಣದ ವ್ಯಾಖ್ಯಾನವೇ ಮಸೂದೆಯಲ್ಲಿ ಅಸ್ಪಷ್ಟವಾಗಿದೆ. ಮಸೂದೆಗೆ ಒಪ್ಪಿಗೆ ಕೊಡದಂತೆ 40ಕ್ಕೂ ಹೆಚ್ಚು ಮನವಿ ಬಂದಿರುವ ಬಗ್ಗೆ ರಾಜ್ಯಪಾಲರು ಉಲ್ಲೇಖ ಮಾಡಿ ರಾಷ್ಟ್ರಪತಿ ಅಂಗಳಕ್ಕೆ ರವಾನೆ ಮಾಡಿದ್ದಾರೆ. ರಾಷ್ಟ್ರಪತಿಗಳಿಗೆ ಬಿಲ್ ವರ್ಗಾವಣೆ ಮಾಡುವುದಕ್ಕೆ ರಾಜ್ಯಪಾಲರು 29 ಕಾರಣಗಳನ್ನು ನೀಡಿದ್ದಾರೆ. ಈ ಬಿಲ್ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಎಂಬ ಉಲ್ಲೇಖವನ್ನೂ ಮಾಡಿದ್ದಾರೆ. ರಾಜ್ಯಪಾಲರ ನಡೆಗೆ ಪರ–ವಿರೋಧ ■ 6ನೇ ಪುಟಕ್ಕೆ

ಗವರ್ನರ್ ಕೊಟ್ಟ ಪ್ರಮುಖ ಕಾರಣಗಳು

- ದ್ವೇಷ ಭಾಷಣದ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ
- ಅರ್ಥಪೂರ್ಣ ಸಮಾಲೋಚನೆ ಮಾಡದೇ ಅಂಗೀಕಾರ
- ಮಸೂದೆ ಸಂಬಂಧ ಕೆಲವು ಕಾನೂನು ತೊಡಕುಗಳಿವೆ
- ಮಿತಿಮೀರಿದ ಮತ್ತು ಭಯಾನಕ ಪರಿಣಾಮಗಳನ್ನು ಬೀರಲಿವೆ
- ಅಭಿವ್ಯಕ್ತಿ ಸ್ವಾತಂತ್ರ್ಯ ಮೂಲಭೂತ ಹಕ್ಕನ್ನು ಕಸಿಯುವ ಮುನ್ಸೂಚನೆ
- ಈ ಮಸೂದೆಯು ಉದ್ದೇಶಕ್ಕಿಂತ ಪರಿಣಾಮಕ್ಕೆ ಆದ್ಯತೆ ನೀಡಿರುತ್ತದೆ
- ಸತ್ಯವನ್ನು ಮಾತಾಡಿದ್ರೂ, ಬೌದ್ಧಿಕ ಟೀಕೆ ಮಾಡಿದರೂ ಬಂಧಿಸಬಹುದಾಗಿದೆ
- ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ ಒಬ್ಬ ವ್ಯಕ್ತಿ, ಸಮುದಾಯಕ್ಕೆ ಸೀಮಿತವಾಗಿರಬಾರದು
- ಇಡೀ ಸಮಾಜದ ಸಾಮೂಹಿಕ ಹಕ್ಕಾಗಿರಬೇಕು
- ಅಧಿಕಾರಿಗಳು ನಿರ್ಧರಿಸಿದರೆ ಯಾವುದೇ ಕಾರ್ಯಕ್ರಮ ನಿಷೇಧಿಸಬಹುದು

ನಾವು ರಾಜ್ಯಪಾಲರ ಪರ; ಕೇಂದ್ರದ ವಿರುದ್ಧ ಇದ್ದೇವೆ



ಸರ್ಕಾರದ ಭಾಷಣದಲ್ಲಿ ಸಂವಿಧಾನ ವಿರೋಧಿ ಅಂಶ ಇರಲಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು, ಫೆ2(ಕೆಎಂಶಿ)– ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ರಾಜ್ಯಪಾಲರಿಗೆ ಸರ್ಕಾರ ಬರೆದುಕೊಟ್ಟ ಭಾಷಣದಲ್ಲಿ ಸಂವಿಧಾನ ವಿರೋಧಿ ಅಂಶ ಏನೂ ಇರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಸಮರ್ಥಿಸಿಕೊಂಡರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆಗೆ ಉತ್ತರಿಸಿದ ಅವರು, ರಾಜ್ಯಪಾಲರು ಪೂರ್ತಿ ಭಾಷಣ ಓದದೆ ತರಾತುರಿಯಲ್ಲಿ ಹೋದರು. ಭಾಷಣದಲ್ಲಿದ್ದ "ಜೈ ಸಂವಿಧಾನ" ಎನ್ನುವುದನ್ನೂ ಉಲ್ಲೇಖಿಸಲಿಲ್ಲ. ರಾಷ್ಟ್ರಗೀತೆ ಮುಗಿಯುವವರೆಗೂ ಕಾಯದೆ ಹೋಗಿದ್ದು ಸರಿಯಲ್ಲ ಎಂದರು.

ಪ್ರತಿಪಕ್ಷಗಳವರು ಚರ್ಚೆ ವೇಳೆ ನನ್ನನ್ನು ಅಸಹಾಯಕ ಮುಖ್ಯಮಂತ್ರಿ ಎಂದಿದ್ದಾರೆ. ಕೆಲವು ಬಾರಿ, ಅಸತ್ಯದ ಎದುರು ಸತ್ಯ ಅಸಹಾಯಕವಾಗಿ ಬಿಡುತ್ತದೆ.

ನಾವು ರಾಜ್ಯಪಾಲರ ವಿರುದ್ಧ ಇಲ್ಲ, ಕೇಂದ್ರ ಸರ್ಕಾರದ ವಿರುದ್ಧ ಇದ್ದೇವೆ. ಮನರೇಗಾ ಬದಲಾಯಿಸಿ ವಿಬಿ–ಜಿ–ರಾಮ್–ಜಿ ಮಾಡಿದ್ದಾರೆ. ಹೆಸರುಗಳನ್ನು ಬದಲಾಯಿಸುವುದಕ್ಕೇ ಕೆಲವರನ್ನು ಇಟ್ಟುಕೊಂಡಿದ್ದಾರೆ ಅನ್ನಿಸುತ್ತೆ. ಬಿಜೆಪಿ ಆಡಳಿತದಲ್ಲಿ ರಾಜ್ಯಪಾಲರಾಗಿದ್ದ ಹಂಸರಾಜ್ ಭಾರದ್ವಾಜ್ ಬಾಯಲ್ಲೂ ಹೇಳಿಸಿದ್ದೀರಿ. ಜನರು ನಮ್ಮನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡುತ್ತಾರೆ. ವಿರೋಧ ಪಕ್ಷ ಮತ್ತು ಸರ್ಕಾರದ ಸಿದ್ಧಾಂತಗಳು ವಿಭಿನ್ನವಾಗಿರುತ್ತವೆ. ನಾವಿಬ್ಬರೂ ಪರಸ್ಪರ ಒಪ್ಪಲೇಬೇಕೆಂಬ ಷರತ್ತಿಲ್ಲ. ಆದರೆ, ನಾವೆಲ್ಲರೂ ಸಂವಿಧಾನ ಒಪ್ಪಲೇಬೇಕು.

ಪರಿಹಾರ ನಷ್ಟ: ಪ್ರತಿವರ್ಷ ರಾಜ್ಯಕ್ಕೆ 18 ರಿಂದ 20 ಸಾವಿರ ಕೋಟಿ ರೂ.ಗಳಷ್ಟು ಜಿಎಸ್‌ಟಿ ಪರಿಹಾರ ನಷ್ಟವಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ 75ರಿಂದ 80,000 ಕೋಟಿ ರೂ. ನಷ್ಟವಾಗಿದೆ.

16ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಆದರೆ, ನಮಗೆ ಸಿಗಬೇಕಾದ ನ್ಯಾಯ ಸಿಕ್ಕಿಲ್ಲ. 14ನೇ ಹಣಕಾಸು ಆಯೋಗ ನಮಗೆ ಶೇ.4.71 ರಷ್ಟು ತೆರಿಗೆ ಹಂಚಿಕೆ ಮಾಡಿತ್ತು. ಅದಕ್ಕಿಂತ ಹೆಚ್ಚಿನ ಅನುದಾನ ಸಿಕ್ಕರೆ ಮಾತ್ರ ನಮಗೆ ನ್ಯಾಯ ದೊರೆಯುತ್ತದೆ ಎಂದು ಹೇಳಿದ್ದೆವು.

ಕರ್ನಾಟಕ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ 5 ವರ್ಷಗಳಲ್ಲಿ 37,372 ಕೋಟಿ ರೂ. ಕೊಟ್ಟರೆ, ಪ್ರಕೃತಿ ವಿಕೋಪ ನಿಧಿಯಲ್ಲೂ ಭಾರೀ ಅನ್ಯಾಯ ಮಾಡಲಾಗಿದೆ. ನಮಗೆ ಕೇವಲ 5,135 ಕೋಟಿ ರೂ. ಸಿಗಲಿದೆ.

ಬೆಂಗಳೂರು, ಕಲ್ಯಾಣ ಕರ್ನಾಟಕ, ಮಲೆನಾಡು, ಕರಾವಳಿ, ಉತ್ತರ ಕರ್ನಾಟಕ ಅಭಿವೃದ್ಧಿಗೆ ವಿಶೇಷ ಯೋಜನೆ, ಅನುದಾನ ಕೇಳಿದ್ದೆವು. ನಯಾಪೈಸೆ ಕೊಡಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುದಾನ ನೀಡುವುದಾಗಿ ■ 6ನೇ ಪುಟಕ್ಕೆ

ವ್ಯಕ್ತಿ ಒಬ್ಬನೇ ಆದರೂ ಸಂಕಲ್ಪ ಇದ್ದರೆ ಗುರಿ ಮುಟ್ಟುವುದು ನಿಶ್ಚಿತ!

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರೇ ನಾಯಕತ್ವ ಬದಲಾವಣೆ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾರ್ಮಿಕ ನುಡಿ



ಬೆಂಗಳೂರು, ಫೆ.2(ಕೆಎಂಶಿ) – ವ್ಯಕ್ತಿ ಒಬ್ಬನೇ ಆದರೂ ದೃಢ ನಿಲುವು, ವಿಶ್ವಾಸ, ಸಂಕಲ್ಪ ಇದ್ದರೆ ಗುರಿ ಮುಟ್ಟುವುದು ನಿಶ್ಚಿತ ಎನ್ನುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರೇ, ನಾಯಕತ್ವ ಬದಲಾವಣೆಗೆ ಕಾಲವೇ ಉತ್ತರ ನೀಡಲಿದೆ ಎಂದು ಮಾರ್ಮಿಕವಾಗಿ ನುಡಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆಗೆ ಮುಖ್ಯಮಂತ್ರಿ ಉತ್ತರದ ವೇಳೆ ಪ್ರತಿಪಕ್ಷ ಸದಸ್ಯರಿಂದ ಪ್ರಸ್ತಾಪವಾದ ವಿಷಯಕ್ಕೆ ಸಂಬಂಧಿಸಿದಂತೆ ಸಮಜಾಯಿಷಿ ನೀಡಿದ ಅವರು, ಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಎಲ್ಲಾ 139 ಮಂದಿ ಶಾಸಕರು ತಮ್ಮ ಪರವಾಗಿದ್ದಾರೆ. ನಮ್ಮಲ್ಲಿ ಯಾವುದೇ ಬಣಗಳು ಇಲ್ಲ ಎಂದರು.

ವಿದ್ಯಾರ್ಥಿ ದೆಸೆಯಿಂದಲೂ ರಾಜಕೀಯ ಚಟುವಟಿಕೆಯಲ್ಲಿ ಗುರುತಿಸಿಕೊಂಡು ಬಂದಿರುವ ನನಗೆ ಅತ್ಯಂತ ಕಿರಿಯ ವಯಸ್ಸಿನಲ್ಲೇ ವಿಧಾನಸಭೆಗೆ ಸ್ಪರ್ಧಿಸಲು ಪಕ್ಷ ಟಿಕೆಟ್ ನೀಡಿತು. ಸುದೀರ್ಘ ಅವಧಿಗೆ ಶಾಸಕನಾಗಿದ್ದೇನೆ. ರಾಜಕಾರಣದಲ್ಲಿ ಎಲ್ಲ ರೀತಿಯ ಏಳು ಬೀಳುಗಳನ್ನು ಅನುಭವಿಸಿದ್ದೇನೆ, ಜೈಲಿಗೆ ಹೋಗಿ ಬಂದಿದ್ದೇನೆ, ಇಲ್ಲಿ ಯಾವುದೂ ಶಾಶ್ವತ ಅಲ್ಲ.

ಅಧಿಕಾರಕ್ಕೆ ಬರುವ ಮುನ್ನ ನಾನು ಹಾಗೂ ಮುಖ್ಯಮಂತ್ರಿ ರಾಜ್ಯದ ಜನತೆಗೆ ಭರವಸೆಗಳನ್ನು ನೀಡಿದ್ದೇವೆ. ಅವುಗಳನ್ನು ಈಡೇರಿಸಲು ನಾವಿಬ್ಬರು ಜೊತೆಯಾಗಿ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ಸಂಶಯಗಳಿಗೆ ಅವಕಾಶವಿಲ್ಲ.

ನಾಯಕತ್ವ ವಿಚಾರ ಕುರಿತು ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಹಲವರ ಪ್ರಶ್ನೆಗಳ ಬಗ್ಗೆ ಪ್ರಸ್ತಾವಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಪಕ್ಕದಲ್ಲಿ ಕುಳಿತಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ದೇಶಿಸಿ ಉತ್ತರಿಸಲು ಮುಂದಾದರು. ತಕ್ಷಣವೇ ಪ್ರತಿಕ್ರಿಯಿಸಿದ ಶಿವಕುಮಾರ್, ಇದಕ್ಕೆ ಕಾಲವೇ ಉತ್ತರ ನೀಡಲಿದೆ ಎಂದು ರಾಜಕೀಯ ಚರ್ಚೆಗೆ ನಾಂದಿ ಹಾಡಿದರು. ■ 6ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಪ್ರಸಾದ ಕಾಮಗಾರಿ; ಫೆ.13ರಂದು ಹೈಕೋರ್ಟ್‌ನಲ್ಲಿ ವಿಚಾರಣೆ

ದೇವಾಲಯದ ಪಾರಂಪರಿಕತೆಗೆ ಧಕ್ಕೆಯಾಗುವ ಬಗ್ಗೆ ದಾಖಲಾತಿ ಸಲ್ಲಿಸಲು ತಯಾರಿ





ಮೈಸೂರು, ಫೆ.2(ಬಿಎಲ್‌ಯು)– ಕೇಂದ್ರ ಸರ್ಕಾರದ 'ಪ್ರಸಾದ' ಯೋಜನೆ ಕಾಮಗಾರಿಯಿಂದ ಚಾಮುಂಡೇಶ್ವರಿ ದೇವಸ್ಥಾನ ಸಂರಕ್ಷಣೆ ಹಾಗೂ ಪಾರಂಪರಿಕತೆಗೆ ಧಕ್ಕೆ ಆಗುತ್ತಿರುವ ಬಗ್ಗೆ ಹೈಕೋರ್ಟ್‌ಗೆ ಅಗತ್ಯ ದಾಖಲಾತಿ ಸಲ್ಲಿಸಲು ಹಿಂದೂಪರ ಸಾಮಾಜಿಕ ಹೋರಾಟಗಾರರು ತಯಾರಿ ನಡೆಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಹಿಂದೂಪರ ಸಾಮಾಜಿಕ ಹೋರಾಟಗಾರ ಲೋಹಿತ್ ಅರಸ್, 'ಪ್ರಸಾದ' ಯೋಜನೆ ಕುರಿತಂತೆ ಫೆ.13ರಂದು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ ಎಂದರು.

'ಪ್ರಸಾದ' ಯೋಜನೆ ಕಾಮಗಾರಿ ಕುರಿತಂತೆ ಸಮಗ್ರ ದಾಖಲಾತಿ ಸಲ್ಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಇದೇ ವೇಳೆ 'ಪ್ರಸಾದ' ಯೋಜನೆ ಪ್ರಶ್ನಿಸಿ, ಅರ್ಜಿ ಸಲ್ಲಿಸಿರುವ ಪ್ರಮೋದಾದೇವಿ ಒಡೆಯರ್, ಈ ಯೋಜನೆಯಿಂದ ದೇವಸ್ಥಾನಕ್ಕೆ ಯಾವ ರೀತಿ ತೊಂದರೆ ಆಗಲಿದೆ ಎಂಬ ಬಗ್ಗೆ ಕೆಲವು ದಾಖಲಾತಿ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ದೇವಸ್ಥಾನದ ಸಂರಕ್ಷಣೆ ಹಾಗೂ ಪಾರಂಪರಿಕತೆಗೆ ಧಕ್ಕೆ ಆಗುತ್ತಿರುವ ಬಗ್ಗೆ ದಾಖಲಾತಿಗಳ ನೀಡುವಂತೆ ಪ್ರಮೋದಾದೇವಿ ಒಡೆಯರ್ ಹೇಳಿದ್ದಾರೆ. ಈ ನಿಟ್ಟಿನಲ್ಲಿ ನಾವು ದಾಖಲಾತಿ ಸಂಗ್ರಹದಲ್ಲಿ ತೊಡಗಿದ್ದೇವೆ ಎಂದರು.

'ಪ್ರಸಾದ' ಯೋಜನೆಯಡಿ ಕಾಮಗಾರಿ ಕೈಗೊಳ್ಳಲು ಪ್ರಮುಖವಾಗಿ ಪ್ರಾಚ್ಯವಸ್ತು ಇಲಾಖೆಯಿಂದ ಅನುಮತಿ ಪಡೆಯಬೇಕು. ಚಾಮುಂಡಿಬೆಟ್ಟ ಅರಣ್ಯದಿಂದ ಆವೃತ್ತವಾಗಿ ಪ್ರಾಣಿ–ಪಕ್ಷಿಗಳ ವಾಸಸ್ಥಾನವಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯಿಂದ ಕೂಡ ಸಮ್ಮತಿ ಪಡೆಯಬೇಕು. ಆದರೆ ಇದ್ಯಾವುದೇ ನಿಯಮವನ್ನು ಜಿಲ್ಲಾಡಳಿತ ಪಾಲಿಸಿಲ್ಲ ಎಂಬ ಬಗ್ಗೆ ದಾಖಲಾತಿಯನ್ನು ಪ್ರಮೋದಾದೇವಿ ಒಡೆಯರ್ ಮೂಲಕ ಹೈಕೋರ್ಟ್‌ಗೆ ಸಲ್ಲಿಸುತ್ತೇವೆ ಎಂದು ಮಾಹಿತಿ ನೀಡಿದರು.

ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಗೋಪುರ ನಿರ್ಮಿಸುವಾಗ ಸುತ್ತಲೂ ತಡೆಗೋಡೆ ನಿರ್ಮಾಣ ಮಾಡಲಾಗಿದೆ. ದೇವಸ್ಥಾನ ಮತ್ತು ಗೋಪುರದ ಅಡಿಪಾಯ ಗಟ್ಟಿಯಾಗಿ ನಿಲ್ಲಲು ಅದರೊಳಗೆ ಕಲ್ಲು ಮಣ್ಣು ತುಂಬಲಾಗಿದೆ. ಈಗ 'ಪ್ರಸಾದ' ಯೋಜನೆ ಕಾಮಗಾರಿ ನಡೆಸಿದರೆ ದೇವಾಲಯ ಹಾಗೂ ಗೋಪುರ ಸಡಿಲಗೊಳ್ಳುತ್ತದೆ ಎಂಬ ವಿಚಾರವನ್ನು ಹಳೆಯ ದಾಖಲಾತಿ, ಛಾಯಾಚಿತ್ರಸಹಿತ ಕೋರ್ಟ್‌ಗೆ ಸಲ್ಲಿಸುತ್ತೇವೆಂದು ಲೋಹಿತ್ ಅರಸ್ ತಿಳಿಸಿದರು.

ದೇವಸ್ಥಾನ, ಗೋಪುರ, ಪರಿಸರಕ್ಕೆ ಧಕ್ಕೆಯಾಗದಂತೆ ಕಾಮಗಾರಿ ನಡೆಸಿ

'ಪ್ರಸಾದ' ಕಾಮಗಾರಿಯಿಂದ ಚಾಮುಂಡೇಶ್ವರಿ ದೇವಸ್ಥಾನ, ಗೋಪುರ ಹಾಗೂ ಸುತ್ತಮುತ್ತಲಿನ ಪರಿಸರಕ್ಕೆ ಯಾವುದೇ ರೀತಿ ಧಕ್ಕೆ ಆಗಬಾರದು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ದೇವಸ್ಥಾನ ನಿರ್ಮಾಣ ಮಾಡುವಾಗ ಸುತ್ತಲೂ ತಡೆಗೋಡೆ ನಿರ್ಮಿಸಲಾಗಿದೆ. ದೇವಸ್ಥಾನ ಹಾಗೂ ಗೋಪುರ ಸುರಕ್ಷತೆಗೆ ತಡೆಗೋಡೆಯೊಳಗೆ ಮಣ್ಣು, ಕಲ್ಲು ತುಂಬಿ ಸಮತಟ್ಟು ಮಾಡಲಾಗಿದೆ. ಆದರೆ ಈಗ ಜೆಸಿಬಿಯಿಂದ ರಸ್ತೆ ಅಗೆದು ಅಲ್ಲಿರುವ ಮಣ್ಣು, ಕಲ್ಲು ತೆಗೆದು ದೇವಸ್ಥಾನದ ಹಾಗೂ ಗೋಪುರದ ಅಸ್ತಿತ್ವಕ್ಕೆ ಧಕ್ಕೆ ತರಬಾರದು. ಈ ಸಂಬಂಧ ಕೇಂದ್ರ ಸರ್ಕಾರದ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸುತ್ತೇನೆ. –ಯದುವೀರ್ ಒಡೆಯರ್, ಸಂಸದ, ಮೈಸೂರು–ಕೊಡಗು

ರೈತರಿಗೆ ನೀಡಿದ ಪರಿಹಾರದಲ್ಲಿ ಭಾರೀ ಅಕ್ರಮ



ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಮಿ ಕಳೆದುಕೊಂಡ ನೈಜ ರೈತರಿಗೆ ಪರಿಹಾರ ಪಾವತಿಸುವಂತೆ ಒತ್ತಾಯಿಸಿ ಸೋಮವಾರ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಫೆ.2(ಜಿಎ)–ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಎಕ್ಸ್‌ಗ್ರೇಷಿಯ ಪಾವತಿಸಲು ಬಿಡುಗಡೆ ಮಾಡಿರುವ ಹಣ ವಿತರಣೆಯಲ್ಲಿ ಅಕ್ರಮವಾಗಿದ್ದು, ತನಿಖೆ ನಡೆಸಿ, ನೈಜ ರೈತರಿಗೆ ಪರಿಹಾರ ಪಾವತಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಜಮಾವಣೆಗೊಂಡ ನೂರಾರು ರೈತರು ವೃತ್ತದ ಸುತ್ತಲೂ ಮಾನವ ಸರಪಳಿ ನಿರ್ಮಿಸಿ, ಪ್ರತಿಭಟನೆ ಮಾಡಿದರು. ನಂತರ ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಕೆಐಎಡಿಬಿ ಕಚೇರಿವರೆಗೆ ಮೆರವಣಿಗೆ ನಡೆಸಿ, ಬಳಿಕ ಕಚೇರಿ ಮುಂಭಾಗ ಸಮಾವೇಶಗೊಂಡು ಪ್ರತಿಭಟನೆ ನಡೆಸಿ ಬೇಡಿಕೆ ಈಡೇರಿಕೆಗೆ ಘೋಷಣೆ ಕೂಗಿದರು.

ನಂಜನಗೂಡು ತಾಲೂಕಿನ, ಇಮ್ಮಾವು ಗ್ರಾಮದ ಸರ್ವೆ ನಂ.390ರಿಂದ 430 ರವರೆಗಿನ ಜಮೀನುಗಳು, ಅಡಕನಹಳ್ಳಿ, ತಾಂಡವಪುರ ಗ್ರಾಮದ ಸ.ನಂಗಳನ್ನು ಸೇರಿಸಿ ಒಟ್ಟು 1123.08 ಎಕರೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರು.

ಈ ಸ್ವಾಧೀನದ ವಿಸ್ತೀರ್ಣದಲ್ಲಿ ಫಿಲಂ ಸಿಟಿ ನಿರ್ಮಾಣಕ್ಕಾಗಿಯೂ ಜಾಗ ನೀಡಲಾಗಿದೆ. ಸ್ವಾಧೀನಪಡಿಸಿಕೊಳ್ಳಲಾದ ವಿಸ್ತೀರ್ಣದ ಪೈಕಿ ಇಮ್ಮಾವು ಗ್ರಾಮದ ಸರ್ವೆ ನಂನ ಇಮ್ಮಾವು ಹುಂಡಿ, ಅಡಕನಹಳ್ಳಿಹುಂಡಿ ಗ್ರಾಮದ 700 ರೈತ ಕುಟುಂಬಗಳು, ಕಳೆದ 70–80 ವರ್ಷಗಳಿಂದ ಬೇಸಾಯ ಮಾಡುತ್ತಾ ಗೇಣಿ ಅರ್ಜಿಯನ್ನೂ ಸಲ್ಲಿಸಿದ್ದಾರೆ. ಈ ರೈತರಿಗೆ ಪರಿಹಾರ ದೊರೆಯದ ಕಾರಣ ನಡೆಸಿದ ಹೋರಾಟದ ಫಲವಾಗಿ ಅನಧಿಕೃತ ಸಾಗುವಳಿ ಹೊಂದಿದ್ದ ರೈತರಿಗೆ ತಲಾ 4 ಲಕ್ಷ ರೂ. ಎಕ್ಸ್‌ಗ್ರೇಷಿಯ ನೀಡಲು 18 ಕೋಟಿ ರೂಗಳನ್ನು ಜಿಲ್ಲಾಧಿಕಾರಿಗಳ ಮೂಲಕ ನಂಜನಗೂಡು ತಹಸೀಲ್ದಾರ್‌ಗೆ ನೀಡಲಾಗಿದೆ. ಆದರೆ, ಪರಿಹಾರವನ್ನು ನೈಜ ರೈತರಿಗೆ ನೀಡದೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಬೇರೆ ಬೇರೆ ತಾಲೂಕಿನಲ್ಲಿರುವ ರೈತರಿಗೆ ನೀಡಿದ್ದು, ಭಾರೀ ಭ್ರಷ್ಟಾಚಾರ, ಅಕ್ರಮ ನಡೆದಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವ ರಾಜು, ಜಿಲ್ಲಾಧ್ಯಕ್ಷ ಹೊಸೂರು ಬಸವರಾಜು, ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಶಿರಮಳ್ಳಿ ಸಿದ್ದಪ್ಪ, ಹೆಜ್ಜಿಗೆ ಪ್ರಕಾಶ್, ಪ್ರೇಮ್‌ರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ತನಿಖೆ ನಡೆಸಿ ನ್ಯಾಯ ಕಲ್ಪಿಸುವಂತೆ ಆಗ್ರಹ

"ಎಕ್ಸ್‌ಗ್ರೇಷಿಯ ವಿತರಣೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಿ, ಈ ವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಈ ಅಕ್ರಮ, ವ್ಯವಹಾರದಲ್ಲಿ ಭಾಗಿಯಾಗಿರುವ ಎಲ್ಲರ ಮೇಲೂ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಸುಳ್ಳು ಮಾಹಿತಿ ನೀಡಿ ಪರಿಹಾರ ಪಡೆದುಕೊಂಡಿರುವವರಿಂದ ವಾಪಸ್ ವಸೂಲಿ ಮಾಡಲು ಕ್ರಮ ಜರುಗಿಸಬೇಕು. ನಿಜ ರೈತರಿಗೆ ಮಂಡಳಿಯ ತೀರ್ಮಾನದಂತೆ ಪರಿಹಾರ ಪಾವತಿಸಬೇಕು. ಕುಟುಂಬದ ಒಬ್ಬರಿಗೆ ಕೈಗಾರಿಕೆಯಲ್ಲಿ ಉದ್ಯೋಗ ದೊರಕಿಸಿಕೊಡಬೇಕು. –ಪ್ರತಿಭಟನಾಕಾರರು

ಸ್ವಚ್ಛ ಸರ್ವೇಕ್ಷಣ್ ಪ್ರಯುಕ್ತ ಪಾಲಿಕೆಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಸಪ್ರಶ್ನೆ

ಕರ್ನಾಟಕ ಪಬ್ಲಿಕ್ ಶಾಲೆ, ಮಹಾರಾಜ ಪಿಯು ಕಾಲೇಜು ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ



ಸ್ವಚ್ಛ ಸರ್ವೇಕ್ಷಣ್ ಪ್ರಯುಕ್ತ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದರು.

ಮೈಸೂರು,ಫೆ.2(ಪಿಎಂ)–ಸ್ವಚ್ಛ ಸರ್ವೇಕ್ಷಣ್ 2025–26ರ ಅಂಗವಾಗಿ ಮೈಸೂರು ಮಹಾನಗರಪಾಲಿಕೆ ಹಾಗೂ ಎಕ್ಸೆಲ್ ಪಬ್ಲಿಕ್ ಶಾಲೆ ಜಂಟಿ ಆಶ್ರಯದಲ್ಲಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ 'ಸ್ವಚ್ಛ ಮೈಸೂರು ರಸಪ್ರಶ್ನೆ' ಸ್ಪರ್ಧೆ ನಡೆಯಿತು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಇದರಲ್ಲಿ ಹಲವು ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಾಲಾ ವಿಭಾಗದಲ್ಲಿ ಕುವೆಂಪುನಗರದ ಕರ್ನಾಟಕ ಪಬ್ಲಿಕ್ ಶಾಲೆಯ ಎ.ಜಾಹ್ನವಿ ಯಾದವ್ ಮತ್ತು ಎ.ಎಸ್.ತಕ್ಷಯ್ ಪ್ರಥಮ ಬಹುಮಾನ ಪಡೆದರು. ಬೇಡನ್ ಪೋವೆಲ್ ಶಾಲೆಯ ವಿ.ಪ್ರಥಮ್, ಎಸ್.ವರ್ಣಿತಾ ದ್ವಿತೀಯ ಹಾಗೂ ಆಚಾರ್ಯ ವಿದ್ಯಾಕುಲ ಶಾಲೆಯ ಎ.ಜಿ. ದೈವಿಕ್ ಹಾಗೂ ಚಿನ್ಮಯಿ ಎ.ನಾಯಕ್ ತೃತೀಯ ಬಹುಮಾನ ಗಳಿಸಿದರು.

ಕಾಲೇಜು ವಿಭಾಗದಲ್ಲಿ ಮಹಾರಾಜ ಪಿಯು ಕಾಲೇಜಿನ ಎ.ಎಸ್.ಆದರ್ಶ್ ಮತ್ತು ಪಿ.ಹಿಮಂತ್ ಪ್ರಥಮ, ಜೆಎಸ್‌ಎಸ್ ಮಹಿಳಾ ಕಾಲೇಜು ಸರಸ್ವತಿಪುರಂನ ಡಿ.ಎಸ್. ಸಹನಾ, ಬಿ.ಕೆ.ಹರ್ಷಿತಾ ದ್ವಿತೀಯ ಹಾಗೂ ತೋಟಗಾರಿಕೆ ಮಹಾ ವಿದ್ಯಾಲಯದ ಜಿ.ಎಂ.ಮಂಜುನಾಥ್ ಮತ್ತು ಪೂಜಾರ್ ತೃತೀಯ ಬಹುಮಾನ ಪಡೆದಿದ್ದಾರೆ.

ಸ್ವಚ್ಛ ಮೈಸೂರು ಸಮರ್ಥ ಮೈಸೂರಿನ ನಿರ್ಮಾಣದಲ್ಲಿ ಯುವಪೀಳಿಗೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸ್ವಚ್ಛ ಭಾರತ್ ಮಿಷನ್ ನೋಡಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ, ನಗರಪಾಲಿಕೆ ಸಹಾಯಕ ಕಾರ್ಯ ಪಾಲಕ ಅಭಿಯಂತರರಾದ ಎಸ್.ಮೀನಾಕ್ಷಿ ಸೇರಿದಂತೆ ವಲಯ ಆಯುಕ್ತರು, ಪರಿಸರ ಅಭಿಯಂತರರು, ಸಮುದಾಯ ಸಂಘಟಕರು, ಆರೋಗ್ಯ ನಿರೀಕ್ಷಕರು, ಶಿಕ್ಷಕರು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾಜಿ ಶಾಸಕರು, ಅವಲಂಬಿತ ಕುಟುಂಬದವರು ಪಡೆಯುತ್ತಿರುವ ನಿವೃತ್ತಿ ವೇತನ

ಮೈಸೂರು, ಫೆ. 2(ಆರ್‌ಕೆ)– ಮಾಜಿ ಶಾಸಕರು ಮತ್ತು ದಿವಂಗತ ಮಾಜಿ ಶಾಸಕರ ಅವಲಂಬಿತ ಕುಟುಂಬ ಸದಸ್ಯರಿಗೆ ಸರ್ಕಾರ ನೀಡುತ್ತಿರುವ ನಿವೃತ್ತಿ ವೇತನ ಮತ್ತು ವೈದ್ಯಕೀಯ ಭತ್ಯೆ ಬಗ್ಗೆ ರಾಜ್ಯ ವಿಧಾನಸಭೆ ಸಚಿವಾಲಯವು ಮಾಹಿತಿ ನೀಡಿದೆ.

ಬಾಗಲಕೋಟೆಯ ನವನಗರ ನಿವಾಸಿ ವಿಜಯರಾವ್ ಕುಲಕರ್ಣಿ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ ಅರ್ಜಿಗೆ ಮಾಹಿತಿ ನೀಡಿರುವ ಸರ್ಕಾರದ ಅಧೀನ ಕಾರ್ಯದರ್ಶಿ ಎಲ್.ಆರ್.ಚಂದ್ರಶೇಖರ್ ಅವರು ಮಾಜಿ ಶಾಸಕರು ಮತ್ತು ದಿವಂಗತ ಮಾಜಿ ಶಾಸಕರ ಕುಟುಂಬದ ಅವಲಂಬಿತ ಸದಸ್ಯರಿಗೆ ಮಾಸಿಕ 75,000 ರೂ. ನಿವೃತ್ತಿ ವೇತನ, ಪ್ರತಿ ಹೆಚ್ಚುವರಿ 20,000 ರೂ., ವೈದ್ಯಕೀಯ ಭತ್ಯೆ 20,000 ರೂ. ಕುಟುಂಬ ನಿವೃತ್ತಿ ವೇತನ 37,500 ರೂ. ಪ್ರತಿ ಹೆಚ್ಚುವರಿ ಅವಧಿಗೆ 10,000 ರೂ. ವೈದ್ಯಕೀಯ ಭತ್ಯೆ 10,000 ರೂ. ರೈಲ್ವೆ, ವಿಮಾನ ಪ್ರಯಾಣ ಭತ್ಯೆ ವಾರ್ಷಿಕ ಎರಡು ಲಕ್ಷ ರೂ.ಗಳನ್ನು ನೀಡಲಾಗುತ್ತಿದೆ ಎಂದು ಲಿಖಿತ ರೂಪದಲ್ಲಿ ಮಾಹಿತಿ ನೀಡಲಾಗಿದೆ.

ದಲಿತ ಅಧಿಕಾರಿಗಳನ್ನು ಬೆದರಿಸುತ್ತಿರುವ ಕಾಂಗ್ರೆಸ್ ಮುಖಂಡನ ವಜಾಕ್ಕೆ ಆಗ್ರಹ



ಪುರುಷೋತ್ತಮ್

ಮೈಸೂರು, ಫೆ.2(ಜಿಎ)–ಕಾಂಗ್ರೆಸ್ ಪಕ್ಷದ ಹೆಸರನ್ನು ದುರುಪಯೋಗಪಡಿಸಿಕೊಂಡು ದಲಿತ ಅಧಿಕಾರಿಗಳನ್ನು ಹೆದರಿಸುತ್ತಿರುವ ಕಾಂಗ್ರೆಸ್ ಮುಖಂಡ ಶ್ರೀಪಾಲ್‌ರನ್ನು ಪಕ್ಷದಿಂದ ವಜಾಗೊಳಿಸುವಂತೆ ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಪಾಲ್ ಕೆಲವು ತಿಂಗಳುಗಳ ಹಿಂದೆ ಚೆಸ್ಕಾಂನ ಎಇಇ ಅನಿತಾ ಅವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಜಾತಿ ನಿಂದಿಸಿದ ಹಿನ್ನೆಲೆಯಲ್ಲಿ 11 ದಿನ ಜೈಲಿನಲ್ಲಿ ಇದ್ದು, ಈಗ ಜಾಮೀನಿನಲ್ಲಿ ಹೊರಗೆ ಓಡಾಡುತ್ತಿದ್ದಾನೆ. ಅನಿತಾ ಅವರ ವಿಷಯ ತಿಳಿದ ತಕ್ಷಣ ಎಲ್ಲವನ್ನು ಪರಿಶೀಲಿಸಿ ಇಂದು ಅಧಿಕಾರಿ ಪರವಾಗಿ ಸುದ್ದಿಗೋಷ್ಠಿ ಮಾಡುತ್ತಿದ್ದೇನೆ ಎಂದರು.

ಈತನ ವಿರುದ್ಧ ಈಗಾಗಲೇ 9 ಠಾಣೆಗಳಲ್ಲಿ ದೂರು ದಾಖಲಾಗಿದೆ. ಯಾವುದೋ ಒಂದು ಪ್ರಕರಣದಲ್ಲಿ ಶಿಕ್ಷೆಯೂ ಆಗಿದೆ. ಚೆಸ್ಕಾಂ ಗುತ್ತಿಗೆದಾರನಾಗಿರುವುದರಿಂದ ಅಧಿಕಾರಿಗಳ ಬಳಿ ಹೋಗಿ ದಬ್ಬಾಳಿಕೆ ಮಾಡುತ್ತಿದ್ದಾನೆ. ಈ ನಡುವೆ ದಲಿತ ಸಮುದಾಯದ ಅಧಿಕಾರಿಗಳನ್ನು ಟಾರ್ಗೆಟ್ ಮಾಡಿ ನಿಂದಿಸುತ್ತಿದ್ದಾನೆ. ಇದು ಮುಂದುವರೆದರೆ ಇಡೀ ದಲಿತ ಸಮುದಾಯವೇ ಬುದ್ಧಿ ಕಲಿಸಲಿದೆ ಎಂದು ತಿಳಿಸಿದರು.

ಶ್ರೀಪಾಲ್ ಕಾಂಗ್ರೆಸ್ ಪಕ್ಷದ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದರಿಂದ ಮೈಸೂರು ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಹಾಗೂ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಕ್ಷಣ ಪಕ್ಷದಿಂದ ವಜಾ ಮಾಡಿ ಎಂದ ಅವರು, ಚೆಸ್ಕಾಂನ ಎಂಡಿಯೂ ಸಹ ಗುತ್ತಿಗೆಯನ್ನು ರದ್ದುಗೊಳಿಸಿ, ಇಲ್ಲವಾದರೆ ನಿಮ್ಮ ಕಚೇರಿ ಮುಂದೆ ಪ್ರತಿಭಟನೆ ಮಾಡುತ್ತೇವೆ ಎಂದು ತಿಳಿಸಿ ಎಚ್ಚರಿಕೆ ನೀಡಿದರು.

ಪ್ರೊ. ಭಾಷ್ಯಂ ಸ್ವಾಮೀಜಿಗೆ ಅಭಿನಂದನೆ



ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತ ಮೈಸೂರಿನ ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿಯವರನ್ನು ಯದುಗಿರಿ ಯತಿರಾಜ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕೆ.ಆರ್.ಯೋಗಾನರಸಿಂಹನ್, ಎನ್.ಶ್ರೀನಿವಾಸನ್, ಪುರೋಹಿತ ವೀರರಾಘವನ್, ಎಸ್.ಕುಮಾರ್, ಗಿರೀಶ್ ಮತ್ತಿತರರಿದ್ದರು.

ಶಾಲಾ ಬ್ಯಾಗ್ ವಿತರಣೆ...




ಮೈಸೂರು ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂತನ ಸ್ವಾಗತ ಕಮಾನು ಉದ್ಘಾಟಿಸಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಶಾಲಾ ಬ್ಯಾಗ್ ವಿತರಿಸಿದರು. ಈ ವೇಳೆ ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಮುಖಂಡರು ಇದ್ದರು.

ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ...



ಜಯಪುರ ಹೋಬಳಿಯ ದೊಡ್ಡಕಾಟೂರಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ಫ್ರೆಂಡ್ಸ್ ಕ್ಲಬ್, ಟಿಪ್ಪು ಟೈಗರ್ಸ್ ವತಿಯಿಂದ ಆಯೋಜಿಸಿದ್ದ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಲ್ಲಹಳ್ಳಿ ತಂಡ ವಿಜೇತಗೊಂಡಿತು. ಉದ್ಬೂರು ತಂಡ ರನ್ನರ್ ಅಪ್ ಸ್ಥಾನ ಪಡೆಯಿತು. ವಿಜೇತ ತಂಡಕ್ಕೆ ಉದ್ಯಮಿ, ಹೆಚ್‌ಎಂಐ ಫ್ರೂಟ್ಸ್ ಮಾಲೀಕ ಮೋಹಿಯುದ್ದಿನ್ 30 ಸಾವಿರ ನಗದು ಬಹುಮಾನ ನೀಡಿದರು. ದೂರ ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಜಬೀನತಾಜ್, ರಾಜಮ್ಮ, ಪುಟ್ಟಮಾದಮ್ಮ, ಸಲೀಂ, ಸುಹೈಲ್, ಅಜ್ಮಲ್, ಅಕ್ಮಲ್, ಫಾರೂಕ್ ಅಲಿ, ರಿಯಾಜ್ ಅಹಮದ್, ಮಹಮ್ಮದ್ ಅಜರುದ್ದೀನ್, ಮೌಲಾನಾ ಅಸ್ಲಾಂ ರಶೀದಿ, ಮಹಮ್ಮದ್ ಹತಿಂ ಷರೀಫ್ ಇನ್ನಿತರರಿದ್ದರು.

ಅಬ್ದುಲ್ ರೆಹಮಾನ್ ನಿಧನ



ಮೈಸೂರು,ಫೆ.2–ಮೈಸೂರಿನ ಉದಯಗಿರಿ ನಿವಾಸಿ ಹಾಗೂ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಅಬ್ದುಲ್ ರೆಹಮಾನ್ (62) ಫೆ.1ರಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, 7 ಮಂದಿ ಸಹೋದರರು, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇಂದು (ಫೆ.2) ಬೆಳಗ್ಗೆ 10.30ಕ್ಕೆ ಪ್ರಾರ್ಥನೆಯೊಂದಿಗೆ ನಂತರ ಮೈಸೂರು–ಬೆಂಗಳೂರು ಹೈವೇ ಟಿಪ್ಪು ಸರ್ಕಲ್ ಹಿಂಭಾಗದ ಮುಸ್ಲಿಮರ ರುದ್ರಭೂಮಿ ಗೇಟ್ ನಂ.8ರಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.2.2026 ಮಂಗಳವಾರ, ಮಳೆ ನಕ್ಷತ್ರ: ಶ್ರವಣ 24.01.2026ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಕಾವೇರಿ ಆಯುರ್ವೇದ ಆಸ್ಪತ್ರೆ** : ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.
- **ಸುಯೋಗ್ ಆಸ್ಪತ್ರೆ** : ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣ ನಗರ, ಬೆಳಗ್ಗೆ 10 ರಿಂದ.
- **ದೇವರಾಜ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜು** : ಸಮಾರೋಪ ಸಮಾರಂಭ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ವಾರ್ಷಿಕ ಸಂಚಿಕೆ ಬಿಡುಗಡೆ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಶ್ರೀಮತಿ ಎಂ.ಪಿ. ನಾಗಮ್ಮ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪನಿರ್ದೇಶಕಿ ಶ್ರೀಮತಿ ಹೆಚ್.ಎಸ್. ಗಿರಿಜಾಂಬ, ನಗರ ಪಾಲಿಕೆ ಮಾಜಿ ಸದಸ್ಯ ಡಿ. ನಾಗಭೂಷಣ್, ವಿಶ್ರಾಂತ ಪ್ರಾಚಾರ್ಯ ರಾಮೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ.ಜಿ. ರಮಾನಂದ, ಸ್ಥಳ: ರಾಷ್ಟ್ರಕವಿ ಕುವೆಂಪು ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಮಹಾರಾಜ ಕಾಲೇಜು** : ರೂಸಾ 2.0 ಪ್ರಾಯೋಜಿತ ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ಕೌಶಲ್ಯಗಳ ಬಗ್ಗೆ ಉಪನ್ಯಾಸ ಮಾಲಿಕೆ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಉಪಸ್ಥಿತರು : ಕುಲಸಚಿವ ಪ್ರೊ. ಎನ್. ನಾಗರಾಜ, ಬಿಮ್ಸ್ ಅಧ್ಯಕ್ಷ ಪ್ರೊ. ಮಹೇಶ್, ಸ್ಥಳ: ಶತಮಾನೋತ್ಸವ ಸಭಾಂಗಣ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ** : ಮಧ್ವ–ಪುರಂದರ ನಮನ, ಗಾನಸಿರಿ ವೇದಾಂತ ಲಹರಿ ಭಾಗ– 13ರ ಅಂಗವಾಗಿ 'ಮತ್ಸ್ಯಪುರಾಣ ಮತ್ತು ಬ್ರಾಹ್ಮಪುರಾಣ', ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ (ಎಸ್‌ಎನ್‌ಪಿಎಸಿ), ಮೈಸೂರು**: ಮಂಜೀರ ಮಹೋತ್ಸವ (ಭಾರತೀಯ ಕಲೆಗಳ ಸಂಭ್ರಮ) ಸಂಜೆ 6 ರಿಂದ ಹುಬ್ಬಳ್ಳಿಯ ವಿದ್ವಾನ್ ಸುಜಯ್ ಶಾನ್‌ಬಾಗ್ ಮತ್ತು ಅವರ ಶಿಷ್ಯರಿಂದ ಕಾರ್ಯಕ್ರಮ, ಸಂಜೆ 7.30 ರಿಂದ ಬೆಂಗಳೂರಿನ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಅವರ ಶಿಷ್ಯೆ ವಿದುಷಿ ಕಾವ್ಯ ಕಾಸಿನಾಥನ್ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.
- **ಸಂಚಲನ (ಮೈಸೂರು), ಅರಳಿ ಸೇವಾಟ್ರಸ್ಟ್ (ಬೆಂಗಳೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ಸಂಚಲನ ದಶಮಾನೋತ್ಸವ–ರಂಗ ಸಂಭ್ರಮ, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು : ಬಿಜಿಎಸ್, ಬಿ.ಇಡಿ ಕಾಲೇಜು ಪ್ರಿನ್ಸಿಪಾಲ್ ಡಾ. ನಾಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಮಾಜ ಸೇವಕ ಅಹಿಂದ ಜವರಪ್ಪ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಮಾಜಿ ಅಧ್ಯಕ್ಷ ಸುರೇಶ್ ಬಾಬು, ಮಹಾಜನ ಪ್ರಥಮ ದರ್ಜೆ ಕಾಲೇಜು ಸಾರಂತ ಅಭಿನಯಿಸುವ 'ಊರ ಸುಟ್ಟರೂ ಹನುಮಪ್ಪ ಹೊರಗ' ನಾಟಕ ಪ್ರದರ್ಶನ, ರಚನೆ : ಹನುಮಂತ ಹಾಲಿಗೇರಿ, ಬೆಳಕು : ಮಧು ಮಳವಳ್ಳಿ, ಸಂಗೀತ : ಚಿಂತನ್ ವಿಕಾಸ್ ಜಿ. ಮತ್ತು ಜನಾರ್ಧನ್ ಎಚ್. (ಜನ್ನಿ), ನಿರ್ದೇಶನ : ಕೆ.ಆರ್. ಸುಮತಿ; ಸಂಜೆ 6ರಿಂದ ಸಭಾ ಕಾರ್ಯಕ್ರಮ, ಉಪಸ್ಥಿತರು : ಪ್ರಾಧ್ಯಾಪಕ ಪ್ರಸನ್ನ ಕೆರಗೋಡು, ಮಾಜಿ ಸಿಂಡಿಕೇಟ್ ಸದಸ್ಯ ಇ.ಸಿ. ನಿಂಗರಾಜ್‌ಗೌಡ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಡಾ. ಎಂ. ಜಾಹೀದ್, ಕಲಾವಿದೆ ಡಾ. ಸುಜಾತ ಅಕ್ಕಿ, ನಮ್ಮ ರಾಗ ತಂಡದಿಂದ ರಂಗಗೀತೆಗಳು, ಸಂಚಲನ ಮೈಸೂರು ರಂಗ ತಂಡದಿಂದ 'ಹರಕೆಯ ಕುರಿ' ನಾಟಕ ಪ್ರದರ್ಶನ, ರಚನೆ : ಡಾ. ಚಂದ್ರಶೇಖರ ಕಂಬಾರ, ಸಂಗೀತ : ದಿಗ್ವಿಜಯ ಹೆಗ್ಗೋಡು, ಬೆಳಕು : ಜೀವನ್ ಕುಮಾರ್ ಬಿ. ಹೆಗ್ಗೋಡು, ನಿರ್ದೇಶನ : ದೀಪಕ್ ಮೈಸೂರು, ಸ್ಥಳ: ಕಿರುರಂಗ ಮಂದಿರ, ಸಂಜೆ 6 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ರೋಹಿಣಿ ಸುಧಾಂ ಹಾಗೂ ಹಂಸಿನಿ ಎಸ್. ಕುಮಾರ್, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆಎಸ್‌ಓಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಭೂಗೋಳ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ವೈ.ಪಿ. ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಅಮೃತಾ ವೆಂಕಟೇಶ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ. ಪ್ರಸ್ತುತಿ: ಆರ್.ಲೋಕೇಶ್ವರಿ, ಬಿ.ಜಿ.ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ : 2025 ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲೂಕು, ಯಾಚೇನಹಳ್ಳಿಯ ಸೋಬಾನೆ ಕಲಾವಿದೆ ಚೆನ್ನಾಜಮ್ಮ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್ ಬಿ, 12.35 ದೇವರನಾಮ–ವೈಷ್ಣವ ದತ್ತ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಹತಿ ಟಿ. ಭಾರ್ಗವಪುರಿ–ವೈಯೋಲಿನ್ ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಸೀತಾ ಕಲ್ಯಾಣ. ಪ್ರಸ್ತುತಿ–ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಡಾ. ಸುಷ್ಮಾ ಕೃಷ್ಣಮೂರ್ತಿ, ವಿಷಯ–ಸ್ತನ ಕ್ಯಾನ್ಸರ್ ಕಾರಣಗಳು ಹಾಗೂ ಪರಿಹಾರ, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.15 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 6.50 ಕೃಷಿರಂಗ– ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಬಯೋ ಫ್ಲಾಕ್ ತಂತ್ರಜ್ಞಾನದ ಮೂಲಕ ಮೀನು ಸಾಕಾಣಿಕೆ ಈ ಕುರಿತು ಟಿ. ನರಸೀಪುರ ತಾಲೂಕು ಕೊಡಗಹಳ್ಳಿಯ ಕಿರಣ್ ಕುಮಾರ್ ಕೊಡಗಹಳ್ಳಿ ಶಿವ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ನಾಟಕ – ಊರ್ಮಿಳ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀರಾಮ್ ಭಟ್ – ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಕ್ರೈಂ ಬಾಕ್ಸ್

ನಕಲಿ ಚಿನ್ನಾಭರಣ ಗಿರವಿ ಇಟ್ಟು ಬ್ಯಾಂಕ್‌ಗೆ 56.78 ಲಕ್ಷ ವಂಚನೆ

ಮೌಲ್ಯಮಾಪಕ ಸೇರಿ 7 ಮಂದಿ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಫೆ. 2(ಆರ್‌ಕೆ, ಎಂಕೆ)– ನಕಲಿ ಚಿನ್ನಾಭರಣ ಗಿರವಿ ಇಟ್ಟು ಮರ್ಕಂಟೈಲ್ ಬ್ಯಾಂಕ್‌ನಿಂದ 56.78 ಲಕ್ಷ ರೂ. ಸಾಲ ಪಡೆದು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ.

ಮೈಸೂರಿನ ಅಬ್ದುಲ್ ಜಮೀಲ್, ಮಂಡ್ಯದ ಸಾಗರ್, ರವಿಕುಮಾರ್, ಪುಟ್ಟರಾಜು, ರವಿಕುಮಾರ್, ಪತ್ನಿ ದಿವ್ಯ, ಬೆಂಗಳೂರಿನ ನಾಗರತ್ನ ರೆಡ್ಡಿ ಹಾಗೂ ಬ್ಯಾಂಕ್ ಅಪ್ರೈಸರ್ (ಮೌಲ್ಯ ಮಾಪಕ) ರವೀಂದ್ರಕುಮಾರ್ ಸೇರಿ ಬ್ಯಾಂಕಿಗೆ ನಕಲಿ ಚಿನ್ನಾಭರಣ ಗಿರವಿ ಇಟ್ಟು ವಂಚಿಸಿದವರಾಗಿದ್ದು, ಅವರ ವಿರುದ್ಧ ಮೈಸೂರಿನ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

2024ರ ಮಾರ್ಚ್ 14 ರಂದು 6 ಮಂದಿ ಆರೋಪಿಗಳು ತಮ್ಮ ಹೆಸರಿನಲ್ಲಿ 782 ಗ್ರಾಂ ಚಿನ್ನಾಭರಣವನ್ನು ತಂದು ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ತಮಿಳುನಾಡು ಮೂಲದ ಮರ್ಕಂಟೈಲ್ ಬ್ಯಾಂಕ್ ಶಾಖೆಯಲ್ಲಿ 56.78 ಲಕ್ಷ ರೂ. ಪಡೆದಿದ್ದರು. ಆ ವೇಳೆ ಟಿ.ನರಸೀಪುರ ನಿವಾಸಿಯಾದ ಮೌಲ್ಯಮಾಪಕ ರವೀಂದ್ರಕುಮಾರ್ ಆಭರಣಗಳನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಶಿಫಾರಸು ಮಾಡಿದ್ದರು.

2026ರ ಜನವರಿ 14ರಂದು ಬ್ಯಾಂಕಿನಲ್ಲಿ ಗಿರವಿ ಇರಿಸಿರುವ ಗ್ರಾಹಕರ ಚಿನ್ನಾಭರಣಗಳನ್ನು ಮರು ಮೌಲ್ಯಮಾಪನ ಪ್ರಕ್ರಿಯೆ ನಡೆಸಿದಾಗ ಗಿರವಿ ಇಟ್ಟಿದ್ದ 782 ಗ್ರಾಂ. ಆಭರಣ ಶುದ್ಧ ಚಿನ್ನವಲ್ಲ ಅದು ನಕಲಿ ಲೋಹದಿಂದ ತಯಾರಿಸಿದ್ದು ಎಂದು ತಿಳಿಯಿತು. ತಕ್ಷಣ ಬ್ಯಾಂಕ್ ಶಾಖೆ ಮುಖ್ಯಸ್ಥರಾದ ಸುರೇಶ್ ಕಣ್ಣನ್, ದೇವರಾಜ ಠಾಣೆಗೆ ದೂರು ನೀಡಿದ್ದರು. ಅದರಂತೆ ಮೌಲ್ಯಮಾಪನ ಮಾಡಿ ಸಾಲ ಮಂಜೂರಾತಿಗೆ ಶಿಫಾರಸು ಮಾಡಿದ್ದ ರವೀಂದ್ರ ಕುಮಾರ್‌ನನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ ಇನ್‌ಸ್ಪೆಕ್ಟರ್ ರಘು ಅವರು ಲಿಖಿತ ಹೇಳಿಕೆ ಪಡೆದಿದ್ದರು.

ಇದೀಗ ಅಪ್ರೈಸರ್ ಸೇರಿದಂತೆ ಎಲ್ಲಾ ಏಳು ಮಂದಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು ಅವರು ತಲೆಮರೆಸಿಕೊಂಡಿದ್ದಾರೆ. ತನಿಖೆ ಕೈಗೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಬೈಕ್ ಡಿಕ್ಕಿಯಾಗಿ ಓರ್ವ ಸಾವು

ಮೈಸೂರು,ಫೆ.2(ಆರ್‌ಕೆ)–ಬೈಕ್‌ಗಳು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಹುಣಸೂರು ತಾಲೂಕು ಅಸ್ವಾಳು ಗ್ರಾಮದಲ್ಲಿ ಸಂಭವಿಸಿದೆ. ಬಿಳಿಕೆರೆ ಹೋಬಳಿ, ಅಸ್ವಾಳು ಗ್ರಾಮದ ರಾಕೇಶ್ (36) ಸಾವನ್ನಪ್ಪಿದವರು. ಭಾನುವಾರ ಸುಮಾರು 9 ಗಂಟೆ ವೇಳೆಗೆ ಬೈಕಿನಲ್ಲಿ ಮನೆಯಿಂದ ಹೊರಗೆ ಬಂದ ರಾಕೇಶ್ ಹುಣಸೂರು ಮುಖ್ಯ ರಸ್ತೆ ತಲುಪುತ್ತಿದ್ದಂತೆಯೇ ಹುಣಸೂರು ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಭೈರಪ್ಪ ಡಿಕ್ಕಿ ಹೊಡೆದರು. ತೀವ್ರವಾಗಿ ಗಾಯಗೊಂಡ ರಾಕೇಶ್‌ನನ್ನು ಮೈಸೂರಿನ ಬೋಗಾದಿ ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಿಗ್ಗೆ ಸಾವನ್ನಪ್ಪಿದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಬಿಳಿಕೆರೆ ಪೊಲೀಸರು ತಿಳಿಸಿದ್ದಾರೆ.

ಬೀಳ್ಕೊಡುಗೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ 27 ವರ್ಷಗಳ ಕಾಲ ಸೇವೆ ಸಲ್ಲಿಸಿ, ಕೊನೆಗೆ ಶಾಖಾ ವ್ಯವಸ್ಥಾಪಕರಾಗಿ ಸೇವೆಯಿಂದ ನಿವೃತ್ತರಾದ ಕು.ಲಲಿತಾ ಅವರಿಗೆ ಬ್ಯಾಂಕ್ ವತಿಯಿಂದ ಅಭಿನಂದಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ರಾಮಕೃಷ್ಣ, ಸೋಮಣ್ಣ, ಚಂದ್ರಶೇಖರ್, ಗಿರೀಶ್ ಕಾರ್ಯದರ್ಶಿ ಹರ್ಷಿತ್‌ಗೌಡ, ಸುಬ್ಬಲಕ್ಷ್ಮೀ, ನಂದಿನಿ ಇದ್ದರು.

ಮಾಜಿ ಶಾಸಕರಿಂದ ಅನ್ನದಾನಕ್ಕೆ ಚಾಲನೆ...




ಭರತ ಹುಣ್ಣಿಮೆ ಪ್ರಯುಕ್ತ ಮೈಸೂರಿನ ರಾಮಾನುಜ ರಸ್ತೆಯ 11ನೇ ಕ್ರಾಸ್‌ನಲ್ಲಿ ಜರುಗಿದ ಶ್ರೀ ಎಲ್ಲಮ್ಮತಾಯಿ ಅಮ್ಮನವರ 22ನೇ ವರ್ಷದ ಪೂಜಾ ಮಹೋತ್ಸವದಲ್ಲಿ ಏರ್ಪಡಿಸಿದ್ದ ಅನ್ನದಾನಕ್ಕೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ಗುಡ್ಡಪ್ಪ ಮಹದೇವಣ್ಣ, ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ರವಿಕುಮಾರ್, ಸಂತೋಷ್, ಸಂಜಯ್, ಗುಣಶೇಖರ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಶೃಂಗಸಭೆ

ಸಮಾವೇಶಕ್ಕೆ ಬಂಡೀಪುರ, ನಾಗರಹೊಳೆ ಆಯ್ಕೆ

ಫೆ.9ರಿಂದ 13ರವರೆಗೆ ನಡೆಯುವ ಶೃಂಗಸಭೆಯಲ್ಲಿ 18 ದೇಶಗಳು ಭಾಗಿ





ಮೈಸೂರು,ಫೆ.2(ಬಿಎಲ್‌ಯು)– ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಶೃಂಗಸಭೆ ನಡೆಯುತ್ತಿದ್ದು, ದೇಶದಲ್ಲೇ ಅತಿ ಹೆಚ್ಚು ಹುಲಿಗಳಿರುವ ಕರ್ನಾಟಕದ ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ಶೃಂಗಸಭೆ ಜರುಗುತ್ತಿರುವುದು ವಿಶೇಷವಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ ಗ್ಲೋಬಲ್ ಬಿಗ್ ಕ್ಯಾಟ್ ಅಲಯನ್ಸ್ ಯೋಜನೆ ಘೋಷಣೆ ಮಾಡಿದ್ದಾರೆ. ಫೆಬ್ರವರಿ 9ರಿಂದ 13ರವರೆಗೆ ನಡೆಯುವ ಶೃಂಗಸಭೆಯಲ್ಲಿ ವಿಶ್ವದ 18 ದೇಶಗಳ ಪ್ರತಿನಿಧಿಗಳು, ಅರಣ್ಯಾಧಿಕಾರಿಗಳು ಹಾಗೂ ವನ್ಯಜೀವಿ ಸಂರಕ್ಷಕರು ಪಾಲ್ಗೊಳ್ಳಲಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಆಯವ್ಯಯದಲ್ಲಿ ಇದನ್ನು ಘೋಷಿಸಿದ ಬೆನ್ನಲ್ಲೆ ಸಿದ್ಧತೆಗಳು ಆರಂಭಗೊಂಡಿವೆ. ಅಂತಾರಾಷ್ಟ್ರೀಯ ಮಟ್ಟದ ಶೃಂಗಸಭೆಗೆ ಇನ್ನು ಆರು ದಿನ ಮಾತ್ರ ಬಾಕಿ ಇರುವ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯ ಅಧಿಕಾರಿಗಳು ಭರದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹಾಗೂ ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಸಂಯುಕ್ತವಾಗಿ ಈ ಕಾರ್ಯಾಗಾರ ಆಯೋಜನೆ ಮಾಡಿವೆ.

ಹುಲಿಗಳ ಸಂರಕ್ಷಣೆ ಬಗ್ಗೆ ಚರ್ಚೆ

ನಾಲ್ಕು ದಿನಗಳ ಶೃಂಗಸಭೆಯಲ್ಲಿ ಹುಲಿಗಳ ಸಂರಕ್ಷಣೆ ಕುರಿತಂತೆ ಚರ್ಚೆ ನಡೆಯಲಿದೆ. ಅದರಲ್ಲೂ ಆಧುನಿಕ ತಂತ್ರಜ್ಞಾನ ಬಳಕೆ, ಅಂತಾರಾಜ್ಯ, ಅಂತಾರಾಷ್ಟ್ರೀಯ ಸಹಕಾರ ಹಾಗೂ ಉತ್ತಮ ಕಾರ್ಯ ನಿರ್ವಹಣೆ ಕುರಿತು ಸಮಾಲೋಚನೆ ನಡೆಯಲಿದೆ. ಕರ್ನಾಟಕ, ಮಧ್ಯ ಪ್ರದೇಶ ಸೇರಿದಂತೆ ಇತರೆಡೆ ಹುಲಿ ವಾಸ ಸ್ಥಾನಗಳಲ್ಲಿ ಅಭಿವೃದ್ಧಿ ಯೋಜನೆಗಳ ನಿಯಂತ್ರಣ, ಅರಣ್ಯದಲ್ಲಿರುವ ಗಿರಿಜನರ ಪುನರ್ವಸತಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ದೇಶ–ವಿದೇಶದ ತಜ್ಞರು ತಮ್ಮ ಅಭಿಪ್ರಾಯ ದಾಖಲಿಸಲಿದ್ದಾರೆ.

ಬಂಡೀಪುರ ಅಭಯಾರಣ್ಯದಲ್ಲಿ 190 ಹುಲಿಗಳು ಹಾಗೂ ನಾಗರಹೊಳೆಯಲ್ಲಿ 175 ಹುಲಿಗಳಿವೆ. 2023ರಂದು ನಡೆದ ಹುಲಿಗಣತಿ ವೇಳೆ ಅಧಿಕೃತವಾಗಿ ಅರಣ್ಯ ಇಲಾಖೆ ಅಂಕಿ ಅಂಶ ಬಿಡುಗಡೆ ಮಾಡಿದೆ. ಇಡೀ ವಿಶ್ವದಲ್ಲೇ ಭಾರತದಲ್ಲಿ ಅತೀ ಹೆಚ್ಚು ಹುಲಿಗಳಿವೆ. ಅದರಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿದ್ದು, 600ಕ್ಕೂ ಹೆಚ್ಚು ಹುಲಿಗಳಿವೆ. ಕರ್ನಾಟಕದಲ್ಲಿ 564 ಹುಲಿಗಳಿದ್ದು, 2ನೇ ಸ್ಥಾನದಲ್ಲಿದೆ.

ಅಂತರಾಷ್ಟ್ರೀಯ ಮಟ್ಟದ ಶೃಂಗಸಭೆ ಮೊದಲ ಬಾರಿಗೆ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ನಡೆಯುತ್ತಿರುವುದು ಮಹತ್ವ ಪಡೆದಿದೆ. ದಕ್ಷಿಣ ಭಾರತದ ವನ್ಯಜೀವಿ ಸಂರಕ್ಷಣೆ ಹಾಗೂ ಅತಿ ಹೆಚ್ಚಾಗಿರುವ ಹುಲಿಗಳ ಬಗ್ಗೆ ಈ ಶೃಂಗಸಭೆಯಲ್ಲಿ ಜಾಗತಿಕ ಗಮನ ಸೆಳೆಯಲಿದೆ. ಫೆಬ್ರವರಿ 9 ಮತ್ತು 10ರಂದು ಬಂಡಿಪುರದಲ್ಲಿ ಹಾಗೂ ಫೆಬ್ರವರಿ 11 ಮತ್ತು 13ರಂದು ನಾಗರಹೊಳೆಯಲ್ಲಿ ಶೃಂಗಸಭೆ ನಡೆಯಲಿದೆ.

ಮೈಸೂರು ಅಜೀಜ್‌ಸೇಠ್ ಮುಖ್ಯ ರಸ್ತೆಗೆ ಪಾರಂಪರಿಕ ಮೆರಗು; ಇನ್ನು ಕಂಗೊಳಿಸಲಿದೆ

ಮೈಸೂರು, ಫೆ.2(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಅಜೀಜ್ ಸೇಠ್(ಮಹದೇವಪುರ) ಮುಖ್ಯರಸ್ತೆಗೆ ಪಾರಂಪರಿಕ ಮೆರಗು ನೀಡಲಾಗಿದೆ.

ಮೈಸೂರಿನ ಅತೀ ಹೆಚ್ಚು ವಾಹನ ದಟ್ಟಣೆಯ ರಸ್ತೆಗಳಲ್ಲಿ ಒಂದಾದ ಅಜೀಜ್ ಸೇಠ್ ಮುಖ್ಯ ರಸ್ತೆಯ ಅಭಿವೃದ್ಧಿಯ ಜೊತೆಗೆ ಆಕರ್ಷಣೀಯ ವಿದ್ಯುತ್ ಕಂಬಗಳ ಮೂಲಕ ಪಾರಂಪರಿಕ ಮೆರಗು ಪಡೆದುಕೊಳ್ಳುತ್ತಿದೆ.

ಮೈಸೂರು ಪಾಲಿಕೆ ವತಿಯಿಂದ ಸುಮಾರು 1 ಕೋಟಿ ರೂ.ವೆಚ್ಚದಲ್ಲಿ 105 ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳ ಅಳವಡಿಸಲಾಗಿದ್ದು, ಎಲ್‌ಇಡಿ ಬಲ್ಬ್‌ಗಳ ಜೋಡಣೆ ಕಾರ್ಯ ಭರದಿಂದ ಸಾಗಿದೆ.

ನೆಕ್ಸಸ್ ಮಾಲ್‌ನಿಂದ ಸಾತಗಳ್ಳಿ ಬಸ್ ಡಿಪೋವರೆಗಿನ 3.5 ಕಿಲೋ ಮೀಟರ್ ಅಂತರದಲ್ಲಿ ಹೊಸದಾಗಿ ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಅಳವಡಿಸುವ ಮೂಲಕ ಬಹುದಿನದ ಕತ್ತಲನ್ನು ದೂರ ಮಾಡಿದಂತಾಗಿದೆ.

ಮಧ್ಯಪ್ರದೇಶದ ಇಂದೋರ್‌ನಿಂದ ತರಿಸಲಾದ ಪಾರಂಪರಿಕ ಶೈಲಿಯ ವಿನ್ಯಾಸವುಳ್ಳ ಅಲಂಕಾರಿಕ (Decorative Electric Poles) ವಿದ್ಯುತ್ ಕಂಬಗಳು ಕಬ್ಬಿಣ ಮತ್ತು ಅಲ್ಯೂಮಿನಿಯಂನಿಂದ ತಯಾರಾಗಿದ್ದು, ನೂರಾರು ವರ್ಷ ಬಾಳಿಕೆ ಬರಲಿವೆ. ಅಲ್ಲದೆ ನಗರದ ಸೌಂದರ್ಯವನ್ನು ಹೆಚ್ಚಿಸಲು ಬಳಸುವ ಕಲಾತ್ಮಕ ಬೆಳಕಿನ ಕಂಬಗಳಾಗಿವೆ ಎಂದು ನಗರ ಪಾಲಿಕೆ ವಿದ್ಯುತ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎ.ಇ.ದೀಪಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರಸ್ತೆ ಕಾಮಗಾರಿ ವೇಳೆ ಮೊದಲಿದ್ದ ವಿದ್ಯುತ್ ಕಂಬಗಳ ಸಂಪರ್ಕ ಕಡಿತಗೊಳಿಸಿ, ಹೊಸದಾಗಿ, ಅದರಲ್ಲೂ ಪಾರಂಪರಿಕ ಶೈಲಿಯ ಅಲಂಕಾರಿಕ ಕಂಬಗಳನ್ನು ಅಳವಡಿಸಲು ನಿರ್ಧರಿಸಲಾಗಿತ್ತು. ಅದರಂತೆ ಗುತ್ತಿಗೆದಾರರಿಗೆ ಹಳೆ ಕಂಬಗಳನ್ನು ವಾಪಸ್ ಕೊಟ್ಟು, ಹೊಸದಾಗಿ ಅಲಂಕೃತ ಕಂಬಗಳನ್ನು ಅಳವಡಿಸಲಾಗಿದೆ.

ಎಲ್‌ಇಡಿ ಬಲ್ಬ್ ಅಳವಡಿಕೆ: ಈಗಾಗಲೇ ಪಾರಂಪರಿಕ ಶೈಲಿಯ ಅಲಂಕಾರಿಕ ಕಂಬಗಳನ್ನು ಅಳವಡಿಸಲಾಗಿದ್ದು, ಕಂಬಗಳಿಗೆ ಎಲ್‌ಇಡಿ ಬಲ್ಬ್ ಜೋಡಣೆ ಕಾರ್ಯ ಭರದಿಂದ ಸಾಗಿದ್ದು, ಕೆಲ ದಿನಗಳಲ್ಲಿಯೇ ಮುಕ್ತಾಯಗೊಂಡ ಡಬಲ್ ರೋಡ್‌ನಲ್ಲಿ ಬೆಳಕು ಹರಿಯಲಿದೆ ಎಂದು ತಿಳಿಸಿದರು.





ಮೈಸೂರಿನ ಅಜೀಜ್ ಸೇಠ್ ರಸ್ತೆಗೆ ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳ ಅಳವಡಿಸಿರುವುದು.

ಎಲ್‌ಇಡಿ ಬಲ್ಬ್‌ಗಳು ಪಾರಂಪರಿಕ ಶೈಲಿಯಲ್ಲಿರಲಿ...!


ಅಜೀಜ್ ಸೇಠ್ ಮುಖ್ಯರಸ್ತೆಯಲ್ಲಿ ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಅಳವಡಿಸಿ, ಸಾಮಾನ್ಯವಾಗಿ ಕಾಣುವ ಎಲ್‌ಇಡಿ ಬಲ್ಬ್‌ಗಳನ್ನು ಜೋಡಿಸಲಾಗುತ್ತಿದೆ. ಇದರಿಂದ ಕಂಬದ ಆಕರ್ಷಣೆ ಕಡಿಮೆಯಾಗುವುದಲ್ಲದೆ ಉದ್ದೇಶವೂ ಪೂರ್ಣವಾಗುವುದಿಲ್ಲ. ಹಾಗಾಗಿ ಕಂಬಗಳಿಗೆ ಹೊಂದಾಣಿಕೆಯಾಗುವಂತಹ ಪಾರಂಪರಿಕ ವಿನ್ಯಾಸವುಳ್ಳ ಎಲ್‌ಇಡಿ ಬಲ್ಬ್‌ಗಳನ್ನೇ ಅಳವಡಿಸಬೇಕು. ಹಾಗೆಯೇ ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಅಳವಡಿಸುವುದರ ಜೊತೆಗೆ ರಸ್ತೆಯ ಎರಡು ಬದಿಯಲ್ಲಿ ಫುಟ್‌ಪಾತ್, ಚರಂಡಿ, ಕುಳಿತುಕೊಳ್ಳಲು ಆಸನ ವ್ಯವಸ್ಥೆಯಾದರೆ ರಸ್ತೆಯ ಮೆರಗು ಮತ್ತಷ್ಟು ಹೆಚ್ಚಲಿದೆ. –ಸ್ಥಳೀಯ ನಿವಾಸಿಗಳು

ಕಬಡ್ಡಿ ಪಂದ್ಯಾವಳಿಗೆ ಚಾಲನೆ...



ಜಯಪುರ ಹೋಬಳಿಯ ದೊಡ್ಡಹುಂಡಿಯ ಮುರುಡ ಬಸವೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ಗ್ರಾಮೀಣ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರ, ಬೆಂಗಳೂರು ಬುಲ್ಸ್ ಕಬಡ್ಡಿ ಕ್ರೀಡಾಪಟು ರಕ್ಷಿತ್ ಚಾಲನೆ ನೀಡಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಹೆಚ್.ವಿ.ರಾಜೀವ್, ಸಮಾಜ ಸೇವಕ ಎಸ್.ಶ್ರೀಕಾಂತ್, ಮುಖಂಡರಾದ ತಾಪಂ ಮಾಜಿ ಅಧ್ಯಕ್ಷ ಸಿದ್ಧರಾಮೇಗೌಡ, ನಂಜುಂಡೇಗೌಡ, ಬಸವರಾಜು, ತಮ್ಮಡಿ ಗೌಡ, ಪುಟ್ಟಬಸವೇಗೌಡ, ಸಿಮೆಂಟ್ ಸಿದ್ದರಾಮೇಗೌಡ, ಹುಚ್ಚೇಗೌಡ, ಚಿಕ್ಕಣ್ಣ, ಕಾಳನಿಂಗೇಗೌಡ, ಅಣ್ಣಯ್ಯ, ಕೆರೆಹುಂಡಿ ಮಹೇಶ್, ಸಾಲುಂಡಿ ಚಂದ್ರು, ಬಸಪ್ಪ, ಬಸವೇಶ್ವರಸ್ವಾಮಿ ದೇವಾಲಯ ಅರ್ಚಕ ರವಿಶಾಸ್ತ್ರಿ, ಬಸವರಾಜು, ಮಂಜುನಾಥ್, ಮಂಜು, ಮಹೇಶ್, ಚಿಕ್ಕಸ್ವಾಮಿ ಇದ್ದರು.


ಪತ್ರಿಕಾ ವಿತರಕರ ಸೇವಾರತ್ನ ಪ್ರಶಸ್ತಿ ಪ್ರದಾನ



ಯೋಗಕ್ಷೇಮ ಮೀಡಿಯಾ ಪ್ರೈ ಲಿ., ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದೊಂದಿಗೆ ತುಮಕೂರಲ್ಲಿ ನಡೆದ 'ನಸುಕಿನ ನೊಗ' ನಾಟಕ ಪ್ರದರ್ಶನದಲ್ಲಿ ಮೈಸೂರಿನ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ ಅವರಿಗೆ ಪತ್ರಿಕಾ ವಿತರಕರ ಸೇವಾರತ್ನ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನದ 79ನೇ ಜಾತ್ರಾ ಮಹೋತ್ಸವ ಸಂಪನ್ನ


ಮೈಸೂರು: 79ನೇ ಜಾತ್ರಾ ಮಹೋತ್ಸವದ ಅಂಗವಾಗಿ ಮಂಡಿ ಮೊಹಲ್ಲಾದ ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನದ ಶ್ರೀ ದೇವಿಯವರ ಉತ್ಸವವನ್ನು ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು. ನಂತರ ಪ್ರಧಾನ ಅರ್ಚಕ ಎಚ್.ಎಸ್.ಸುಬ್ರಹ್ಮಣ್ಯಶಾಸ್ತ್ರಿ ಅವರ ಮಾರ್ಗದರ್ಶನದಲ್ಲಿ ದೇವಾಲಯದಲ್ಲಿ ಉಯ್ಯಾಲೋತ್ಸವ ನಡೆಯಿತು. ಸೋಮವಾರ ಬೆಳಗ್ಗೆ ದೇವಸ್ಥಾನದಲ್ಲಿ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ನಂತರ ಸಂಜೆ 7 ಗಂಟೆಗೆ ಶ್ರೀ ದೇವಿಯರನ್ನು ಉಯ್ಯಾಲೆಯಿಂದ ಕೆಳಗಿಳಿಸಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಮಾಡಲಾಯಿತು.



ಆರಿ ವರ್ಕ್ಸ್, ಜರ್ದೋಸಿ ತರಬೇತಿ

ಮೈಸೂರು,ಫೆ.2–ಮೈಸೂರಿನ ಸೇವಾಯಾನ ಟ್ರಸ್ಟ್ ವತಿಯಿಂದ 3 ತಿಂಗಳ ಆರಿ ವರ್ಕ್ಸ್ ಹಾಗೂ ಜರ್ದೋಸಿ ಕೌಶಲ್ಯಯುತ ತರಬೇತಿ ನಡೆಸಲಾಗುತ್ತಿದೆ. ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಫೆ.5 ಕಡೆಯ ದಿನಾಂಕ. ಹೆಚ್ಚಿನ ಮಾಹಿತಿಗೆ ದೂ. ಸಂ. 9945959002, 9513984848 ಸಂಪರ್ಕಿಸಬಹುದಾಗಿದೆ.

ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವುಗೆ ಹುಟ್ಟುಹಬ್ಬದ ಶುಭಾಶಯ...



ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಆಪ್ತ, ಎಪಿಎಂಸಿ ಮಾಜಿ ನಿರ್ದೇಶಕರೂ ಆದ ಶ್ರೀನಿಧಿ ಗ್ರೂಪ್ಸ್ ಮಾಲೀಕರಾದ ಕೋಟೆಹುಂಡಿ ಮಹದೇವು ಅವರ ಹುಟ್ಟುಹಬ್ಬಕ್ಕೆ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ ಮುಖಂಡರು ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ಬೃಹತ್ ಸೇಬಿನ ಹಾರ ಹಾಕಿ, ಕೇಕ್ ತಿನ್ನಿಸುವ ಮೂಲಕ ಶುಭಾಶಯ ಕೋರಿದರು. ಡಿಎಂಜಿ ಹಳ್ಳಿ ಗ್ರಾ ಪಂ ಅಧ್ಯಕ್ಷೆ ಲತಾ ಪ್ರಸನ್ನಚಾರಿ, ಉಪಾಧ್ಯಕ್ಷ ನಂದರಾಜು, ಸದಸ್ಯರಾದ ಮಾದಪ್ಪ, ಡಿ.ಬಿ.ಶಂಕರ್, ಪಿಡಬ್ಲ್ಯೂಡಿ ಗುತ್ತಿಗೆದಾರ ಬಲ್ಲಹಳ್ಳಿ ಮನುಗೌಡ, ನಾಗರಾಜು, ಬಿ.ಪುಟ್ಟೇಗೌಡ, ದೊಡ್ಡೇಗೌಡ, ಬಿ.ಸಿ.ಕುಮಾರ್, ಪಚ್ಚೇಗೌಡ, ಪುಟ್ಟಸ್ವಾಮಿ, ಶಿವಕುಮಾರ್, ಸ್ವಾಮಿ, ಪರಶಿವಮೂರ್ತಿ, ಬಲ್ಲಹಳ್ಳಿ ಮನು, ಸ್ವಾಮಿ, ಮಹಾದೇವ, ಡಿಎಂಜಿ ಹಳ್ಳಿ ಗ್ರಾಪಂ ವ್ಯಾಪ್ತಿಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಯದುವೀರ್ ವಿರುದ್ಧ ಸುಳ್ಳು ಆರೋಪ

ಮೈಸೂರು, ಫೆ.2(ಬಿಎಲ್‌ಯು)–ಮೈಸೂರಿನ ಅಭಿವೃದ್ಧಿಗಾಗಿ ಸಂಸದ ಯದುವೀರ್ ಅವರಿಗೆ ಅಗತ್ಯ ಸಹಕಾರ ನೀಡದ ರಾಜ್ಯ ಕಾಂಗ್ರೆಸ್ ಸರ್ಕಾರ ತಮ್ಮ ಪಕ್ಷದ ವಕ್ತಾರ ಎಂ.ಲಕ್ಷ್ಮಣ ಅವರಿಂದ ಸುಳ್ಳು ಆರೋಪ ಮಾಡಿಸುತ್ತಿದೆ ಎಂದು ಬಿಜೆಪಿಯ ನಗರ ಮಾಧ್ಯಮ ಸಹ ಸಂಚಾಲಕ ಸಂತೋಷ್‌ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಜನಪರ ಕೆಲಸ ಮಾಡುತ್ತಿರುವ ಯದುವೀರ್ ಅವರ ಕಾರ್ಯ ಶೈಲಿ ಸಹಿಸಲಾಗದೆ ಲಕ್ಷ್ಮಣ್ ನಿರಾಧಾರ ಆರೋಪ ಮಾಡುತ್ತಿದ್ದಾರೆ. ಇವರ ಹೇಳಿಕೆಗಳನ್ನು ಜನರು ಗಮನಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಸಂತೋಷ್‌ಕುಮಾರ್ ಎಚ್ಚರಿಸಿದ್ದಾರೆ.

ಬಿಂಬಾ ಕಲಿಕಾ ಕೇಂದ್ರದ ವಾರ್ಷಿಕೋತ್ಸವ



ಮೈಸೂರಿನ ಬಿಂಬಾ ಕಲಿಕಾ ಕೇಂದ್ರದ ವಾರ್ಷಿಕೋತ್ಸವವನ್ನು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು. ಈ ವೇಳೆ ಡಾ.ರಾಜಲಕ್ಷ್ಮಿ, ಬಿಂಬಾ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿ ಡಾ.ಪ್ರವೀಣ್ ಚೌತಿ ಮತ್ತಿತರರು ಉಪಸ್ಥಿತರಿದ್ದರು.

ಜ್ಞಾನಬುತ್ತಿ ಸಂಸ್ಥೆಯ ತರಬೇತಿ ಕಾರ್ಯಕ್ರಮ ಉದ್ಘಾಟನೆ ಇಂದು

ಮೈಸೂರು, ಫೆ.2(ಬಿಎಲ್‌ಯು)–ಮೈಸೂರಿನ ಜ್ಞಾನಬುತ್ತಿ ಸಂಸ್ಥೆಯಲ್ಲಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹಾಗೂ ಪೊಲೀಸ್ ಪೇದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ತರಗತಿಯ ಉದ್ಘಾಟನಾ ಕಾರ್ಯಕ್ರಮ ಫೆ.3ರಂದು ನಡೆಯಲಿದೆ. ನಗರದ ಲಕ್ಷ್ಮಿಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಬೆಂಗಳೂರು ಮೆಟ್ರೋ ಪಾಲಿಟನ್ ಟಾಸ್ಕ್‌ಫೋರ್ಸ್ ಎಸ್ಪಿ ಡಾ.ಗೀತಾ ಪ್ರಸನ್ನ ಉದ್ಘಾಟಿಸಲಿದ್ದಾರೆ. ಡಿಸಿಪಿ ಕೆ.ಎಸ್.ಸುಂದರ ರಾಜ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಿ.ಉದಯಕುಮಾರ್, ಅಖಿಲ ಭಾರತ ವಯಸ್ಕರ ಶಿಕ್ಷಣ ಕೌನ್ಸಿಲ್ ನಿರ್ದೇಶಕ ವೈ.ಎನ್.ಶಂಕರೇಗೌಡ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ದಲೈ ಲಾಮಾರಿಗೆ ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ

ಪ್ರಬಲ ಪೈಪೋಟಿ ನಡುವೆ ಇತಿಹಾಸ ನಿರ್ಮಿಸಿದ ಟಿಬೆಟಿಯನ್ ಧರ್ಮಗುರು



ಲಾಸ್ ಏಂಜಲೀಸ್: ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರು ನರೇಷನ್, ಸ್ಟೋರಿ ಟೆಲ್ಲಿಂಗ್ ರೆಕಾರ್ಡಿಂಗ್ ವಿಭಾಗದಲ್ಲಿ ಮೊದಲ ಗ್ರ್ಯಾಮಿ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದ್ದಾರೆ.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಫೆ.1ರಂದು ನಡೆದ 68ನೇ ವಾರ್ಷಿಕ ಗ್ರ್ಯಾಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದಲೈಲಾಮಾ ಅವರ 'ಧ್ಯಾನಗಳು: ಪರಮಪೂಜ್ಯ ದಲೈ ಲಾಮಾ ಅವರ ಪ್ರತಿಬಿಂಬಗಳು (Meditations: The Reflections of His Holiness the Dalai Lama)' ಸ್ಪೋಕನ್–ವರ್ಡ್ ಆಡಿಯೋಬುಕ್‌ಗೆ ಅತ್ಯುತ್ತಮ ಆಡಿಯೋ ಬುಕ್, ನರೇಷನ್ ಮತ್ತು ಸ್ಟೋರಿ ಟೆಲ್ಲಿಂಗ್ ರೆಕಾರ್ಡಿಂಗ್ ವಿಭಾಗದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿ ಒಲಿದಿದೆ.

ಸರೋದ್ ವಾದಕ ಉಸ್ತಾದ್ ಅಮ್ಜದ್ ಅಲಿ ಖಾನ್ ಹಾಗೂ ಇವರ ಪುತ್ರರಾದ ಅಮಾನ್ ಅಲಿ ಬಂಗಾಶ್ ಮತ್ತು ಅಯಾನ್ ಅಲಿ ಬಂಗಾಶ್ ಸಹಯೋಗದಲ್ಲಿ ಮೂಡಿಬಂದ ಈ ಆಲ್ಬಂ ಶಾಂತಿ ಮತ್ತು ಕರುಣೆಯ ಸಂದೇಶ ಸಾರುತ್ತದೆ.

ಈ ವಿಭಾಗದಲ್ಲಿ ದಲೈಲಾಮಾ ಅವರು, ಅಮೆರಿಕದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಕೆಟಾಂಜಿ ಬ್ರೌನ್ ಜಾಕ್ಸನ್, ಹಾಸ್ಯನಟ ಟ್ರೆವರ್ ನೋಹ್, ನಟಿ ಕ್ಯಾಥಿ ಗಾರ್ವರ್ ಹಾಗೂ ಫ್ಯಾಬ್ ಮೊರವನ್ ಸೇರಿದಂತೆ ಹಲವು ಪ್ರಮುಖರನ್ನು ಹಿಂದಿಕ್ಕಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಈ ಪ್ರಶಸ್ತಿಯನ್ನು ದಲೈಲಾಮಾ ಅವರ ಜೀವನ ಮತ್ತು ಸಂದೇಶಗಳಿಗೆ ದೊರೆತ ಮಹತ್ವದ ಅಂತರರಾಷ್ಟ್ರೀಯ ಮಾನ್ಯತೆಯೆಂದು ಪರಿಗಣಿಸಲಾಗಿದೆ.

ದಲೈ ಲಾಮಾ ಅವರು ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಗೈರಾಗಿದ್ದ ಕಾರಣ, ಅವರ ಪರವಾಗಿ ಗಾಯಕ–ಗೀತರಚನೆಕಾರ ರೂಫಸ್ ವೈನ್‌ರೈಟ್ ಪ್ರಶಸ್ತಿ ಸ್ವೀಕರಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ದಲೈಲಾಮಾ, ಈ ಗೌರವವನ್ನು ನಾನು ಕೃತಜ್ಞತೆ ಮತ್ತು ವಿನಯದೊಂದಿಗೆ ಸ್ವೀಕರಿಸುತ್ತೇನೆ. ಇದನ್ನು ವೈಯಕ್ತಿಕ ಸಾಧನೆಯಾಗಿ ನೋಡದೆ, ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯ ಮಾನ್ಯತೆಯಾಗಿ ನೋಡುತ್ತೇನೆ. ಶಾಂತಿ, ಕರುಣೆ, ಪರಿಸರದ ಕಾಳಜಿ ಹಾಗೂ ಮಾನವ ಕುಲದ ಏಕತೆಯ ಅರಿವು ಜನರ ಕಲ್ಯಾಣಕ್ಕೆ ಅತ್ಯಗತ್ಯ. ಈ ಗ್ರ್ಯಾಮಿ ಪ್ರಶಸ್ತಿಯು ಈ ಸಂದೇಶಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ತಲುಪಿಸಲು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

ಈ ವರ್ಷದ ಗ್ರ್ಯಾಮಿ ಪ್ರಶಸ್ತಿಗಳಲ್ಲಿ ಮೊದಲ ಬಾರಿಗೆ ಪ್ರಶಸ್ತಿ ಗೆದ್ದವರ ಪಟ್ಟಿಯಲ್ಲಿ ದಲೈ ಲಾಮಾ ಜೊತೆಗೆ ಕೆ–ಪಾಪ್(K-POP)ಕೂಡ ಸೇರಿದೆ.

ಚೀನಾ ಅಸಮಾಧಾನ: ಅಮೆರಿಕ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳು ಲಾಮಾ ಅವರನ್ನು ಅಭಿನಂದಿಸಿದರೆ ಚೀನಾ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್, ದಲೈ ಲಾಮಾ ಅವರ ಸಾಧನೆಯನ್ನು ಟೀಕಿಸಿದ್ದಾರೆ. ದಲೈ ಲಾಮಾ ಅವರು ಅಧ್ಯಾತ್ಮದ ಹೆಸರಿನಲ್ಲಿ ಟಿಬೆಟ್ ಅನ್ನು ಚೀನಾದಿಂದ ಬೇರ್ಪಡಿಸುವ ಸಂಚು ನಡೆಸುತ್ತಿದ್ದಾರೆ ಎಂದು ಪುನರುಚ್ಚರಿಸಿದ್ದಾರೆ. ಈ ಪ್ರಶಸ್ತಿಯು ಕೇವಲ ಕಲೆ ಅಥವಾ ಸಾಹಿತ್ಯಕ್ಕೆ ಸೀಮಿತವಾಗಿಲ್ಲ, ಬದಲಿಗೆ ಚೀನಾದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಮತ್ತು ಚೀನಾದ ಪ್ರತಿಷ್ಠೆಗೆ ಧಕ್ಕೆ ತರಲು ಬಳಸಿಕೊಳ್ಳಲಾಗುತ್ತಿರುವ ರಾಜಕೀಯ ಸಾಧನ ಎಂದು ಖಂಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಿಮ್ಮ : ಅಲ್ರೋ ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಲಿಲ್ಲ... ಆಗಲೇ ಇಷ್ಟು ಬೇಗ ಹೇಗೆ ಸತ್ತ?

ಗುಂಡ : ತಲೆಗೆ ವಿಷ ಏರತ್ತೇನೋ ಅಂತ ಕುತ್ತಿಗೆಗೆ ಹಗ್ಗ ಬಿಗಿದಿದ್ವಿ!

ಮೈಸೂರು ಮಿತ್ರ

ಮಂಗಳವಾರ, ಫೆಬ್ರವರಿ 3, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯತನ ಶಾಪವೋ ವರದಾನವೋ ಗೊತ್ತಿಲ್ಲ. ಆದರೆ ಕೊನೆಗೆ ಕೆಟ್ಟವನೆಂಬ ಅಪವಾದ ಸಿಗುವುದು ಮಾತ್ರ ಖಂಡಿತ.

ವೇದ ಸುಳ್ಳಾದರೂ { ಪ್ರಾಮಾಣಿಕತೆಯಿಂದಲೇ
ಗಾದೆ ಸುಳ್ಳಾಗದು { ಪಾರಮಾರ್ಥ

ನಿಮ್ಮ ಪತ್ರಗಳು

'ಸ್ವಾಮಿ ವಿವೇಕಾನಂದ'ರ ಪ್ರತಿಮೆ ಅನಾವರಣ ಯಾವಾಗ



ಮಾನ್ಯರೆ,
ಮೈಸೂರಿನ ವಿವೇಕಾನಂದ ನಗರದ ವೃತ್ತದಲ್ಲಿ 'ಸ್ವಾಮಿ ವಿವೇಕಾನಂದ'ರ ಪ್ರತಿಮೆಯನ್ನು ಸ್ಥಾಪಿಸಲು ಕಳೆದ ಮೂರು ವರ್ಷಗಳಿಂದ ಆಮೆ ವೇಗದಲ್ಲಿ ನಡೆದ ಕಾಮಗಾರಿ ಈಗ ಶಾಸಕ ಟಿ.ಎಸ್. ಶ್ರೀವತ್ಸ ಅವರ ಪ್ರಾಮಾಣಿಕ ಪ್ರಯತ್ನದಿಂದಾಗಿ ಪೂರ್ಣಗೊಂಡು ಪ್ರತಿಮೆಯನ್ನು ತಂದು ಪ್ಲಾಸ್ಟಿಕ್‌ನಿಂದ ಸುತ್ತಿ ಮುಚ್ಚಲಾಗಿದೆ. ಆದರೆ ಈ ಪುತ್ಥಳಿ ಅನಾವರಣಗೊಳ್ಳುವುದು ಯಾವಾಗ?ಎಂದು ಸಾರ್ವಜನಿಕರು ಕೇಳುತ್ತಿದ್ದಾರೆ. ಜ.12ರಂದು ಸ್ವಾಮಿ ವಿವೇಕಾನಂದ ಜನ್ಮದಿನದಂದು ಈ ಪುತ್ಥಳಿ ಅನಾವರಣ ಗೊಂಡಿದ್ದರೇ, ಅದು ಜನಮಾನಸದಲ್ಲಿ ಸದಾಕಾಲ ಉಳಿಯುವಂತಾಗುತ್ತಿತ್ತು. ಈಗಲೂ ಕಾಲ ಮಿಂಚಿಲ್ಲ. ಈ ಭಾಗದ ಪ್ರಾಮಾಣಿಕ ಶಾಸಕರೆಂದೇ ಹೇಳಲಾಗುತ್ತಿರುವ ಶ್ರೀವತ್ಸ ಅವರು, ಮುಂದೆ ನಿಂತು ಆದಷ್ಟು ಬೇಗ ಈ ಪುತ್ಥಳಿಯನ್ನು ಅನಾವರಣ ಗೊಳಿಸಿ ವಿವೇಕಾನಂದ ವೃತ್ತಕ್ಕೆ ಹೆಚ್ಚು ಮೆರಗು ನೀಡುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಖಾದಿ ಉಡುಪು ಕಡ್ಡಾಯ ಶ್ಲಾಘನೀಯ

ಮಾನ್ಯರೆ,
ಖಾದಿ ಉದ್ಯಮಕ್ಕೆ ಹೆಚ್ಚಿನ ಅವಕಾಶ ಹಾಗೂ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ, ಸರಕಾರಿ ನೌಕರರು ಇನ್ನು ಮುಂದೆ ಪ್ರತಿ ತಿಂಗಳ ಮೊದಲ ಶನಿವಾರ ಕಡ್ಡಾಯವಾಗಿ ಖಾದಿ ಬಟ್ಟೆಯನ್ನು ಧರಿಸಬೇಕು ಎಂದು ಆದೇಶ ಹೊರಡಿಸಿರುವುದು ತುಂಬಾ ಶ್ಲಾಘನೀಯ.

ಇದರಿಂದ ಸರ್ಕಾರಿ ಅಧಿಕಾರಿಗಳು, ನೌಕರರಲ್ಲಿ ಸ್ವದೇಶಿ ಉತ್ಪನ್ನಗಳ ಬಗ್ಗೆ ಗೌರವ, ಐಕ್ಯತೆ, ರಾಷ್ಟ್ರೀಯ ಭಾವನೆ, ಸ್ವಾಭಿಮಾನ ಮತ್ತು ಸಾಮಾಜಿಕ ಜವಾಬ್ದಾರಿಯು ಮೂಡಲು ನೆರವಾಗಲಿದೆ.ಖಾದಿ ಉದ್ಯಮ ಗ್ರಾಮೀಣ ಜನರ ಆರ್ಥಿಕತೆಯ ಮೂಲಗಳಲ್ಲಿ ಒಂದಾಗಿದ್ದು ರಾಷ್ಟ್ರದ ಗೌರವ ಮತ್ತು ಹೆಮ್ಮೆಯ ಪ್ರತೀಕವಾಗಿದೆ.

ಸರ್ಕಾರಿ ಹಾಗೂ ಸರ್ಕಾರಿ ಸ್ವಾಮ್ಯದ ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಅಧಿಕಾರಿ ವರ್ಗ ಹಾಗೂ ನೌಕರ ವರ್ಗದವರು ಸರ್ಕಾರಿ ಸ್ವಾಮ್ಯದ ಖಾದಿ ಗ್ರಾಮೋದ್ಯೋಗ ಮಳಿಗೆಗಳಲ್ಲಿಯೇ ಬಟ್ಟೆಗಳನ್ನು ಖರೀದಿಸಬೇಕು ಎಂದು ಆದೇಶಿಸಿರುವುದು ಸ್ವಾಗತಾರ್ಹ. ಖಾದಿ ಗ್ರಾಮೋದ್ಯೋಗ ಮಂಡಳಿ ಪ್ರಸ್ತುತ ನೀಡುತ್ತಿರುವ ರಿಯಾಯಿತಿ ಜೊತೆಗೆ ಶೇ.5ರಷ್ಟು ವಿಶೇಷ ರಿಯಾಯಿತಿ ನೀಡಲು ನಿರ್ಧರಿಸಿರುವುದು ಒಳ್ಳೆಯ ಬೆಳವಣಿಗೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸಂವಿಧಾನ ಜಾರಿಗೆ ಬಂದ ದಿನ

ಮಾನ್ಯರೇ,
ಸಂವಿಧಾನ ಜಾರಿಗೆ ಬಂದ ದಿನವನ್ನೇ ಗಣರಾಜ್ಯೋತ್ಸವ ಎಂಬ ಹೆಸರಿನಲ್ಲಿ ಆಚರಿಸುತ್ತೇವೆ. ಸ್ವಾತಂತ್ರ್ಯ ಸಿಕ್ಕ ಎರಡು ವರ್ಷಗಳ ನಂತರ ಅಂಬೇಡ್ಕರ್ ಅವರ ನೇತೃತ್ವದಲ್ಲಿ 1950 ಜನವರಿ 26ರಂದು ಸಂವಿಧಾನ ರಚನೆಯಾಯ್ತು.

ಈ ಸಂವಿಧಾನ ರಚನೆಗೆ ತೆಗೆದುಕೊಂಡ ಕಾಲ 2 ವರ್ಷ 11 ತಿಂಗಳು 18 ದಿನಗಳು. ಇದು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸ್ವತಃ ಅಂಬೇಡ್ಕರ್ ಅವರೇ ಖುದ್ದಾಗಿ ಬರೆದಿದ್ದಾರೆ. ಇದು ಇವತ್ತಿಗೂ ಕೂಡ ಲಿಖಿತ ರೂಪದಲ್ಲೇ ಇದೆ. ಪ್ರಪಂಚದ ಅತೀ ದೊಡ್ಡ ಲಿಖಿತ ರೂಪದ ಸಂವಿಧಾನ ಎಂದರೆ ಅದು ಭಾರತದ ಸಂವಿಧಾನ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಜೊತೆಗೆ ಸಂವಿಧಾನವು ಭಾರತ ದೇಶವನ್ನು ಸುಭದ್ರವಾಗಿ ಮುನ್ನಡೆಸಲು, ಕಾನೂನು ಚೌಕಟ್ಟಿನ ಮೂಲಕ ವಿವಿಧ ರೀತಿಯ ನಿಯಮಗಳನ್ನು ಜಾರಿಗೆ ತಂದು ತನ್ನ ಮೂಲ ಉದ್ದೇಶವನ್ನು ಪ್ರಸ್ತಾಪಿಸಿದೆ. ಹೀಗೆ ಸಂವಿಧಾನ ಮುಖಾಂತರ ದೇಶವನ್ನು ಕೊಂಡೊಯ್ಯುವ ನಿಟ್ಟಿನಲ್ಲಿ ಇಂದಿಗೆ ಪ್ರಪಂಚದ ಮೊದಲ ಸ್ಥಾನದಲ್ಲಿ ನಾವಿದ್ದೇವೆ. ಭಾರತ ದೇಶದ ಪ್ರಜೆಗಳಾದ ನಾವು ಸಂವಿಧಾನವನ್ನು ಗೌರವಿಸುವುದಲ್ಲದೆ, ಅದನ್ನು ಓದಿ, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ದೇಶದ ಏಳಿಗೆಗೆ ಶ್ರಮಿಸಬೇಕಾಗಿದೆ.

–ಸಾಯಿ ಸಂದೇಶ್ ಬಿ ಎಸ್, ಮೈಸೂರು

ಮೈಸೂರಿನಲ್ಲಿ ಮಳೆ ನೀರು ಕೊಯ್ಲು ಥೀಮ್ ಪಾರ್ಕ್ ಕನ್ನಡಿಯೊಳಗಿನ ಗಂಟು

ಮಾನ್ಯರೆ,
ಮೈಸೂರು ನಗರದಲ್ಲಿ ಮಳೆ ನೀರು ಕೊಯ್ಲು ಥೀಮ್ ಪಾರ್ಕ್ ಸ್ಥಾಪಿಸುವ ಹಿಂದಿನ ಹಾಗೂ ಈಗಿನ ಸರಕಾರಗಳ ಭರವಸೆ ಇನ್ನೂ ಕನ್ನಡಿಯೊಳಗಿನ ಗಂಟಾಗಿಯೇ ಉಳಿದಿದೆ. ಬೆಂಗಳೂರಿನ ಜಯನಗರದಲ್ಲಿರುವ ಪಾರ್ಕ್ ಮಾದರಿಯಲ್ಲೇ ಇಲ್ಲೂ ಪಾರ್ಕ್ ನಿರ್ಮಿಸಿದರೆ ಜನರಿಗೆ 'ಜಲಸಾಕ್ಷರತೆ' ದೊರೆಯುತ್ತಿತ್ತು. ಆದರೆ, ಆಳುವವರ ಇಚ್ಛಾಶಕ್ತಿಯ ಕೊರತೆಯಿಂದ ಈ ಯೋಜನೆ ನೆನೆಗುದಿಗೆ ಬಿದ್ದಿದೆ. ಅಂಕಿ ಅಂಶಗಳ ಪ್ರಕಾರ, ನಗರೀಕರಣದ ಹೆಸರಿನಲ್ಲಿ ಮೈಸೂರಿನ ಅಂತರ್ಜಲದ ಮಟ್ಟ ದಿನೇ ದಿನೇ ಕುಸಿಯುತ್ತಿದೆ. ನಗರದಲ್ಲಿ ಬೀಳುವ ಮಳೆಯಲ್ಲಿ ಶೇ. 40ಕ್ಕೂ ಹೆಚ್ಚು ನೀರು ಪೋಲಾಗಿ ಚರಂಡಿ ಸೇರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಸರಕಾರವು ಕೇವಲ ಬಜೆಟ್ ಭಾಷಣಗಳಿಗೆ ಸೀಮಿತವಾಗಿರುವುದು ದುರಂತ. ಇನ್ನಾದರೂ ಸರಕಾರ ಎಚ್ಚೆತ್ತು ತಕ್ಷಣವೇ ಪಾರ್ಕ್ ಕಾಮಗಾರಿಯನ್ನು ಆರಂಭಿಸಬೇಕು.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಪ್ರಿಪೇಯ್ಡ್ ಆಟೋ ಸೇವೆ ಕಲ್ಪಿಸಿ

ಮಾನ್ಯರೆ,
ಮೈಸೂರು ರೈಲು ನಿಲ್ದಾಣದಲ್ಲಿರುವ ಪ್ರಿಪೇಯ್ಡ್ ಆಟೋ ಕೌಂಟರ್ ಕೆಲಸ ಮಾಡುತ್ತಿಲ್ಲ. ಅಲ್ಲಿ ಟೋಕನ್ ನೀಡಲು ಯಾರೂ ಇಲ್ಲದಿರುವುದು ಸೋಮವಾರ ಚೆನ್ನೈನಿಂದ ಮೈಸೂರಿಗೆ ಬಂದ ನಾನು ಗಮನಿಸಿದೆ. ಆಟೋದವರು ಯಾರೂ ಪ್ರಿಪೇಯ್ಡ್ ಆಟೋ ನಿಲ್ದಾಣಕ್ಕೆ ಬಾರದಿರುವುದರಿಂದ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿದೆ. ಆದಕಾರಣ ಸಂಬಂಧಿಸಿದವರು ಈ ಬಗ್ಗೆ ಗಮನಹರಿಸಿ ಪ್ರಿಪೇಯ್ಡ್ ಆಟೋ ಸೇವೆ ಪ್ರಯಾಣಿಕರಿಗೆ ಸಿಗುವಂತೆ ವ್ಯವಸ್ಥೆ ಮಾಡಲೆಂದು ಮನವಿ ಮಾಡುತ್ತೇವೆ.

–ಟಿ.ಆರ್.ಅರುಣ್, ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಡಿಜಿಟಲ್ ಇಂಡಿಯಾದಲ್ಲಿ ಜೋಗುಳದ ಹಾಡು!

ಭಾರತ ಬದಲಾಗುತ್ತಿದೆ. ಜಗತ್ತು ಭಾರೀ ಸದ್ದು ಮಾಡುತ್ತಾ ವಾಯುವೇಗದಲ್ಲಿ ಓಡುತ್ತಿದೆ. ತಾಂತ್ರಿಕವಾಗಿ, ಮಾಂತ್ರಿಕವಾಗಿ ಕಿಲೋಮೀಟರುಗಳ ವೇಗದಲ್ಲಿ ಜಗತ್ತು ಓಡುತ್ತಿದ್ದರೂ ನಮ್ಮ ಬದುಕು, ಬವಣೆಗಳು ಮಾತ್ರ ಬೇರಿನ ಬುಡದಲ್ಲೇ ಜಾಗ ಹುಡುಕುತ್ತಿವೆ. ನಮ್ಮ ಸಾಮಾಜಿಕ ಸಂದರ್ಭದಲ್ಲಿ ಏನೆಲ್ಲಾ ಬದಲಾವಣೆಗಳಾದವು, ದೇಸೀಯತೆಯ ವಿದ್ಯಮಾನದಲ್ಲೇ ಮಿನುಗುತ್ತಿದ್ದ ಭಾರತೀಯರ ಬದುಕು ಅದೆಷ್ಟೋ ಹೋರಾಟ, ಕ್ರಾಂತಿ, ಬದಲಾವಣೆಯ ಹೆಜ್ಜೆಗಳಿಗೆ ತಕ್ಕಂತೆ ಹೊಂದಿಕೊಳ್ಳುತ್ತಾ ಹೊರಟಿದೆ.

ಹಾಗೆ ಹೊಂದಿಕೊಳ್ಳುತ್ತಾ ಹೋದಲ್ಲೆಲ್ಲಾ ಬದಲಾವಣೆಯ ಹೆಜ್ಜೆ ಗುರುತುಗಳನ್ನು ಚಾರಿತ್ರಿಕವಾಗಿ ಉಳಿಸಿ ಹೋಗಿದೆ. ಸ್ವಾತಂತ್ರ್ಯ ಬಂದ ಈ ಎಪ್ಪತ್ತೈದು ವರ್ಷಗಳಲ್ಲಿ ಹಲವು ಮೈಲಿಗಲ್ಲುಗಳನ್ನು ನಮ್ಮ ಹಿರಿಯ ತಲೆಮಾರು ಕಂಡಿದೆ. ಒಂದೊಂದು ಹೊಸತನಕ್ಕೂ ಒಂದೊಂದು ತಲೆಮಾರು ಸಾಕ್ಷಿಯಾಗಿದೆ.


ದೇಶಕ್ಕಾಗಿ ಪ್ರಾಣ ಕೊಡುವುದೇ ದೊಡ್ಡ ಭಾಗ್ಯದಂತೆ ಕಂಡ ಜನಸಮೂಹ ಸೇನೆ ಸೇರಿರಲಿಲ್ಲ. ಕೈಯ್ಯಲ್ಲಿ ತುಪಾಕಿ ಹಿಡಿದಿರಲಿಲ್ಲ. ಗ್ರೇನೆಡು ಬಾಂಬುಗಳನ್ನು ಸ್ಫೋಟಿಸಲಿಲ್ಲ, ಶಾಲೆಗೆ ಹೊರಟ ಬಾಲಕ ಸ್ವರಾಜ್ಯ ಚಳುವಳಿಯ ನೇತಾರರನ್ನು ಕಂಡರೆ ಮೈಮರೆಯುತ್ತಿದ್ದ. ಬೇಲಿಯ ಮರೆಗೆ ಪುಸ್ತಕದ ಚೀಲ ಬಿಸಾಡಿ ತಾನೂ ಕೂಡ ಕೈಯಲ್ಲಿ ತ್ರಿವರ್ಣಧ್ವಜ ಹಿಡಿದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳುತ್ತಿದ್ದ. ಸಮರ ಸೇನಾನಿಗಳ ಗುಂಪು ಸೇರಿಕೊಳ್ಳುತ್ತಿದ್ದ. ಅಂದರೆ ದೊಡ್ಡವರ ನಡೆ ನೋಡಿ ಚಿಕ್ಕವರು ಪ್ರಭಾವಿತರಾಗುತ್ತಿದ್ದರು.

ನಾವೀಗ ನೈತಿಕಪ್ರಜ್ಞೆಯ ಕಾಲದಲ್ಲಿಲ್ಲ. ತಾಂತ್ರಿಕ ಸಂಜ್ಞೆಗಳ ಕಾಲದಲ್ಲಿದ್ದೇವೆ. ಅಂದರೆ. ಡಿಜಿಟಲ್ ಇಂಡಿಯಾದ ಪ್ರಜೆಗಳು, ದೇಶ ಪ್ರೇಮದಲ್ಲೂ ಹುಸಿ ದೇಶಪ್ರೇಮ ಎಂಬ ಅತೀ ಬುದ್ಧಿವಂತಿಕೆಯ ಶೋಧನೆಯ ಹಾದಿಯ ಪ್ರಜೆಗಳು ನಾವು. ದೇಶ ಪ್ರೇಮದಲ್ಲಿ ಹುಸಿಯೋ! ಹಸಿಯೋ! ಅದು ಬೇರೆ ಮಾತು. ಆದರೆ ಒಂದು ಮಾತಂತು ಸ್ಪಷ್ಟ ನಮ್ಮ ಕಿರಿಯ ತಲೆಮಾರು ನಾವು ಹೇಳಿದ್ದೆಲ್ಲವನ್ನೂ ಕೇಳಿಕೊಂಡು ಬೆಳೆಯುವುದಿಲ್ಲ, ನಮ್ಮ ನಡವಳಿಕೆ ನೋಡಿ ಬೆಳೆಯುತ್ತಿರುತ್ತದೆ. ಹಾಗಾಗಿ ದೇಶಪ್ರೇಮವೇ ಇರಲಿ ಮಾತೃ ಪ್ರೇಮವೇ ಇರಲಿ ಯಾವುದೋ concernಗಳು, moralityಗಳು ಹೇಳಿಕೆ ಕೇಳಿಕೆಗಳಿಂದ ಸೃಷ್ಟಿಯಾಗುವುದಿಲ್ಲ. ಇವತ್ತಿನ ಸಾಮಾಜಿಕ ಜಾಲತಾಣಗಳ ಸಮಸ್ಯೆಯೇ ಅದು.

ಎಲ್ಲರೂ ಎಲ್ಲರಿಗೂ ಹೇಳುವ ತವಕದಲ್ಲೇ ತಮ್ಮ ತಮ್ಮ ಬ್ಲಾಗುಗಳನ್ನು, ಟ್ವಿಟರ್ ಖಾತೆಗಳನ್ನು, ವಾಟ್ಸಪ್‌ಗಳನ್ನು, ಮೆಸೇಜ್ ಬಾಕ್ಸುಗಳನ್ನು ತುಂಬಿಸಿಬಿಟ್ಟಿರುತ್ತಾರೆ. ಹಾಗಾದರೆ ಕೇಳುವ ಸರದಿ ಯಾರದು? ನೈತಿಕ ಪ್ರಜ್ಞೆಯ ಕಾಲದಲ್ಲಿ ಹುಟ್ಟಿ ಬ್ರಿಟಿಷರ ಗುಂಡಿಗೆ ಎದೆಕೊಟ್ಟು ಪ್ರಾಣಬಿಟ್ಟವರನ್ನು ಅಭಿಮಾನಿಸುವ ನಾವು, ಅದೇ ವ್ಯಕ್ತಿ ಬದುಕಿ ಉಳಿದು ಬಿಟ್ಟರೆ, ಆತ ಅಸಲಿಯ! ನಕಲಿಯ! ಅಂತ ಪ್ರಶ್ನಿಸುವ ಮಟ್ಟಕ್ಕೆ ಇಳಿದುಬಿಡುತ್ತೇವೆ.

ತಾಂತ್ರಿಕ ಶ್ರೀಮಂತಿಕೆಯಲ್ಲಿ ನರಳುವ ನಾವು ನಾಗರಿಕತೆಯ ನಾಗಾಲೋಟದಲ್ಲಿ ನೈತಿಕತೆಯಲ್ಲಿ ಅರಳುವ ಆಲೋಚನೆಗಳಿಗೆ ಪಕ್ಕ ಆಗಲಿಕ್ಕೆ ತಡವರಿಸುತ್ತಿರುವುದೇಕೆ? ಕಾರಣ ಇಷ್ಟೆ, ಹಣ ವರ್ಗಾವಣೆಯಿಂದ ಹಿಡಿದು ಗೂಗಲ್‌ಪೇ, ಫೋನ್‌ಪೇ ಮುಂತಾದ ಡಿಜಿಟಲ್ ಆ್ಯಪ್‌ಗಳ ಮೂಲಕ ವ್ಯಾಪಾರ ವಹಿವಾಟು, ಸರಕಾರಿ ಸೇವೆಗಳ ಅಪ್‌ಡೇಟ್ ಮಾಹಿತಿ ಮತ್ತು ಅನುಕೂಲಗಳನ್ನು ಪಡೆಯುವ ಕಾಲದಲ್ಲಿ ಇರುವ ನಾವು ದೇಶಗಳಲ್ಲಿ ಐಟಿ–ಬಿಟಿ ಮತ್ತು ಮೊಬೈಲ್ ಮೂಲಕವೇ ಎಲ್ಲವನ್ನೂ ನಡೆಸುವ ನಡೆದಾಡುವ ಯಂತ್ರ ನಾಗರಿಕತೆಯ ಜೊತೆ ಜೀವನ ಕಟ್ಟಿಕೊಂಡಿದ್ದೇವೆ.

ಅಂದ ಮೇಲೆ ಡಿಜಿಟಲ್ ಇಂಡಿಯಾದ ಪ್ರಜೆಗಳು ನಾವು ಸರ್ವೋದಯದ ಕಾಲದ ತಲೆಮಾರಿಗಿಂತ ತಾಂತ್ರಿಕತೆಯಲ್ಲಿ ಸಿದ್ಧಹಸ್ತರು. ಅಂಗೈಯಲ್ಲೇ ಆಕಾಶ ನೋಡುವಲ್ಲಿ ಪ್ರಸಿದ್ಧರು. ಇಷ್ಟಾದರೂ ಸಾಮಾಜಿಕ ಬದ್ಧತೆ ನಿರ್ವ್ಯಾಜ್ಯ ದೇಶಪ್ರೇಮ, ಸಮಾಜಮುಖಿ ಚಿಂತನೆ, ಸಾತ್ವಿಕ ಜೀವನ ಪದ್ಧತಿಗಳ ಸರ್ವೋದಯ ಕಾಲದ ಗಾಂಧೀಯುಗವನ್ನು 75ರ ಈ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ದಿನಗಳಲ್ಲಿ ನೆನೆಸಿಕೊಂಡೇ ಅಭಿಮಾನಿಸುತ್ತೇವೆ. ಅಂದ ಮೇಲೆ ಅಂದಿನ ತಲೆ ಮಾರು ತನ್ನ ನೇತಾರರನ್ನು ನೋಡಿ ಕಲಿಯುತ್ತಿತ್ತು.



> ಮಕ್ಕಳ ಮನಸ್ಸಿನಲ್ಲಿ ಪೋಷಕರು ಹೇಳಿಕೊಟ್ಟಿದ್ದು ಬಲವಾಗಿ ಬೇರೂರುವುದಕ್ಕಿಂತ ಪೋಷಕರ ಗುಣ–ಪ್ರವೃತ್ತಿಗಳೇ ಅವರ ಮನಸ್ಸನ್ನು ರೂಪಿಸುತ್ತಿರುತ್ತವೆ. ಪೋಷಕರಾಗಲಿ, ಗುರುವಾಗಲಿ ಕುಶಲಕರ್ಮಿಯಾಗಲಿ, ರೈತನಾಗಲಿ, ವಿಜ್ಞಾನಿಯಾಗಲಿ, ಚಾಲಕನಾಗಲಿ, ಬಾಲಕನಾಗಲಿ, ತಮ್ಮ ಹಿರಿಯರ ಗುಣಪ್ರವೃತ್ತಿಗಳಿಂದ ಆಕರ್ಷಿತರಾಗುತ್ತಾರೆಯೇ ವಿನಃ ಅವರ ಉಪದೇಶಗಳಿಂದಲ್ಲ; ಹೇಳಿಕೆ–ಕೇಳಿಕೆಗಳು, ಮಕ್ಕಳ ಮನಸ್ಸಿನಲ್ಲಿ ಬಲವಾಗಿ ಬೇರೂರಲು ಅವರ ಶಿಕ್ಷಣ, ಅವರ ಬೆಳವಣಿಗೆಗಳು ಕೂಡ ನೈತಿಕತೆಯ ಆವರಣದಲ್ಲೇ ಅನಾವರಣಗೊಂಡು ಸಾಧಕರಾಗುತ್ತಾರೆ, ಶೋಧಕರಾಗುತ್ತಾರೆ.

ಅಂದಿನ ಮಕ್ಕಳು ಅವರವರ ತಂದೆ–ತಾಯಿಗಳ ಗುಣ–ಸ್ವಭಾವ–ನಡೆವಳಿಕೆಗಳನ್ನು ನೋಡಿ ಕಲಿಯುತ್ತಿದ್ದರು. ಯಾರೇ ಆಗಲಿ ಹೇಳಿ ಕೇಳಿಸುವುದಕ್ಕಿಂತ ನಮ್ಮ ನಡವಳಿಕೆಗಳನ್ನು ನೋಡಿ ಕಲಿಯುವ ಮಗು ಡಿಜಿಟಲ್ ಇಂಡಿಯಾದಲ್ಲೇ ಹುಟ್ಟಿದ್ದರೂ ಆತ ಮಾತ್ರ ತಾಂತ್ರಿಕ ವಾಗಿಯೂ ಶ್ರೀಮಂತನಾಗುತ್ತಾನೆ. ನೈತಿಕವಾಗಿಯೂ, ಎಚ್ಚರದಿಂದಿರುತ್ತಾನೆ. ಇಂಗ್ಲಿಷಿನಲ್ಲಿ ಒಂದು ಹೇಳಿಕೆ ಓದಿದೆ.

The attitude that you have as a parent is what your kids will learn from. More than what you tell them. They don?t remember what you try to teach them, they remember what you are.

ಮಕ್ಕಳ ಮನಸ್ಸಿನಲ್ಲಿ ಪೋಷಕರು ಹೇಳಿಕೊಟ್ಟಿದ್ದು ಬಲವಾಗಿ ಬೇರೂರುವುದಕ್ಕಿಂತ ಪೋಷಕರ ಗುಣ–ಪ್ರವೃತ್ತಿಗಳೇ ಅವರ ಮನಸ್ಸನ್ನು ರೂಪಿಸುತ್ತಿರುತ್ತವೆ. ಪೋಷಕರಾಗಲಿ, ಗುರುವಾಗಲಿ ಕುಶಲಕರ್ಮಿಯಾಗಲಿ, ರೈತನಾಗಲಿ, ವಿಜ್ಞಾನಿಯಾಗಲಿ, ಚಾಲಕನಾಗಲಿ, ಬಾಲಕನಾಗಲಿ, ತಮ್ಮ ಹಿರಿಯರ ಗುಣಪ್ರವೃತ್ತಿಗಳಿಂದ ಆಕರ್ಷಿತರಾಗುತ್ತಾರೆಯೇ ವಿನಃ ಅವರ ಉಪದೇಶಗಳಿಂದಲ್ಲ; ಹೇಳಿಕೆ–ಕೇಳಿಕೆಗಳು, ಮಕ್ಕಳ ಮನಸ್ಸಿನಲ್ಲಿ ಬಲವಾಗಿ ಬೇರೂರಲು ಅವರ ಶಿಕ್ಷಣ, ಅವರ ಬೆಳವಣಿಗೆಗಳು ಕೂಡ ನೈತಿಕತೆಯ ಆವರಣದಲ್ಲೇ ಅನಾವರಣಗೊಂಡು ಸಾಧಕರಾಗುತ್ತಾರೆ, ಶೋಧಕರಾಗುತ್ತಾರೆ. ಇಷ್ಟೆಲ್ಲಾ ಯೋಚಿಸಲು ಕಾರಣವಿಷ್ಟೆ.

ಮೊನ್ನೆ ಬೆಂಗಳೂರಿನಿಂದ ಮೈಸೂರಿಗೆ ಬರುವಾಗ ತಾಯಿಯೊಬ್ಬರು ಅಳುವ ಮಗುವಿನ ಮುಂದೆ ಮೊಬೈಲಿಟ್ಟು ವೀಡಿಯೊ ಗೇಮ್ ಪ್ಲೇ ಮಾಡಿ ಮಗುವಿನ ಅಳು ನಿಲ್ಲಿಸಿಬಿಟ್ಟಳು. ಆ ಮಗು ಮೈಸೂರು ತಲುಪುವವರೆಗೂ ಮೊಬೈಲು, ಮತ್ತದರ ವೀಡಿಯೊ ಗೇಮಿನ ಗೆಲುವಿನ ದಾರಿಯಲ್ಲೇ ಮೈಮರೆಯುತ್ತಿತ್ತು. ಇದು ಡಿಜಿಟಲ್ ಇಂಡಿಯಾದ ಮೊಬೈಲ್ ಕ್ರಾಂತಿ ಮುಂದೆ ಇದೇ ಮಗು ತಾಂತ್ರಿಕ ಶ್ರೀಮಂತಿಕೆಯೊಂದಿಗೆ ದಾಪುಗಾಲಿಟ್ಟು ದೊಡ್ಡ ತಜ್ಞನಾಗುತ್ತಾನೆ. ಅದರ ಅಭಿರುಚಿಯಲ್ಲಿ ತಾಂತ್ರಿಕ ಶ್ರೀಮಂತಿಕೆಯ ಜೊತೆ, ತಾಯ್ತನದ ಮಮಕಾರ, ವಾತ್ಸಲ್ಯದ ಅಸಲೀಯತ್ತು, ಕುಟುಂಬದ ಜೊತೆಗಿನ ಬೆಚ್ಚಗಿನ ಒಡನಾಟ, ಅಮ್ಮನ ಸೆರಗಿನ ಅಳು–ನಗು ಕೇಕೆಗಳು ವಿಜೃಂಭಿಸಿವೆ ತಾಂತ್ರಿಕತೆ–ನೈತಿಕತೆಗಳು ಮೇಳೈಸುತ್ತವೆ. ನಾಗರಿಕತೆ ಮತ್ತು ಬೌದ್ಧಿಕತೆಗಳು ಆ ಮಗುವನ್ನು ರೂಪಿಸುತ್ತವೆ.

ಯಾರೋ ಹೇಳಿದ ನೆನಪು ರೈಲಿನಲ್ಲಿ ತಾಯಿ ಮಗಳು ಇಬ್ಬರೂ ಪ್ರಯಾಣಿಸುತ್ತಿದ್ದರಂತೆ. ಏಳೆಂಟು ವರ್ಷದ ಮಗಳು ಕೈಯ್ಯಲ್ಲಿ ಪುಸ್ತಕ ಹಿಡಿದು ಓದಲು ಕುಳಿತವಳು, ಮದ್ದೂರು ವಡೆಯ ವಾಸನೆ, ಬಿಸಿಬಿಸಿ ಕಾಫಿಯ ಘಮಲಿಗೂ ಆ ಹುಡುಗಿಯ ಗಮನ ಹೋಗಲಿಲ್ಲವಂತೆ. ಎದುರಿಗೆ ಕುಳಿತಿದ್ದ ಹಿರಿಯ ನಾಗರಿಕರೊಬ್ಬರು ಆ ಮಗು ಪುಸ್ತಕದ ಓದಿನಲ್ಲೇ ಮಗ್ನಳಾಗಿರುವುದನ್ನು ಕುರಿತು ಅದರ ತಾಯಿಯನ್ನು ಕೇಳಿದರಂತೆ, ನಿಮ್ಮ ಮಗಳಿಗೆ ಓದುವ ಹವ್ಯಾಸವನ್ನು ನೀವು ಹೇಳಿ ಕೊಟ್ಟಿರ? ಅದಕ್ಕೆ ಆಕೆಯ ತಾಯಿ ಕೊಟ್ಟ ಉತ್ತರ ಹೇಗಿತ್ತು ನೋಡಿ!

ಇಲ್ಲ ನಾನು ಏನನ್ನೂ ಹೇಳಿ ಕೊಟ್ಟಿಲ್ಲ, ನಾನು ಮನೆಯಲ್ಲಿ ಹೆಚ್ಚು ಸಮಯ ಪುಸ್ತಕದ ಜೊತೆ ಇರುತ್ತೇನೆ, ಬಹುಷಃ ಇದನ್ನು ನೋಡಿ ಅವಳು ಸಹ ಪುಸ್ತಕ ಓದುವುದನ್ನು ಕಲಿತಿದ್ದಾಳೆ, ಎಂದರು ಆ ತಾಯಿ. ಅಂದರೆ ಮಕ್ಕಳು ಹೇಳಿ ಕಲಿಯುವುದಕ್ಕಿಂತ ನೋಡಿ ಕಲಿಯುವುದೇ ಹೆಚ್ಚು. ನಮಗೆ ಗೊತ್ತಿಲ್ಲದ ಹಾಗೆಯೇ ನಮ್ಮ ಮಕ್ಕಳು ನಮ್ಮ ನಡೆ–ನುಡಿ–ಸ್ವಭಾವ–ಗುಣ ಪ್ರವೃತ್ತಿಗಳನ್ನು ಗಮನಿಸಿ ಕಲಿಯುತ್ತಿರುತ್ತಾರೆ ಎಂಬುದು ಲೋಕಾನುಭವದ ಮಾತು. ಇದಕ್ಕೆ ಅನುರೂಪವೂ ಎಂಬಂತೆ ಪ್ರಸಿದ್ಧ ತತ್ವಜ್ಞಾನಿ ಗುರು ಪ್ಲೇಟೋರವರ ಪ್ರಸಂಗವೊಂದಿದೆ.

ಪ್ಲೇಟೋ ಒಮ್ಮೆ ಬೀದಿಯಲ್ಲಿ ನಡೆದು ಹೋಗುವಾಗ ಚಿಕ್ಕ ಮಗುವೊಂದು ಸಿಕ್ಕಾಪಟ್ಟೆ ಚೇಷ್ಟೆ ಮಾಡುತ್ತಿತ್ತಂತೆ. ಅದನ್ನು ನೋಡಿದ ಪ್ಲೇಟೋ ಆ ಮಗುವನ್ನು ಗದರಿಸುವುದಿಲ್ಲ. ಅಲ್ಲಿದ್ದವರೆಲ್ಲ ಆ ಮಗುವಿನ ಚೇಷ್ಟೆ ನಿಲ್ಲಿಸಲು ಆಗಲಿಲ್ಲ. ಪ್ಲೇಟೋ ಆ ಮಗುವಿನ ತಂದೆ ಯಾರು ಎಂದು ವಿಚಾರಿಸಿದರಂತೆ. ಆ ಮಗುವಿನ ತಂದೆಯ ಬಳಿ ಹೋಗಿ ಅವರಿಗೆ ಬುದ್ಧಿಹೇಳಿ ಬಂದರಂತೆ. ಇದನ್ನು ನೋಡಿದ ಅಲ್ಲೇ ಇದ್ದ ಕೆಲವರು ಜಗತ್ತಿನ ದೊಡ್ಡ ತತ್ವಜ್ಞಾನಿ ಪ್ಲೇಟೋ ತಂಟೆ ಮಾಡುತ್ತಿದ್ದ ಮಗುವನ್ನು ತಿದ್ದಿ ಸರಿಪಡಿಸದೆ, ತಂದೆಗೆ ಬುದ್ಧಿ ಹೇಳಿದ್ದು ಸರಿಯೇ? ಎಂದು ಪ್ರಶ್ನಿಸಿದರಂತೆ.

ಅದಕ್ಕೆ ಪ್ಲೇಟೋ ಹೇಳಿದ ಮಾತೇನು ಗೊತ್ತ? ಮಕ್ಕಳು ನಮ್ಮನ್ನು ನೋಡಿಯೇ ಎಲ್ಲವನ್ನೂ ಕಲಿಯುತ್ತಾರೆ. ಅವರು ಸರಿಯಾದ ರೀತಿಯಲ್ಲಿ ಬೆಳೆಯಲು ತಂದೆ–ತಾಯಿಗಳೂ ಕಾರಣರಾಗುತ್ತಾರೆ. ದೊಡ್ಡವರನ್ನು ನೋಡಿಯೇ ಮಕ್ಕಳು ಕಲಿತುಕೊಳ್ಳುತ್ತಾರೆ. ಪೋಷಕರು ತಾವು ಒಳ್ಳೆಯ ರೀತಿ–ನೀತಿ, ಗುಣಪ್ರವೃತ್ತಿಗಳನ್ನು ಬೆಳೆಸಿಕೊಳ್ಳದೆ ಮಕ್ಕಳಿಂದ ಮಾತ್ರ ಅದನ್ನು ನಿರೀಕ್ಷಿಸುವುದು ವ್ಯರ್ಥವಾಗುತ್ತದೆ ಎಂದರಂತೆ.

ಸಾಂಸ್ಕೃತಿಕ ಶಿಕ್ಷಣ, ಸಂಸ್ಕಾರದ ನಡೆ, ಹದವರಿತ ನುಡಿ, ಸದಾಚಾರದ ನಡವಳಿಕೆಗಳು, ಒಂದು ತಲೆಮಾರನ್ನು ಬೆಳೆಸುತ್ತವೆ. ಡಿಜಿಟಲ್ ಇಂಡಿಯಾದ ತಾಂತ್ರಿಕ ಜೀವನದ ಶ್ರೀಮಂತಿಕೆಗೆ ನಮ್ಮ ಜನನಾಯಕರೂ ತಮ್ಮ ಗುಣ–ಪ್ರವೃತ್ತಿ, ನಡೆ–ನುಡಿಗಳಿಂದ ಶ್ರೀಮಂತರಾದರೆ, ಅನುಮಾನವೇ ಇಲ್ಲದೆ ಇಡೀ ದೇಶ ಅವರನ್ನು ಹಿಂಬಾಲಿಸುತ್ತದೆ. ಮಕ್ಕಳು ಅಪ್ಪ ಅಮ್ಮನನ್ನು ನೋಡಿ ಕಲಿತ ಹಾಗೆ ಇಲ್ಲದಿದ್ದರೆ, ವಾಟ್ಸಪ್, ಫೇಸ್ಬುಕ್‌ಗಳ ಹೇಳಿಕೆಗಳಂತೆ ಕಲಿವ ಕ್ರಿಯೆ ದಿನವೂ ಮೊಬೈಲಿನಲ್ಲಿ ಡಿಲೀಟ್ ಆದಂತೆ ಜೀವನದ ಕಲಿಯುವ ಹಂತದಲ್ಲೂ ಡಿಲೀಟ್ ಆಗುತ್ತಾ ಹೋಗುತ್ತವೆ.

ಭರತ ಖಂಡದಲ್ಲಿ ತಲೆಮಾರಿನ ಮೈಲಿಗಲ್ಲುಗಳಿವೆ. ಅದು ಡಿಜಿಟಲ್ ಇಂಡಿಯಾವೇ ಇರಲಿ, ಪಾರಂಪರಿಕ ಭಾರತವಿರಲಿ ತಾಂತ್ರಿಕ ಶ್ರೀಮಂತಿಕೆಯ ಜೊತೆ ನೈತಿಕ ಶಿಕ್ಷಣದ ಹೆಜ್ಜೆ ಗುರುತುಗಳು ಅಮ್ಮನ ಸೆರಗಿನಿಂದ, ಅಪ್ಪನ ಹೆಗಲಿನಿಂದ ಶುರುವಾಗಲಿ, ಭಾರತೀಯತೆಯ ನೈಜ ಗುಣಸಂಪನ್ನತೆಗೆ ಚರಿತ್ರೆಯ ಪುಟಗಳಲ್ಲೇ ಜಾಗವಿದೆ ಎಂದ ಮೇಲೆ ಎದೆಯಗೂಡಲ್ಲಿ ಜೋಗುಳದ ಹಾಡಿಲ್ಲವೇ? ಏನಂತೀರಿ.

ಸಿರಿಧಾನ್ಯ ನಡಿಗೆ–ಆರೋಗ್ಯದ ಕಡೆಗೆ: ಮೈಸೂರು ಜಿಲ್ಲಾ ಸಿರಿಧಾನ್ಯ ಹಬ್ಬ

ಮೈಸೂರು, ಫೆ.2(ಎಂಕೆ)– ಅಂತರಾಷ್ಟ್ರೀಯ ವಾಣಿಜ್ಯ ಮೇಳ–2026ರ ಅಂಗವಾಗಿ ಆಹಾರ ಮತ್ತು ಪೌಷ್ಠಿಕ ಭದ್ರತಾ ಅಭಿಯಾನದಡಿ 'ಸಿರಿಧಾನ್ಯ ನಡಿಗೆ–ಆರೋಗ್ಯದ ಕಡೆಗೆ' ಘೋಷ ವಾಕ್ಯದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ, ಸಿರಿಧಾನ್ಯ ಸಂಸ್ಕರಣೆ ಮತ್ತು ಮೌಲ್ಯ ಸರಪಣಿ ಕುರಿತ ಕಾರ್ಯಾಗಾರದ ಮೂಲಕ ಮೈಸೂರಿನಲ್ಲಿ 'ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ' ಯಶಸ್ವಿಯಾಯಿತು.

ನಗರದ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಪಾರಿವಾಳಗಳನ್ನು ಹಾರಿಸುವ ಮೂಲಕ ನಡಿಗೆಗೆ ಚಾಲನೆ ನೀಡಲಾಯಿತು.

ಹಳೇ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಸಾಗಿದ ನಡಿಗೆಯಲ್ಲಿ 'ಊದಲು ತಿಂದವರು ಊದುವರು ಉತ್ಸಾಹದ ಕಹಳೆ', 'ಸಿರಿಧಾನ್ಯ ಬಳಕೆ ರೈತರಿಗಿರಲಿ ಗಳಿಕೆ', 'ಬಡವರ ಬಂಧು ರಾಗಿ', 'ಊದಲು ತಿನ್ನೋರ್ಗೆ ಉಬ್ಬಸಾ ಇಲ್ಲ', 'ಸಿರಿಧಾನ್ಯಗಳ ತಾಕತ್ತು ಸಕಲ ಪೌಷ್ಠಿಕಾಂಶಗಳ ಸಂಪತ್ತು' ಎಂಬಿತ್ಯಾದಿ ಸಂದೇಶದ ಫಲಕಗಳನ್ನು ಹಿಡಿದು ಸಾಗಿದ ನೂರಾರು ಮಂದಿ ಸಿರಿಧಾನ್ಯ ಬಳಕೆಯಿಂದಾಗುವ ಅನುಕೂಲತೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಬಳಿಕ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ 'ಸಿರಿಧಾನ್ಯ ಪಾಕ ಸ್ಪರ್ಧೆ'ಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ವಿತರಿಸಿದರು. ಸಿಹಿ ಖಾದ್ಯದ ವಿಭಾಗದಲ್ಲಿ ಮೈಸೂರು ಪೋಲೀಸ್ ಲೇಔಟ್‌ನ ಲಕ್ಷ್ಮಿದೇವಿಕೃಷ್ಣ (ನವಣೆ ಪಾಯಸ) ಪ್ರಥಮ, ವಿಶ್ವೇಶ್ವರನಗರದ ಜಯಭಾರತಿ(ಫ್ರೆಂಚ್ ಮಿಲೆಟ್ ಮ್ಯಾಕರಾನ್) ದ್ವಿತೀಯ ಹಾಗೂ ನಂಜನಗೂಡು ನಂದಿಗುಂದದ ಪ್ರೇಮಕುಮಾರಿ(ಸಜ್ಜೆ ಹಿಟ್ಟಿನ ಚಿರೋಟಿ) ತೃತೀಯ ಬಹುಮಾನ ಪಡೆದರೆ, **ಖಾರ ಖಾದ್ಯದ ವಿಭಾಗದಲ್ಲಿ** ಮೈಸೂರು ಜೆ.ಪಿ.ನಗರದ ಪ್ರೇಮಲತಾ(ಸಿರಿಧಾನ್ಯದ ಆಂಬೊಡೆ) ಪ್ರಥಮ, ಸಾಲಿಗ್ರಾಮ ತಾಲೂಕಿನ ಹನುಮನಹಳ್ಳಿಯ ಇಂದ್ರಮ್ಮ(ನವಣೆ ಹಿಟ್ಟಿನ ಕೋಡುಬಳೆ) ದ್ವಿತೀಯ ಹಾಗೂ ಹೆಚ್.ಡಿ.ಕೋಟೆ ಮಾದಾಪುರದ ಸುಧಾಮಣಿ(ಮಿಲ್ಲೆಟ್ಸ್ ಕೋಡುಬಳೆ) ತೃತೀಯ ಬಹುಮಾನ ಪಡೆದುಕೊಂಡರು.

ಹಾಗೆಯೇ **ಮರೆತುಹೋದ ಖಾದ್ಯದ ವಿಭಾಗದಲ್ಲಿ** ಮೈಸೂರು ವಿದ್ಯಾರಣ್ಯಪುರಂನ ಸುಜಾತ ಅರಸ್(ಮಿಲ್ಲೆಟ್ ನುಚ್ಚಿನುಂಡೆ) ಪ್ರಥಮ, ನಂಜನಗೂಡಿನ ಎನ್.ಉಷಾ(ಹುರುಳಿ ತೊಕ್ಕೆ ಕಾಯಿ ಹಾಲ) ದ್ವಿತೀಯ ಹಾಗೂ ಮೈಸೂರು ಚಾಮುಂಡಿಪುರಂನ ಎಂ.ಕೆ.ಸುಪ್ರಿಯಾ(ಜೋಳದ ಉಸಲಿ) ತೃತೀಯ ಬಹುಮಾನ ಗೆದ್ದುಕೊಂಡರು.

ಪ್ರಶಸ್ತಿ ಪ್ರದಾನ: ಬಳಿಕ ನಂಜನಗೂಡು ತಾಲೂಕಿನ ಮುದ್ದಹಳ್ಳಿಯ ಎಂ.ಚಿಕ್ಕಸ್ವಾಮಿ(ಸಮಗ್ರ ಕೃಷಿ) ಅವರಿಗೆ 'ರಾಜ್ಯಮಟ್ಟದ ಉದಯೋನ್ಮುಖ ಕೃಷಿ ಪ್ರಶಸ್ತಿ', ನಂಜನಗೂಡು ಹಾಡ್ಯ ಗ್ರಾಮದ ಹೆಚ್.ಬಿ. ಜಗದೀಶ್(ಸಮಗ್ರ ಕೃಷಿ), ಗೋಪಾಲಪುರ ಗ್ರಾಮದ ವಿಶ್ವನಾಥ (ಸಮಗ್ರ ಕೃಷಿ), ಪಿರಿಯಾಪಟ್ಟಣ ತಾಲೂಕು ಪಿ.ಬಸವನಹಳ್ಳಿ ಗ್ರಾಮದ ಬಿ.ಎ.ಪ್ರಕಾಶ್ (ತೋಟಗಾರಿಕೆ), ಹುಣಸೂರು ಬನ್ನಿಕುಪ್ಪೆ ಗ್ರಾಮದ ಪಿ.ಪಿ.ಚೆಲುವರಾಜು (ತೋಟಗಾರಿಕೆ), ಪಿರಿಯಾಪಟ್ಟಣ ಬೆಳ್ಳತ್ತೂರು ಗ್ರಾಮದ ಬಿ.ಹೆಚ್.ವೆಂಕಟೇಶ್ (ಪಶುಪಾಲನೆ), ಹುಣಸೂರು ಕಡೆಮನುಗನಹಳ್ಳಿ ಗ್ರಾಮದ ರುಷಬೇಂದ್ರ (ಪಶುಪಾಲನೆ), ಲಕ್ಷ್ಮಿಪುರ ಗ್ರಾಮದ ವಸಂತಕುಮಾರ್ (ರೇಷ್ಮೆ), ಟಿ.ನರಸೀಪುರದ ಮುತ್ತತ್ತಿ ಗ್ರಾಮದ ಕೃಷ್ಣ (ರೇಷ್ಮೆ), ಬೀಡನಹಳ್ಳಿ ಗ್ರಾಮದ ಬಸವೇಗೌಡ (ಮೀನುಗಾರಿಕೆ) ಹಾಗೂ ಹುಣಸೂರು ಆಸ್ಪತ್ರೆಕಾವಲ್ ಗ್ರಾಮದ ಹೆಚ್.ಎಸ್.ಮಹಾಶೇಷಭಟ್ (ಸಮಗ್ರ ಕೃಷಿ) ಅವರಿಗೆ 'ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ' ನೀಡಿ ಪ್ರೋತ್ಸಾಹಿಸಲಾಯಿತು.



ಮೈಸೂರು ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ವೇದಿಕೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಎಂಎಲ್‌ಸಿ ಸಿ.ಎನ್.ಮಂಜೇಗೌಡ ಮತ್ತಿತರರಿದ್ದರು.

ಸಿರಿಧಾನ್ಯ ಬೆಳೆಗಳ ಪ್ರೋತ್ಸಾಹ ಧನ ಹೆಚ್ಚಳಕ್ಕೆ ಚರ್ಚೆ...

> ಸಿರಿಧಾನ್ಯ ಬೆಳೆಗಳ ಬೆಳೆಯಲು ಒಂದು ಹೆಕ್ಟೇರ್‌ಗೆ 10 ಸಾವಿರ ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ರೈತರ ಬೇಡಿಕೆಗೆ ಅನುಗುಣವಾಗಿ ಪ್ರೋತ್ಸಾಹ ಧನ ಹೆಚ್ಚಿಸುವ ಕುರಿತು ಕೃಷಿ ಸಚಿವರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಪ್ರೋತ್ಸಾಹ ಧನ ಹೆಚ್ಚಿಸಲು ಪ್ರಯತ್ನಿಸಲಾಗುವುದು. **– ಡಾ.ಹೆಚ್.ಸಿ.ಮಹದೇವಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ**

ಸಿರಿಧಾನ್ಯ ಬಳಕೆಯಿಂದ ಆಗುವ ಪ್ರಯೋಜನಗಳ ಬಗ್ಗೆ ಜನರಲ್ಲಿ ಮನವರಿಕೆ

ಸಿರಿಧಾನ್ಯ ಬಳಕೆ ಅವಶ್ಯ: ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಹಿಂದೆಲ್ಲಾ ಸಿರಿಧಾನ್ಯಗಳನ್ನು ಹೆಚ್ಚಾಗಿ ಬಳಕೆ ಮಾಡು ತ್ತಿದ್ದರಿಂದ ಎಲ್ಲರ ಆರೋಗ್ಯವೂ ಚೆನ್ನಾಗಿತ್ತು. ಕಾಲ ಕಳೆದಂತೆ ಆಹಾರ ಪದಾರ್ಥಗಳಲ್ಲಿ ಆಗಿರುವ ಬದಲಾವಣೆ ಹಾಗೂ ಆರೋಗ್ಯದ ಮೇಲೆ ಉಂಟಾಗುತ್ತಿರುವ ಪರಿಣಾಮದಿಂದಾಗಿ ಮತ್ತೆ ಎಲ್ಲರೂ ಸಿರಿಧಾನ್ಯ ಬಳಕೆಗೆ ಮುಂದಾಗಿದ್ದಾರೆ. ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಿರಿಧಾನ್ಯಗಳ ಬಳಕೆ ಅವಶ್ಯವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಉದ್ಯಮಿ ಚಂದ್ರಶೇಖರ್, ಪ್ರಗತಿಪರ ರೈತ ಮಹಿಳೆ ವಸಂತಮ್ಮ, ವಿಜ್ಞಾನಿ ಡಾ.ದೀಪಕ್ ಸಿರಿಧಾನ್ಯಗಳ ಬಳಕೆ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಕೃಷಿಕ್ ಸಮಾಜದ ಅಧ್ಯಕ್ಷ ಕಲ್ಮಳ್ಳಿ ಶಿವಕುಮಾರ್, ಉಪ ಕೃಷಿ ನಿರ್ದೇಶಕರಾದ ರಾಜು, ಬಿ.ಎನ್.ಧನಂಜಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಅರಮನೆಯ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಿರಿಧಾನ್ಯ ನಡಿಗೆಗೆ ಚಾಲನೆ ನೀಡಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರಲ್ಲಿ ಮುಂದಿನ ನಾಲ್ಕೈದು ತಿಂಗಳಲ್ಲಿ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ ಕಾರ್ಯಾರಂಭ

ಕೋಟ್ಯಾಂತರ ವೆಚ್ಚದಲ್ಲಿ ಸ್ವಚ್ಛತಾ ಯಂತ್ರೋಪಕರಣ ಖರೀದಿ ; ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾಹಿತಿ



ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಸೋಮವಾರ ಮ್ಯಾರಾಥನ್ ಕುರಿತ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು,ಫೆ.2(ಪಿಎಂ)– ಸಾತಗಳ್ಳಿ ಸಮೀಪ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ (ಸಿ ಅಂಡ್ ಡಿ) ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದಿನ ನಾಲ್ಕೈದು ತಿಂಗಳಲ್ಲಿ ಈ ಘಟಕ ಕಾರ್ಯಾಚರಣೆ ಆರಂಭಿಸಲಿದೆ. ಆ ಬಳಿಕ ವಿಶೇಷವಾಗಿ ರಿಂಗ್ ರಸ್ತೆ ಸೇರಿದಂತೆ ನಗರದ ವಿವಿಧೆಡೆ ಬೀಳುವ ಕಟ್ಟಡ ತ್ಯಾಜ್ಯದ ಸಮರ್ಪಕ ನಿರ್ವಹಣೆ ಪರಿಣಾಮಕಾರಿಯಾಗಿ ನಡೆಯಲಿದೆ.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಈ ವಿಷಯ ತಿಳಿಸಿದರು. ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಸ್ವಚ್ಛ ಸರ್ವೇಕ್ಷಣ 2025–26ರ ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಆಯುಕ್ತರು ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ರಿಂಗ್ ರಸ್ತೆಬದಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ಆಗದಿರಲು ಸ್ಥಳೀಯ ಸಂಸ್ಥೆಗಳೊಂದಿಗೆ ಉಂಟಾಗಿರುವ ಸಮನ್ವಯದ ಕೊರತೆಯೂ ಕಾರಣವಾಗಿರಬಹುದು. ಇದಕ್ಕೆ ಪರಿಹಾರ ಕಂಡುಕೊಳ್ಳಲಾಗುವುದು. ಪ್ರಮುಖವಾಗಿ ಸಾತಗಳ್ಳಿ ಸಮೀಪ ಸಿ ಅಂಡ್ ಡಿ ವೇಸ್ಟ್ ಸಂಸ್ಕರಣಾ ಘಟಕದ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆ. ಮುಂದಿನ ನಾಲ್ಕೈದು ತಿಂಗಳಲ್ಲಿ ಈ ಘಟಕ ಕಾರ್ಯಾಚರಣೆ ಆರಂಭಿಸಲಿದೆ. ಆ ಬಳಿಕ ಎಲ್ಲಾ ಕಟ್ಟಡ ತ್ಯಾಜ್ಯವೂ ನೇರವಾಗಿ ಘಟಕಕ್ಕೆ ಸರಬರಾಜು ಆಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಾಗೃತಿ ಕಾರ್ಯಕ್ರಮಗಳ ಹೊರತಾಗಿ ಸ್ವಚ್ಛ ಸರ್ವೇಕ್ಷಣ ಸಂಬಂಧ ಪಾಲಿಕೆ ಸಿದ್ಧತೆ ನಡೆಸಿರುವ ಬಗ್ಗೆ ಪ್ರತಿಕ್ರಿಯಿಸಿ, ವಾಹನಗಳ ಹೆಚ್ಚಳಕ್ಕೆ ಕ್ರಮ ವಹಿಸಲಾಗುತ್ತಿದೆ. ನಮ್ಮಲ್ಲಿ ಹಿಂದೆ ಒಣಕಸ ಸಂಬಂಧ ಅಷ್ಟು ಸಮರ್ಪಕ ಸೌಲಭ್ಯ ಇರಲಿಲ್ಲ. ಈಗ 200 ವಿಧದ ಒಣಕಸ ನಿರ್ವಹಣೆ ಮಾಡಲು ರಾಯನಕೆರೆ ಮತ್ತು ವಿದ್ಯಾರಣ್ಯಪುರಂ ಘಟಕಗಳಲ್ಲಿ ಅವಕಾಶವಾಗಿದೆ. ಘನತ್ಯಾಜ್ಯ ಸಂಬಂಧ ವಿದ್ಯಾರಣ್ಯಪುರಂ ಘಟಕದಲ್ಲಿ ಸಂಸ್ಕರಣೆ ಆಗುತ್ತಿರಲಿಲ್ಲ. ಕೇವಲ ಡಂಪ್ ಮಾಡಲಾಗುತ್ತಿತ್ತು. ಈಗ 200 ಟನ್ ಸಂಸ್ಕರಣೆ ಮಾಡಲು ಪ್ರಾರಂಭ ಮಾಡಿದ್ದೇವೆ. ನಮ್ಮಲ್ಲಿ 3 ಟ್ರಾನ್ಸ್‌ಫರ್ ಸ್ಟೇಷನ್‌ಗಳಲ್ಲಿ 2 ಕಾರ್ಯಾಚರಣೆ ಆರಂಭಿಸಿವೆ. ಇಂತಹ ಒಂದು ಸ್ಟೇಷನ್ 3ರಿಂದ 4 ಕ್ಯಾಂಪ್ಯಾಕ್ಟರ್ ಯಂತ್ರಗಳಿಗೆ ಸಮವಾಗುತ್ತದೆ. ಇಂತಹ ಸುಧಾರಣೆಗಳು ನಗರದ ಸ್ವಚ್ಛತೆ ಕಾಪಾಡಲು ಪೂರಕವಾಗಿವೆ ಎಂದು ಹೇಳಿದರು.

7.50 ಕೋಟಿ ವೆಚ್ಚದಲ್ಲಿ ಯಂತ್ರೋಪಕರಣ: ಜೆಟ್ಟಿಂಗ್, ಡಿ ಜೆಟ್ಟಿಂಗ್ ಸೇರಿದಂತೆ ಸ್ವಚ್ಛತಾ ಯಂತ್ರೋಪಕರಣಗಳನ್ನು ಏಳೂವರೆ ಕೋಟಿ ವೆಚ್ಚದಲ್ಲಿ ಖರೀದಿ ಮಾಡಲಾಗುತ್ತಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಒಂದು ತಿಂಗಳಲ್ಲಿ ಫೈನಲ್ ಆಗಲಿದೆ. ಅಲ್ಲದೆ, ಮಧ್ಯಾಹ್ನ ವೇಳೆಯಲ್ಲಿ ವಾಣಿಜ್ಯ ತ್ಯಾಜ್ಯ ಸಂಗ್ರಹ ಮಾಡಲು ಹೆಚ್ಚುವರಿ ಮಾನವ ಸಂಪನ್ಮೂಲ ಬಳಸಿಕೊಳ್ಳುವ ವ್ಯವಸ್ಥೆ ಜಾರಿಗೊಳಿಸಲು ಟೆಂಡರ್ ಹೊರಡಿಸಲಾಗಿದೆ. 14ರಿಂದ 15 ಕಡೆಗಳಲ್ಲಿ ಇಂತಹ ತ್ಯಾಜ್ಯ ಸಂಗ್ರಹ ಮೊದಲಿಗೆ ಮಾಡಲಾಗುವುದು. ನಂತರದಲ್ಲಿ ಪ್ರತಿಕ್ರಿಯೆ ನೋಡಿಕೊಂಡು ಇದನ್ನು ಇನ್ನಿತರೆಡೆ ಹೆಚ್ಚಿಸುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

4 ಲಕ್ಷ ಟನ್ ತ್ಯಾಜ್ಯ ತೆರವು: ವಿದ್ಯಾರಣ್ಯಪುರಂನ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ 4 ಲಕ್ಷ ಟನ್ ತ್ಯಾಜ್ಯ ತೆರವು ಮಾಡಲಾಗಿದೆ. ಇದರಿಂದ 7ರಿಂದ 8 ಎಕರೆ ಭೂಮಿ ಬಳಕೆಗೆ ಲಭ್ಯವಾಗಿದೆ. ಈ ಪಾರಂಪರಿಕ ತ್ಯಾಜ್ಯವನ್ನು ಸಂಪೂರ್ಣ ತೆರವು ಮಾಡಲಿದ್ದೇವೆ. ಜೊತೆಗೆ ಹಸಿ ತ್ಯಾಜ್ಯದಿಂದ ಎನರ್ಜಿ ಉತ್ಪಾದಿಸಲು ಯೋಜನೆ ಸಿದ್ಧಪಡಿಸಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಕಾರ್ಯ ಶುರುವಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಇದು ಪೂರ್ಣಗೊಳ್ಳಲಿದೆ ಎಂದರು. ಸ್ವಚ್ಛ ಸರ್ವೇಕ್ಷಣಾ ತಂಡ ಮೂರು ದಿನ ಮುಂದೆಯಷ್ಟು ಬರುವ ಬಗ್ಗೆ ಮಾಹಿತಿ ನೀಡುತ್ತದೆ. ಅದರಲ್ಲೂ ದಿಢೀರ್ ಆಗಿ ಆಗಮಿಸುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜಿಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಪಾಲಿಕೆ ಉಪ ಆಯುಕ್ತ ಸಿ.ಎಸ್.ಮಂಜು (ಅಭಿವೃದ್ಧಿ), ಉಪ ಆಯುಕ್ತ ಸೋಮಶೇಖರ್ (ಕಂದಾಯ), ಸ್ವಚ್ಛ ಭಾರತ್ ಮಿಷನ್ ನೋಡಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಎಸ್.ಮೀನಾಕ್ಷಿ, ಪರಿಸರ ಅಭಿಯಂತರರಾದ ಶ್ರೀದೇವಿ ಹಾಗೂ ಮಾಧ್ಯಮದವರು ಸಂವಾದದಲ್ಲಿ ಹಾಜರಿದ್ದರು.

ಮೈಸೂರಲ್ಲಿ ವಿಶ್ವದರ್ಜೆ ರಸ್ತೆ ನಿರ್ಮಾಣ

ವಿಶ್ವದರ್ಜೆ ಮಟ್ಟದಲ್ಲಿ ನಗರದ ರಸ್ತೆಯೊಂದನ್ನು ಅಭಿವೃದ್ಧಿಪಡಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದರು. ಈ ಸಂಬಂಧ ಅಂದಾಜು ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಮೂರು ರಸ್ತೆಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಂಡಿದ್ದು, ಈ ಪೈಕಿ ಒಂದು ರಸ್ತೆಯನ್ನು ವಿಶ್ವದರ್ಜೆ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಮಿರ್ಜಾ ರಸ್ತೆ, ನ್ಯೂ ಕಾಂತರಾಜ್ ಅರಸ್ ರಸ್ತೆ, ಚಾಮರಾಜ ಜೋಡಿ ರಸ್ತೆ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಪಬ್ಲಿಕ್ ಸ್ಪೇಸ್, ಸೌಂದರೀಕರಣ, ಪಾದಚಾರಿಗಳ ಜೊತೆಗೆ ಸೈಕಲ್ ಸವಾರರು ಸಂಚರಿಸಲು ಈ ವಿಧದ ರಸ್ತೆಯಲ್ಲಿ ಅವಕಾಶ ಇರಲಿದೆ. ಅಗಲವಾದ ಫುಟ್‌ಪಾತ್ ಇರುತ್ತದೆ. ಜನರು ಆಸೀನರಾಗಲು ವ್ಯವಸ್ಥೆ ಇರುತ್ತದೆ. ಹಸರೀಕರಣ ಸಹ ಇರುತ್ತದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಯೋಜನೆಯ ಮುಂದಿನ ಪ್ರಕ್ರಿಯೆ ಆರಂಭಿಸಲಾಗುವುದು. ಮೂರು ರಸ್ತೆಗಳಿಗೂ ಡಿಪಿಆರ್ ಸಿದ್ಧಪಡಿಸಲಾಗುತ್ತದೆ. ಆದರೆ ಒಂದು ರಸ್ತೆ ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎಂದು ಅವರು ವಿವರಿಸಿದರು.

ಫೆ.8ರಂದು ಸ್ವಚ್ಛ ಸರ್ವೇಕ್ಷಣಾ ಪ್ರಯುಕ್ತ ಪಾಲಿಕೆಯಿಂದ ಸ್ವಚ್ಛತಾ ಓಟ

ಒಟ್ಟು 1 ಲಕ್ಷದ 44 ಸಾವಿರ ರೂ. ಬಹುಮಾನಕ್ಕೆ ವಿನಿಯೋಗ

ಮೈಸೂರು,ಫೆ.2(ಪಿಎಂ)– ಸ್ವಚ್ಛ ಸರ್ವೇಕ್ಷಣಾ 2025–26ರಲ್ಲಿ ಅಗ್ರ ಸ್ಥಾನಕ್ಕೇರುವ ಗುರಿಯೊಂದಿಗೆ ಮೈಸೂರು ಮಹಾನಗರ ಪಾಲಿಕೆ ಮುನ್ನಡೆಯುತ್ತಿದೆ. ಈ ವರ್ಷದ ಥೀಮ್‌ನಲ್ಲಿ ಜನತೆಯ ಸಹಭಾಗಿತ್ವಕ್ಕೆ ಆದ್ಯತೆ ನೀಡಲಾಗಿದೆ ಜನ ಸಾಮಾನ್ಯರ ಸಹಭಾಗಿತ್ವದ ಆಧಾರದಲ್ಲಿ ಅಂಕಗಳನ್ನು ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸ್ವಚ್ಛತಾ ಶ್ರಮದಾನ, ಸ್ವಚ್ಛತೆಗೆ ಕುರಿತಂತೆ ಪೋಸ್ಟರ್ ಮೇಕಿಂಗ್ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಅಂತೆಯೇ ಫೆ.8ರಂದು ಮ್ಯಾರಾಥನ್ ಆಯೋಜಿಸಲಾಗಿದೆ ಎಂದು ಪಾಲಿಕೆ ಶೇಖ್ ತನ್ವೀರ್ ಆಸಿಫ್ ತಿಳಿಸಿದರು.

ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಸ್ವಚ್ಛ ಸರ್ವೇಕ್ಷಣ 2025–26ರ ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

ಕಳೆದ ಸಾಲಿನ ಸ್ವಚ್ಛ ಸರ್ವೇಕ್ಷಣದಲ್ಲಿ ಮೈಸೂರು ಮಹಾನಗರ ಪಾಲಿಕೆಯು 23ನೇ ಸ್ಥಾನದಿಂದ 3ನೇ ಸ್ಥಾನ (3–10 ಲಕ್ಷ ಜನಸಂಖ್ಯೆಯೊಳಗಿನ ವಿಭಾಗದಲ್ಲಿ) ಪಡೆದಿತ್ತು. ಈ ಬಾರಿ ಅಗ್ರ ಸ್ಥಾನಕ್ಕೇರುವ ಗುರಿಯೊಂದಿಗೆ ಪಾಲಿಕೆ ಮುನ್ನಡೆಯುತ್ತಿದೆ. ಫೆ.8ರಂದು ಬೆಳಗ್ಗೆ 6ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ 'ಓಡೋಣ ಮೈಸೂರಿಗಾಗಿ ಒಂದಾಗೋಣ ಸ್ವಚ್ಛತೆಗಾಗಿ–ಸ್ವಚ್ಛತಾ ಓಟ' ಶೀರ್ಷಿಕೆಯಡಿ ಮ್ಯಾರಾಥನ್ ಆಯೋಜಿಸಲಾಗಿದೆ. 3, 5 ಹಾಗೂ 10 ಕಿ.ಮೀ. ವಿಭಾಗಗಳಲ್ಲಿ ಓಟ ನಡೆಯಲಿದೆ ಎಂದು ತಿಳಿಸಿದರು.

ಜೊತೆಗೆ ಮುಕ್ತ, ಮಹಿಳೆಯರು ಹಾಗೂ ಪುರುಷರ ಪ್ರತ್ಯೇಕ ಉಪವಿಭಾಗ, 18ರಿಂದ 40 ವರ್ಷದೊಳಗೆ, 41 ವರ್ಷ ಮೇಲ್ಪಟ್ಟವರ ಉಪವಿಭಾಗಗಳಲ್ಲಿ ಮ್ಯಾರಾಥನ್ ನಡೆಯಲಿದೆ. ಜೊತೆಗೆ ಮಾಜಿ ಯೋಧರು ಸೇರಿದಂತೆ ವಿವಿಧ ವಲಯದ ನಾಗರಿಕರ ವಿಶೇಷ ಉಪವಿಭಾಗದಲ್ಲಿ ಸಹ ಸ್ಪರ್ಧೆ ನಡೆಯಲಿದೆ. ನೋಂದಣಿ ಉಚಿತವಾಗಿದ್ದು, ಎಲ್ಲಾ ವಿಭಾಗಗಳಲ್ಲಿ ಪ್ರಥಮ ಸ್ಥಾನಕ್ಕೆ 10 ಸಾವಿರ, ದ್ವಿತೀಯ ಸ್ಥಾನಕ್ಕೆ 5 ಸಾವಿರ ಹಾಗೂ ತೃತೀಯ ಸ್ಥಾನಕ್ಕೆ 3 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಒಟ್ಟು 1 ಲಕ್ಷದ 44 ಸಾವಿರ ರೂ. ಅನ್ನು ಬಹುಮಾನಕ್ಕೆ ವೆಚ್ಚ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಸಂಘ ಸಂಸ್ಥೆಗಳು, ಬ್ಯಾಂಕ್‌ಗಳ ಸಹಕಾರ ಕೋರಿದ್ದು, ಟಿ ಶರ್ಟ್, ಕ್ಯಾಪ್ ನೀಡಲು ಪ್ರಾಯೋಜಕತ್ವ ದೊರೆಯುತ್ತಿದೆ. ಹೆಲ್ತ್ ಪಾರ್ಟನರ್ ಆಗಿ ಕಾಮಾಕ್ಷಿ ಆಸ್ಪತ್ರೆ ಹಾಗೂ ಅಪೋಲೋ ಆಸ್ಪತ್ರೆ ಸಹಕಾರ ನೀಡುತ್ತಿವೆ. ರಘುಲಾಲ್ ಮೆಡಿಕಲ್ಸ್ ಸಹ ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಪ್ಲಾಸ್ಟಿಕ್ ನಿಯಂತ್ರಿಸಲು ನಿವೃತ್ತ ಯೋಧರ ತಂಡ: ನಿಷೇದಿತ ಪ್ಲಾಸ್ಟಿಕ್ ನಿಯಂತ್ರಿಸುವಲ್ಲಿ ಪಾಲಿಕೆ ಗಂಭೀರ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪ ಸಂಬಂಧ ಪ್ರತಿಕ್ರಿಯಿಸಿ, ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ದಂಡ ವಿಧಿಸಲಾಗುತ್ತಿದೆ. ವರ್ಷದ ಪ್ರಾರಂಭದಲ್ಲೇ ಅಧಿಕಾರಿ ವರ್ಗಕ್ಕೆ ದಂಡ ವಿಧಿಸಲು ಗುರಿ ನಿಗದಿ ಮಾಡಲಾಗಿದೆ. ಸ್ವಚ್ಛ ಸರ್ವೇಕ್ಷಣ ಇರುವ ಹಿನ್ನೆಲೆಯಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಕ್ರಮಕ್ಕೆ ಮುಂದಾಗಲಾಗುವುದು. ಪ್ರಮುಖವಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಕಾರದಲ್ಲಿ ನಿವೃತ್ತ ಯೋಧರನ್ನು ಒಳಗೊಂಡ ತಂಡ ರಚಿಸಿ ನಿಷೇಧಿತ ಪ್ಲಾಸ್ಟಿಕ್ ವಿರುದ್ಧ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಯೋಜನೆ ಸಿದ್ಧವಾಗುತ್ತಿದೆ ಎಂದು ವಿವರಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ನಿಷೇದಿತ ಪ್ಲಾಸ್ಟಿಕ್‌ಗಳ ಉತ್ಪಾದನಾ ಘಟಕಗಳು ಯಾವುದೂ ಇಲ್ಲವೆಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಶಾಲಾ ಕಾಲೇಜುಗಳಲ್ಲಿ ಇಕೋ ಕ್ಲಬ್‌ಗಳ ರಚನೆ, ಹೌಸ್ ಹೋಲ್ಡ್‌ನಲ್ಲಿ ಸಗ್ರಿಗೇಷನ್‌ನಂತಹ ಕ್ರಮಗಳು ಸ್ವಚ್ಛತೆ ಕಾಪಾಡಿಕೊಳ್ಳಲು ಸಹಕಾರಿಯಾಗಲಿವೆ ಅಂಗಡಿ ಮುಂಗಟ್ಟುಗಳ ಮಾಲೀಕರು ನಮ್ಮ ಮಳಿಗೆಯಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ಮೂಲಕ ಸ್ವಚ್ಛತೆ ನಿಯಮಗಳನ್ನು ಉಲ್ಲಂಘನೆ ಮಾಡುವವರ ಸಂಬಂಧ ಮಾಹಿತಿ ನೀಡಬಹುದು. ಈ ರೀತಿಯಲ್ಲಿ ಸಹಕಾರ ನೀಡಿದರೆ ಪಡೆಯಲು ಪಾಲಿಕೆ ಸಿದ್ಧವಾಗಿದೆ. ಈ ಕುರಿತಂತೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.

ಪಾಲಿಕೆ ಶೂನ್ಯ ತ್ಯಾಜ್ಯ ನಿರ್ವಹಣಾ ಘಟಕಗಳ ಮೇಲ್ವಿಚಾರಣೆ, ಪಾರ್ಕ್, ವೃತ್ತಗಳ ನಿರ್ವಹಣೆಗೆ ಸಹಕಾರ ನೀಡಲು ಸಂಘ ಸಂಸ್ಥೆಗಳು ಮುಂದೆ ಬರಬಹುದು. ಈ ರೀತಿಯ ಸಹಭಾಗಿತ್ವ ನಮಗೆ ಅಗತ್ಯವಾಗಿದೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು. ಸ್ವಚ್ಛ ಸರ್ವೇಕ್ಷಣ ತಂಡವು ಮೌಲ್ಯಮಾಪನ ಸಂಬಂಧ ವಾರ್ಡ್ ಒಂದರಲ್ಲೇ 30 ಲೋಕೇಶನ್ ಪರಿಶೀಲಿಸಲಿದೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ದ್ವೇಷ ಭಾಷಣ ಮಸೂದೆ ಜಾರಿಯಾಗದಂತೆ ತಡೆಯಲು ರಾಜ್ಯಪಾಲರ ಯತ್ನ: ಪರಮೇಶ್ವರ್



ಬೆಂಗಳೂರು: ದ್ವೇಷ ಭಾಷಣ ಮಸೂದೆಯಲ್ಲಿನ 28 ಅಂಶಗಳನ್ನು ರಾಜ್ಯಪಾಲರು ಪ್ರಶ್ನಿಸಿದ್ದಾರೆ. ಅದನ್ನು ರಾಷ್ಟ್ರಪತಿಗಳಿಗೆ ಕಳಿಸಿದ್ದಾರೆ. ಮುಂದೆ ಏನಾಗುತ್ತದೆ ನೋಡೋಣ. ರಾಷ್ಟ್ರಪತಿಗಳು ಪರಿಶೀಲಿಸಿ ವಾಪಸ್ ಕೊಟ್ಟರೆ, ಬದಲಾವಣೆ ಮಾಡಿ ಕಳಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ್ ಅವರು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದು ಏನು ಬೇಕಾದರೂ ಮಾತನಾಡಿದರೆ, ಅದರ ಪರಿಣಾಮ ಸಮಾಜಕ್ಕೆ ಆಗುತ್ತದೆ. ಸಮುದಾಯಗಳನ್ನು ದೂಷಣೆ ಮಾಡುವುದು, ವೈಯಕ್ತಿಕವಾಗಿ ಮಾತನಾಡುವುದು. ಆ ಮಾತುಗಳು ಸಮಾಜದ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ದ್ವೇಷಭಾಷಣ ಮಸೂದೆ ತಂದಿದ್ದೇವೆ.

ಕೆಲವು ಭಾಗಗಳಲ್ಲಿ, ಕೆಲವರು ಭಾಷಣಗಳನ್ನು ಮಾಡಿದ್ದಾರೆ. ಭಾಷಣ ಮಾಡಿದ ಮೇಲೆ ಏನಾಯಿತು ಎಂಬುದನ್ನು ಗಮನಿಸಿದ್ದೇವೆ. ಇದಕ್ಕೆ ಕಡಿವಾಣ ಹಾಕಬೇಕು ಎಂಬ ಉದ್ದೇಶದಿಂದ ಬಿಲ್ ತಂದಿದ್ದೇವೆ. ಯಾರು ಏನು ಬೇಕಾದರೂ ಮಾತಾಡಬಹುದೇ? ಸಮಾಜದಲ್ಲಿ ಅಶಾಂತಿ ಉಂಟು ಮಾಡಬಹುದೇ ಎಂದು ಪ್ರಶ್ನಿಸಿದರು. ರಾಜ್ಯಪಾಲರು ಉದ್ದೇಶಪೂರ್ವಕವಾಗಿ, ದ್ವೇಷ ಭಾಷಣ ಮಸೂದೆ ನೆನೆಗುದಿಗೆ ಬೀಳಬೇಕು. ಇದು ಜಾರಿಯಾಗಬಾರದು ಎಂಬ ಉದ್ದೇಶದಿಂದ ರಾಷ್ಟ್ರಪತಿಗಳಿಗೆ ಕಳಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಇನ್ನೂ ಇತ್ತೀಚೆಗೆ ರಾಜ್ಯ ಸರ್ಕಾರ ಮಂಡಿಸಿದ ದ್ವೇಷ ಭಾಷಣ ಮಸೂದೆಯಲ್ಲಿನ 28 ಅಂಶಗಳನ್ನು ರಾಜ್ಯಪಾಲರು ಪ್ರಶ್ನಿಸಿದ್ದಾರೆ. ಅದನ್ನು ರಾಷ್ಟ್ರಪತಿಗಳಿಗೆ ಕಳಿಸಿದ್ದಾರೆ. ಮುಂದೆ ಏನಾಗುತ್ತದೆ ನೋಡೋಣ. ರಾಷ್ಟ್ರಪತಿಗಳು ಪರಿಶೀಲಿಸಿ ವಾಪಸ್ ಕೊಟ್ಟರೆ, ಬದಲಾವಣೆ ಮಾಡಿ ಕಳಿಸಲಾಗುವುದು ಎಂದರು.

ಕರ್ನಾಟಕ ರಾಜ್ಯಪಾಲರು ಉದ್ದೇಶ ಪೂರ್ವಕವಾಗಿ, ರಾಜ್ಯ ಸರ್ಕಾರ 'ದ್ವೇಷ ಭಾಷಣ ಮಸೂದೆ 2026' ನೆನೆಗುದಿಗೆ ಬೀಳಬೇಕು. ಇದು ಜಾರಿಯಾಗಬಾರದು ಎಂಬ ಉದ್ದೇಶದಿಂದಲೇ ರಾಷ್ಟ್ರಪತಿಗಳಿಗೆ ಕಳಿಸಿದ್ದಾರೆ ಎಂದು ಜಿ.ಪರಮೇಶ್ವರ ಅವರು ಅಭಿಪ್ರಾಯ ಹೊರ ಹಾಕಿದರು.

ಉದ್ಯಮಿ ಸಿ.ಜೆ.ರಾಯ್ ಅತ್ಮಹತ್ಯೆ ಪ್ರಕರಣದಲ್ಲಿ ಬೇರೆಬೇರೆ ರೀತಿಯಲ್ಲಿ ಊಹಾಪೋಹಗಳು ಆಗಬಾರದು ಎಂಬ ಕಾರಣದಿಂದ ಎಸ್‌ಐಟಿ ರಚನೆ ಮಾಡಿದ್ದೇವೆ ಎಸ್‌ಐಟಿ ವರದಿ ಏನು ಬರುತ್ತದೆ ಗಮನಿಸೋಣ. ಯಾರ ಪಾತ್ರಗಳು ಏನಿದೆ ಎಂಬುದು ನೋಡಬೇಕಾಗುತ್ತದೆ ಎಂದು ಹೇಳಿದರು.

ಹಿಂದೂ ಸಮಾಜೋತ್ಸವ ಅದ್ದೂರಿ ಮೆರವಣಿಗೆ


ಮೈಸೂರಿನ ಲಕ್ಷ್ಮೀಪುರಂ ವಸತಿ ಶಂಕರ ಮಠ ಭಾಗದಲ್ಲಿ ಸೋಮವಾರ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಮೆರವಣಿಗೆ ನಡೆಯಿತು.

ಮೈಸೂರು,ಫೆ.2(ಪಿಎಂ)– ನಗರದ ಲಕ್ಷ್ಮೀಪುರಂ ವಸತಿ ಶಂಕರ ಮಠ ಭಾಗದಲ್ಲಿ ಸೋಮವಾರ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಪ್ರಯುಕ್ತ ನಡೆದ ಅದ್ದೂರಿ ಮೆರವಣಿಗೆಯಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ರಾಮಾನುಜ ರಸ್ತೆಯಲ್ಲಿರುವ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆ ಚಾಲನೆ ನೀಡಲಾಯಿತು. ಕಂಸಾಳೆ, ನಂದಿ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳ ಪ್ರದರ್ಶನ ಮೆರವಣಿಗೆಗೆ ಮೆರಗು ನೀಡಿದರು. ಅಲ್ಲದೆ, ಸ್ವಾಮಿ ವಿವೇಕಾನಂದ ಹಾಗೂ ಸುಭಾಷ್ ಚಂದ್ರ ಬೋಸ್ ವೇಷಧಾರಿಗಳಾಗಿ ಮಕ್ಕಳು ಗಮನ ಸೆಳೆದರು.

ನಂತರ ಶಂಕರ ಮಠದ ಶ್ರೀ ಸಚ್ಚಿದಾನಂದ ವಿಲಾಸ್‌ನಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಹೇಶ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜ್ ಅರಸ್, ನಗರ ಪ್ರಧಾನ ಕಾರ್ಯದರ್ಶಿ ವಿ.ಸೋಮಸುಂದರ್, ಕೆಆರ್ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಜೈಶಂಕರ್, ಜೈರಾವ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶಿವಕುಮಾರ್, ಬಿ.ವಿ.ಮಂಜುನಾಥ್, ಎಂ.ಡಿ.ಪಾರ್ಥಸಾರಥಿ, ಪ್ರಮೀಳಾ ಭರತ್, ಜಗದೀಶ್, ಬಿಜೆಪಿ ಮುಖಂಡರಾದ ಪ್ರದೀಪ್‌ಕುಮಾರ್, ಜೋಗಿ ಮಂಜು, ರಾಕೇಶ್, ನಿಶಾಂತ್, ಟಿ.ಎಸ್.ಅರುಣ್, ಟಿ.ಪಿ.ಮಧುಸೂಧನ್, ಕಿಶೋರ್, ದೀಪಕ್, ಬದರಿ, ವಿ.ರವಿ, ಜ್ಯೋತಿ, ರೇಖಾ, ರವಿಶಂಕರ್, ನಾರಾಯಣ್ ಮತ್ತಿತರರು ಪಾಲ್ಗೊಂಡಿದ್ದರು.

ಅರಣ್ಯ ಪ್ರದೇಶದ ಗಿಡ ಮರ ಬೆಂಕಿಗಾಹುತಿ


ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿ.

ಮೈಸೂರು,ಫೆ.2(ಪಿಎಂ)– ಕುರುಚಲು ಅರಣ್ಯ ಭೂಮಿಯಲ್ಲಿ ಬೆಳೆದಿದ್ದ ಗಿಡ ಮರಗಳು ಬೆಂಕಿಗಾಹುತಿಯಾದ ಘಟನೆ ಬೋಗಾದಿ–ಗದ್ದಿಗೆ ರಸ್ತೆಯ ಕಣಿಯನಹುಂಡಿ ಗೇಟ್ ಸಮೀಪ ಭಾನುವಾರ ಸಂಭವಿಸಿದೆ. ಸ್ಥಳೀಯರ ಮಾಹಿತಿ ಮೇರೆಗೆ ಅಗ್ನಿಶಾಮಕ ವಾಹನಗಳೊಂದಿಗೆ ಧಾವಿಸಿ ಬಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಎಎಫ್‌ಎಸ್‌ಓ ಸೋಮಯ್ಯ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಯಿತು. ಅದಾಗ್ಯೂ ಹಣ್ಣಿನ ಗಿಡ, ಬಿದಿರು ಸಸಿ ಹಾಗೂ ಹುಲ್ಲುಗಾವಲು ಸೇರಿದಂತೆ ಅಪಾರ ಪ್ರಮಾಣದ ಸಸ್ಯ ಸಂಪತ್ತು ಬೆಂಕಿಗಾಹುತಿಯಾಗಿವೆ.

ಮುಖಂಡರ ಮುಂದೆ ಗ್ಲಾಮರಸ್ ಆಗಿರಲು ಬಯಸಬೇಡಿ

ಕಾಂಗ್ರೆಸ್ ನಾಯಕಿ ಮೋಟಮ್ಮ ಹೇಳಿಕೆ ವೈರಲ್



ಮಂಗಳೂರು: ಮಹಿಳೆಯರು ಗ್ಲಾಮರಸ್ ಆಗಿ ಕಾಣಿಸಿಕೊಂಡು ನಾಯಕರ ಹಿಂದೆ ಓಡಾಡುವುದನ್ನು ನಿಲ್ಲಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿ ಮೋಟಮ್ಮ ಹೇಳಿದ್ದಾರೆ.

ಮಂಗಳೂರಿನಲ್ಲಿ ಭಾನುವಾರ ಆರಂಭಗೊಂಡ ಮಹಿಳಾ ಮಂಡಲಗಳ ಒಕ್ಕೂಟದ ಸಮಾವೇಶದಲ್ಲಿ 'ರಾಜಕೀಯದಲ್ಲಿ ಮಹಿಳೆ' ವಿಷಯದ ಬಗ್ಗೆ ಮಾತನಾಡಿದ ಮೋಟಮ್ಮ ಅವರು, ಮಹಿಳಾ ರಾಜಕಾರಣಿಗಳು ನಾಯಕರ ಮುಂದೆ ಹಲ್ಲು ಕಿರಿದು ನಿಲ್ಲುವುದನ್ನು ಬಿಡಬೇಕು, ಸ್ವಂತ ಕಾಲಿನ ಮೇಲೆ ನಿಂತು ಕೆಲಸ ಮಾಡಿ ನಾಯಕರು ತಮ್ಮ ಬಳಿ ಸಹಾಯ ಕೇಳುವಂತೆ ಮಾಡಬೇಕು ಎಂದರು.

ಎಲ್ಲ ರಾಜಕೀಯ ಪಕ್ಷಗಳೂ ಮಹಿಳೆಯರನ್ನು ಕಡೆಗಣಿಸುತ್ತಿದ್ದು ಕೇವಲ ಸಾಂಬಾರ್‌ಗೆ ಪರಿಮಳ ತುಂಬುವ ಕರಿಬೇವಿನಂತೆ ಬಳಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪಕ್ಷಭೇದ ಬಿಟ್ಟು ಹೋರಾಡಬೇಕು. ಗ್ಲಾಮರಸ್ ಆಗಿ ಕಾಣಿಸಿಕೊಂಡು ನಾಯಕರ ಹಿಂದೆ ಓಡಾಡುವುದನ್ನು ನಿಲ್ಲಿಸಬೇಕು.

ಮತದಾರರಲ್ಲಿ ಶೇಕಡ 50ರಷ್ಟು ಮಹಿಳೆಯರು. ಆದರೆ ಯಾವ ಸರ್ಕಾರವೂ, ಯಾವ ಮುಖಂಡರೂ ಮಹಿಳೆಗೆ ಅಧಿಕಾರ ನೀಡಲು ಬಯಸಲಿಲ್ಲ. ಎಲ್ಲೂ ನಿರ್ಣಯ ಕೈಗೊಳ್ಳುವ ಅವಕಾಶ ಮಹಿಳೆಗೆ ಸಿಗುತ್ತಿಲ್ಲ ಎಂದು ಅವರು ಕಿಡಿಕಾರಿದರು.

ಖ್ಯಾತ ಪರಿಸರ ವಿಜ್ಞಾನಿ ವೀರಭದ್ರನ್ ರಾಮನಾಥನ್ ಅವರಿಗೆ ಕಾರ್ಪರ್ಡ್ ಪ್ರಶಸ್ತಿ



ಹೂಸ್ಟನ್: 'ಭೂವಿಜ್ಞಾನದ ನೊಬೆಲ್ ಪ್ರಶಸ್ತಿ' ಎಂದು ಖ್ಯಾತಿಯಾದ 2026ರ 'ಕಾರ್ಪರ್ಡ್ ಪ್ರಶಸ್ತಿ'ಯು ಅಮೆರಿಕದಲ್ಲಿನ ಭಾರತ ಮೂಲದ ಖ್ಯಾತ ಪರಿಸರ ವಿಜ್ಞಾನಿ ವೀರಭದ್ರನ್ ರಾಮನಾಥನ್ ಅವರಿಗೆ ಸಂದಿದೆ.

ಸ್ವಿಡನ್‌ನ ರಾಯಲ್ ಸ್ವಿಡೀಸ್ ಅಕಾಡೆಮಿ ಕೊಡಮಾಡುವ ಈ ಪ್ರಶಸ್ತಿಯು ಸುಮಾರು 6.15 ಕೋಟಿ ನಗದು ಪುರಸ್ಕಾರವನ್ನು ಒಳಗೊಂಡಿದೆ.

ರಾಮನಾಥನ್ ಅವರು ಕಳೆದು ಎರಡು ದಶಕಗಳಿಂದ ಜಾಗತಿಕ ತಾಪಮಾನ ಏರಿಕೆಯ ಬಗ್ಗೆ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಅದರಲ್ಲೂ 'ಕಪ್ಪು ಮೋಡ'ಗಳ ಬಗ್ಗೆ ಅವರು ಹೆಚ್ಚು ಬೆಳಕು ಚೆಲ್ಲಿದ್ದಾರೆ.

82 ವರ್ಷದ ರಾಮನಾಥನ್ ಅವರು ತಮಿಳುನಾಡಿನ ಮದುರೈ ಮೂಲದವರು. ಚೆನ್ನೈನಲ್ಲಿ ವಿದ್ಯಾಭ್ಯಾಸ ಮುಗಿಸಿದ ಅವರು ಆರಂಭದಲ್ಲಿ ಸಿಕಂದರಾಬಾದ್‌ನಲ್ಲಿ ರೆಫ್ರಿಜಿರೇಟರ್ ತಯಾರಿಕಾ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು.

ಅಣ್ಣಾಮಲೈ ವಿಶ್ವವಿದ್ಯಾಲಯ ಹಾಗೂ ಮದ್ರಾಸ್ ಐಐಟಿಯಲ್ಲಿ ಉನ್ನತ ಶಿಕ್ಷಣ ಪಡೆದು ವೀರಭದ್ರನ್ ಅವರು 1970ರಲ್ಲಿ ಅಮೆರಿಕಕ್ಕೆ ತೆರಳಿದ್ದರು.

1975 ರ ಸಮಯದಲ್ಲಿ 'ನಾಸಾ'ದಲ್ಲಿ ಕೆಲಸ ಮಾಡುತ್ತಿರುವಾಗ, ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್‌ಗಿಂತ ರೆಫ್ರಿಜಿರೇಟರ್‌ಗಳಿಂದ ಹೊರಹೊಮ್ಮುವ ಕ್ಲೋರೋಫ್ಲೋರೊ ಕಾರ್ಬನ್ ಸುಮಾರು 10 ಸಾವಿರ ಪಟ್ಟು ಹೆಚ್ಚು ತಾಪಮಾನ ಏರಿಕೆಗೆ ಕಾರಣವಾಗುತ್ತದೆ ಎಂದು ಸಂಶೋಧನೆ ಮಂಡಿಸಿದರು. ಅಲ್ಲಿವರೆಗೂ ಜಗತ್ತಿನ ವಿಜ್ಞಾನಿಗಳು ತಾಪಮಾನ ಏರಿಕೆಗೆ ಕಾರ್ಬನ್ ಡೈ ಆಕ್ಸೈಡ್‌ನೇ ಪ್ರಮುಖ ಕಾರಣ ಎಂದು ಭಾವಿಸಿದ್ದರು. ಮುಂದೆ ವೀರಭದ್ರನ್ ಅವರ ಹಲವು ಸಂಶೋಧನೆಗಳೇ ಜಾಗತಿಕ ತಾಪಮಾನ ಏರಿಕೆಯ ನಿಯಂತ್ರಣದ ಹಲವು ಜಾಗತಿಕ ಒಪ್ಪಂದಗಳಿಗೆ ಕಾರಣವಾದವು.

ಅಷ್ಟೇ ಅಲ್ಲದೇ ವೀರಭದ್ರನ್ ಅವರು ಏಷ್ಯಾದಲ್ಲಿ ಕೈಗೊಂಡ ಭೂ ಅಧ್ಯಯನ, ಪರಿಸರ ಅಧ್ಯಯನಗಳು ಜಗತ್ತಿಗೆ ಅಚ್ಚರಿಯ ಸಂಗತಿಗಳನ್ನು ನೀಡಿದವು. ಅತಿಯಾದ ವಾಯುಮಾಲಿನ್ಯದಿಂದ ಭಾರತದ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಉಂಟಾಗುತ್ತಿದೆ ಹಾಗೂ ಹಿಮಾಲಯ ಕರಗಲು ಕಾರಣವಾಗುತ್ತಿದೆ ಎಂದು ಹೇಳಿದ್ದರು. ಸದ್ಯ ಅಮೆರಿಕದ ಹೂಸ್ಟನ್‌ನಲ್ಲಿ ನೆಲೆಸಿರುವ ಅವರು, ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

'ವಿಬಿ–ಜಿ ರಾಮ್ ಜಿ' ಕಾನೂನು ವಾಪಸ್ ಪಡೆಯಲು ಮಹಾ ಪಂಚಾಯತ್ ಆಗ್ರಹ

ರಾಷ್ಟ್ರಪತಿಗೆ ಮನವಿ ಪತ್ರ

ಬೆಂಗಳೂರು: ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಳಿಸಿ ಆಂದೋಲನದ ಭಾಗವಾಗಿ ಮನ್ರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ ವತಿಯಿಂದ ಸೋಮವಾರ ಮಹಾ ಪಂಚಾಯತ್ ನಡೆಸಲಾಯಿತು.

ವಿಬಿಜಿ– ರಾಮ್ ಜಿ 2025 ಕಾನೂನನ್ನು ವಾಪಸ್ ಪಡೆಯಬೇಕು ಹಾಗೂ ನರೇಗಾ ಯೋಜನೆಯನ್ನು ಮರುಸ್ಥಾಪಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖ್ಯ ಕಾರ್ಯದರ್ಶಿಗಳ ಮೂಲಕ ರಾಷ್ಟ್ರಪತಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಗ್ರಾಮೀಣ ಭಾಗದ ಸಾವಿರಾರು ಜನರು ಸೇರಿದ್ದ ಮಹಾ ಪಂಚಾಯತ್ ಪ್ರತಿಭಟನೆಗೆ ಕಾರ್ಮಿಕ, ರೈತ, ದಲಿತ ಹಾಗೂ ಮಹಿಳಾ ಸಂಘಟನೆಗಳು ಕೈ ಜೋಡಿಸಿದ್ದವು. ರಾಜ್ಯದ ವಿವಿಧೆಡೆ ಆಗಮಿಸಿದ್ದ ಸಹಸ್ರಾರು ಕಾರ್ಮಿಕರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ನರೇಗಾ ಯೋಜನೆಯು ಕಳೆದ ಎರಡು ದಶಕಗಳಿಂದ ದೇಶದ ಗ್ರಾಮೀಣ ಕೂಲಿಕಾರರು ಹಾಗೂ ಸಣ್ಣ ರೈತರ ಜೀವನೋಪಾಯಕ್ಕೆ ಆಧಾರವಾಗಿತ್ತು. ಅಂತಹ ಕಾನೂನನ್ನು ಕಿತ್ತು ಹಾಕಿರುವ ಕೇಂದ್ರ ಸರ್ಕಾರ, ಹೊಸದಾಗಿ ಜಾರಿಗೆ ತಂದಿರುವ 'ವಿಕಸಿತ ಭಾರತ– ಗ್ಯಾರಂಟಿ ಫಾರ್ ರೋಜ್‌ಗಾರ್ ಆಂಡ್ ಆಜೀವಿಕಾ ಮಿಷನ್(ಗ್ರಾಮೀಣ) ವಿಬಿ ಜಿ– ರಾಮ್– ಜಿ 2025 ಕಾನೂನನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಮನ್ರೇಗಾ ಯೋಜನೆಯಡಿ 26 ಕೋಟಿ ನೋಂದಾಯಿತ ಕಾರ್ಮಿಕರಿದ್ದಾರೆ. ಕರ್ನಾಟಕವೊಂದರಲ್ಲೇ 1.79 ಕೋಟಿ ಜನರು ನೋಂದಾಯಿಸಿಕೊಂಡಿದ್ದಾರೆ. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಶೇ. 30 ರಷ್ಟು ಮಂದಿ ದಲಿತರು ಹಾಗೂ ಆದಿವಾಸಿಗಳಾಗಿದ್ದಾರೆ ಎಂದು ಮಹಾ ಪಂಚಾಯತ್ ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಹೇಳಿದೆ.

ಗ್ರಾಮೀಣ ಜನರಿಗೆ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸುವ ಯೋಜನೆ ಪ್ರತಿ ವರ್ಷವೂ ಬಲವಾಗಿ ಬೆಳೆಯಬೇಕಿತ್ತು. ಬದಲಾಗಿ ಕಳೆದ 11 ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈ ಕಾನೂನನ್ನು ನಿರಂತರವಾಗಿ ದುರ್ಬಲಗೊಳಿಸಿದೆ. ಬಿಗಿಯಾದ ಕೇಂದ್ರದ ನಿಯಂತ್ರಣ, ಸಾಕಷ್ಟು ಹಣಕಾಸಿನ ಬೆಂಬಲವನ್ನು ನಿರಾಕರಣೆ ಪರಿಣಾಮವಾಗಿ ಸರಿಯಾದ ವೇಳೆಗೆ ವೇತನ ಸಿಗುತ್ತಿರಲಿಲ್ಲ. ಅತಿಯಾದ ಡಿಜಿಟಲೀಕರಣದಿಂದ ಕಾರ್ಮಿಕರಿಗೆ ಕೆಲಸ ಮಾಡಿದರೂ ವೇತನ ಸಿಗುತ್ತಿಲ್ಲ. ಕೋಟಿಗಟ್ಟಲೆ ಜಾಬ್ ಕಾರ್ಡ್‌ಗಳು ಡಿಲೀಟ್ ಆಗಿವೆ. ಈ ಎಲ್ಲಾ ಸಮಸ್ಯೆಗಳ ಹೊರತಾಗಿಯೂ ಕರ್ನಾಟಕದ ಲಕ್ಷಾಂತರ ಕುಟುಂಬಗಳಿಗೆ ಮನ್ರೇಗಾ ಜೀವನಾಡಿಯಾಗಿ ಉಳಿದಿದೆ ಎಂದು ಹೇಳಿದೆ.

ಗಾಂಧೀಜಿಯವರನ್ನ ಭಾರತೀಯರಿಗಿಂತ ವಿದೇಶಿಗರೇ ಹೆಚ್ಚಾಗಿ ಅರ್ಥೈಸಿಕೊಂಡಿದ್ದಾರೆ

ಪತ್ರಕರ್ತ ಡಾ.ಜಗದೀಶ್ ಕೊಪ್ಪ ಅಭಿಮತ


ಮಹಾರಾಣಿ ಕಲಾ ಕಾಲೇಜಲ್ಲಿ ಗಾಂಧೀಜಿ ಸಂಸ್ಮರಣ ಕಾರ್ಯಕ್ರಮದ ಅಂಗವಾಗಿ ಗಾಂಧೀಜಿ ಅವರ ಅಪರೂಪದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು,ಫೆ.2(ಎಂಟಿವೈ)–ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರನ್ನು ಭಾರತೀಯರಿಗಿಂತ ವಿದೇಶಿಗರೇ ಹೆಚ್ಚಾಗಿ ಅರ್ಥೈಸಿಕೊಂಡಿದ್ದಾರೆ ಎಂದು ಪತ್ರಕರ್ತ ಡಾ. ಜಗದೀಶ್ ಕೊಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಂಧೀಜಿ ಅವರು ತಮ್ಮ ಜೀವನದುದ್ದಕ್ಕೂ ಸತ್ಯ, ಅಹಿಂಸೆ ಮತ್ತು ತ್ಯಾಗವನ್ನು ಪ್ರತಿಪಾದಿಸುತ್ತಾ ಬಂದರು. ಆ ಮೂಲಕವೇ ಗಾಂಧೀಜಿ ಅವರು ಮನೆ ಮಾತಾಗಿದ್ದರು. ಅವರ ಹತ್ಯೆ ತುಂಬಲಾರದ ನಷ್ಟ ಎಂದು ವಿಷಾದಿಸಿದ ಅವರು, ಗಾಂಧೀಜಿಯವರನ್ನು ಭಾರತೀಯರು ತಿಳಿದುಕೊಂಡಿದ್ದಕ್ಕಿಂತ ಹೆಚ್ಚಾಗಿ ವಿದೇಶಿಯರು ತಿಳಿದುಕೊಂಡಿದ್ದಾರೆ. ವಿದೇಶಿ ಪತ್ರಕರ್ತ ವೆಬ್ ಮಿಲ್ಲರ್ ಜಗತ್ತಿನ ನೂರಕ್ಕೂ ಹೆಚ್ಚು ಪತ್ರಿಕೆಗಳಲ್ಲಿ ಬ್ರಿಟಿಷರ ನರಕ ಸದೃಶ್ಯ ದೃಶ್ಯವನ್ನು ಹಾಗೂ ಅದರ ವಿರುದ್ಧ ಗಾಂಧೀಜಿಯವರ ಹೋರಾಟವನ್ನು ಜಗತ್ತಿಗೆ ತೋರಿಸಿಕೊಟ್ಟು ಗಾಂಧಿ ಯಾರೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಗಾಂಧೀಜಿ ಅವರ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಬೇಕಾಗಿದೆ. ಯುವ ಜನರು ಗಾಂಧೀಜಿ ಅವರನ್ನು ಸರಿಯಾಗಿ ತಿಳಿದುಕೊಂಡು, ಅವರ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಲೇಜು–ತಾಂತ್ರಿಕ ಶಿಕ್ಷಣ ಇಲಾಖೆ ಮೈಸೂರು ಪ್ರಾದೇಶಿಕ ವಲಯದ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್.ಪ್ರತಿಮಾ ಮಾತನಾಡಿ, ವಿದ್ಯಾರ್ಥಿಗಳು ಗಾಂಧೀಜಿ ಅವರನ್ನು ಕೇವಲ ಗಾಂಧಿ ಜಯಂತಿ, ಸರ್ವೋದಯ ದಿನಗಳಿಗಷ್ಟೇ ಮೀಸಲಾಗದೆ ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸಾಧನೆ ಹಾದಿಯತ್ತ ಸಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನಿತಾ ವಹಿಸಿದ್ದರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಅಣ್ಣಯ್ಯ ತೈಲೂರು, ವ್ಯವಸ್ಥಾಪಕ ವೆಂಕಟೇಶ್, ಹಿರಿಯ ಪ್ರಾಧ್ಯಾಪಕ ಪ್ರೊ.ದೇವೇಗೌಡ, ಶಾಂತಕುಮಾರಿ, ಡಾ.ಲಿಂಗರಾಜು, ಪೂರ್ಣಿಮಾ, ಡಾ.ನಾಗವೇಣಿ ಹಾಗೂ ಇನ್ನಿತರ ಪ್ರಾಧ್ಯಾಪಕರು ಉಪಸ್ಥಿತರಿದ್ದರು. ಇದೇ ವೇಳೆ ಗಾಂಧೀಜಿಯವರ ಕುರಿತಾದ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಅಲ್ಲದೆ, ರಸಪ್ರಶ್ನೆ ಆಯೋಜಿಸಲಾಗಿತ್ತು.

ಮೈಸೂರು ಮಿತ್ರ ಮಂಗಳವಾರ 3 ಫೆಬ್ರವರಿ 2026

ನಿವೇಶನ ರಹಿತರಿಗೆ ನಿವೇಶನ ಕೊಡಿಸುವುದು

ಸರ್ಕಾರ, ಗ್ರಾಪಂ, ಶಾಸಕರ ಜವಾಬ್ದಾರಿ

ಶಾಸಕ ಗಣಿಗ ರವಿಕುಮಾರ್ ಅಭಿಪ್ರಾಯ

ಮಂಡ್ಯ, ಫೆ.2–ಜನರು ನಿವೇಶನ ಇಲ್ಲದೆ ಇರಬಾರದು. ಎಲ್ಲರೂ ನಿವೇಶನ ಹೊಂದಬೇಕು ಎಂಬುದು ಈ ದೇಶದ ಕಾನೂನು. ಹೀಗಾಗಿ ನಿವೇಶನ ರಹಿತರಿಗೆ ನಿವೇಶನ ಕೊಡಿಸುವುದು ಸರ್ಕಾರ, ಸ್ಥಳೀಯ ಗ್ರಾಪಂ ಮತ್ತು ಶಾಸಕರ ಕರ್ತವ್ಯ ಎಂದು ಶಾಸಕ ರವಿಕುಮಾರ್ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಲ್ಲೆಗೆರೆ ಗ್ರಾಪಂ ವತಿಯಿಂದ ಬಸರಾಳು ಹೋಬಳಿ ತಂಗಳಗೆರೆಯಲ್ಲಿ ನಡೆದ ರವಿಗೂಡು–ಪಿ.ರವಿಕುಮಾರ್ ಗೌಡ ಆಶ್ರಯ ಬಡಾವಣೆ ನಿರ್ಮಾಣ ಶಿಲಾನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿವೇಶನ ರಹಿತರಿಗೆ ವಸತಿ ನಿವೇಶನ ನೀಡುವುದು ನಮ್ಮ ಸರ್ಕಾರದ ಧ್ಯೇಯವಾಗಿದೆ. ಅದರ ಅಂಗವಾಗಿ ಅರ್ಹರಿಗೆ ನಿವೇಶನ ನೀಡಲು ಇಂದು ಶಿಲಾನ್ಯಾಸ ನೆರವೇರಿಸಲಾಗಿದೆ ಎಂದರು.

ಸದರಿ ಜಾಗದಲ್ಲಿ 120 ನಿವೇಶನಗಳನ್ನು ನೀಡಲಾಗುವುದು. ಈಗಾಗಲೇ 80 ಹಕ್ಕು ಪತ್ರಗಳು ಸಿದ್ಧವಿದೆ. ಬಾಕಿ ನಿವೇಶನಗಳಿಗೆ ಅಗತ್ಯ ದಾಖಲೆಗಳನ್ನು ನೀಡಿ ನಂತರ ನಾನೇ ನಿಮ್ಮ ಮನೆ ಬಾಗಿಲಿಗೆ ಬಂದು ಹಕ್ಕು ಪತ್ರಗಳನ್ನು ವಿತರಿಸುತ್ತೇನೆ ಎಂದು ಹೇಳಿದರು.

ಕಳೆದ ಬಾರಿ ಅನೇಕರು ಹೋರಾಟ ಮಾಡಿದ ಫಲವಾಗಿ ಬೂದನೂರು ಉತ್ಸವದಲ್ಲಿ 120 ಹಕ್ಕು ಪತ್ರಗಳನ್ನು ವಿತರಿಸಲಾಗಿತ್ತು. ಈ ಬಾರಿ ಬೂದನೂರು ಉತ್ಸವದಲ್ಲಿ 50 ಹಕ್ಕು ಪತ್ರಗಳನ್ನು ವಿತರಿಸಲು ಸಿದ್ಧತೆ ಕೈಗೊಳ್ಳಲಾಗಿದೆ. ಮಂಡ್ಯ ತಾಲೂಕಿನ ಅರ್ಹ ನಿವೇಶನ ರಹಿತರಿಗೆ ನಿವೇಶನ ನೀಡಲು ಕಳೆದ ಎರಡೂವರೆ ವರ್ಷದಲ್ಲಿ ಡಿಸಿ, ತಹಸೀಲ್ದಾರ್, ತಾಪಂ ಇಓಗಳೊಂದಿಗೆ 10ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ ಎಂದರು.



ಕಾರ್ಯಕ್ರಮವನ್ನು ಶಾಸಕ ರವಿಕುಮಾರ್ ಉದ್ಘಾಟಿಸಿದರು.

ಹುಲಿವಾನದಲ್ಲಿ 8 ಎಕರೆ ಜಾಗ ಗುರುತಿಸಿ 550 ಜನರಿಗೆ ನಿವೇಶನ ನೀಡಲು ಸಿದ್ಧತೆ ನಡೆಸಲಾಗಿದೆ. ತಿಂಗಳೊಳಗೆ ಸದರಿ ಕಾರ್ಯಕ್ರಮ ಕೈಗೊಳ್ಳಲಾಗುವುದು. ಬಸರಾಳಲ್ಲಿ 2 ಎಕರೆ ಜಾಗ ಗುರುತಿಸಲಾಗಿದ್ದು, ಅರ್ಹರಿಗೆ 3 ತಿಂಗಳೊಳಗೆ ನಿವೇಶನ ಹಂಚಿಕೆ ಮಾಡಲಾಗುವುದು ಎಂದರು.

ಹಲ್ಲೆಗೆರೆಯಲ್ಲಿ ನಿವೇಶನ ಇಲ್ಲದವರಿಗೆ ಕಮ್ಮನಾಯಕಹಳ್ಳಿಯಲ್ಲಿ 2 ಎಕರೆ ಗ್ರಾಮ ಠಾಣಾ ಜಾಗ ಗುರುತಿಸಲಾಗಿದೆ. ಜೊತೆಗೆ 8 ಎಕರೆ ಸರ್ಕಾರಿ ಬೀಳು ಇದ್ದು ಒಟ್ಟು 10 ಎಕರೆಯಲ್ಲಿ ಸುಸಜ್ಜಿತ ಬಡಾವಣೆ ನಿರ್ಮಿಸಿ 500ಕ್ಕೂ ಹೆಚ್ಚು ಅರ್ಹರಿಗೆ ನಿವೇಶನ ಕಲ್ಪಿಸಲಾಗುವುದು. ಅರ್ಹ ನಿವೇಶನ ರಹಿತರು ಪಿಡಿಓ ಬಳಿ ಅರ್ಜಿ ಸಲ್ಲಿಸಿ. ಯಾವುದೇ ಒತ್ತಡಕ್ಕೆ ಮಣಿಯದೆ ಅರ್ಹರಿಗೆ ನಿವೇಶನ ಹಂಚಲಾಗುವುದು ಎಂದು ತಿಳಿಸಿದರು.

ಚಂದಗಾಲು ಗ್ರಾಮದಲ್ಲಿ 7 ಎಕರೆ ಮತ್ತು ಗಣಿಗದಲ್ಲಿ 4 ಎಕರೆ ಜಾಗ ಗುರುತಿಸಲಾಗಿದ್ದು, ಅರ್ಹರಿಗೆ ನಿವೇಶನ ಹಂಚಿಕೆ ಮಾಡಲಾಗುವುದು. ಕೆರಗೋಡಿನಲ್ಲಿ 30 ನಿವೇಶನ ಗುರುತಿಸಲಾಗಿದ್ದು, ಮುಂದಿನ ವಾರದೊಳಗೆ ಹಕ್ಕು ಪತ್ರ ವಿತರಿಸಲಾಗುವುದು. ಮುದ್ದನಘಟ್ಟದಲ್ಲಿ 80 ಎಕರೆ ಸರ್ಕಾರಿ ಪ್ರದೇಶವನ್ನು ಗುರುತಿಸಲಾಗಿದ್ದು, ಸದರಿ ಜಾಗವನ್ನು ಕೈಗಾರಿಕೆಗೆ ಮೀಸಲಿಡಲಾಗುವುದು. ಮಹಿಳೆಯರು, ಯುವಕರು, ಬಡವರಿಗೆ ಅನುಕೂಲವಾಗುವ ಕಾರ್ಖಾನೆ ಸ್ಥಾಪಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಸಿ.ತ್ಯಾಗರಾಜು, ಕೃಷ್ಣ, ತಹಸೀಲ್ದಾರ್ ವಿಶ್ವನಾಥ್, ತಾಪಂ ಇಓ ಲೋಕೇಶ್‌ಮೂರ್ತಿ, ಸಿ.ಎಂ.ದ್ಯಾವಪ್ಪ, ಗ್ರಾಪಂ ಅಧ್ಯಕ್ಷೆ ಪ್ರೇಮಮ್ಮ, ಉಪಾಧ್ಯಕ್ಷೆ ಭಾಗ್ಯಮ್ಮ, ಸದಸ್ಯರಾದ ಆರ್.ಗೀತಾ, ಕರೀಗೌಡ, ವಿನೋದ್, ಅಶೋಕ್, ವೈಶಾಲಿ, ಹೆಚ್.ಎಂ.ರಮೇಶ್, ಟಿ.ಲೋಕೇಶ್, ತಾಯಮ್ಮ, ರಾಮಲಿಂಗೇಗೌಡ, ಮಾಲಾಶ್ರೀ, ನಿಂಗರಾಜು, ದಯಾನಂದ್, ಸುಧಾಮಣಿ ಸೇರಿದಂತೆ ಇನ್ನಿತರರಿದ್ದರು.

ಮಳವಳ್ಳಿ ಹಲವೆಡೆ ಪ್ರತ್ಯೇಕ ಕಳವು ಪ್ರಕರಣ

10 ಖದೀಮರ ಬಂಧನ; 35 ಲಕ್ಷ ಮೌಲ್ಯದ ಮಾಲು ವಶಕ್ಕೆ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಮಾಹಿತಿ

ಮಂಡ್ಯ, ಫೆ.2– ಮಳವಳ್ಳಿ ತಾಲೂಕಿನ ವಿವಿಧೆಡೆ ನಡೆದ ಪ್ರತ್ಯೇಕ ಕಳವು ಪ್ರಕರಣಗಳಲ್ಲಿ ಸುಮಾರು 35 ಲಕ್ಷ ರೂ. ಮೌಲ್ಯದ ಚಿನ್ನ, ಬೆಳ್ಳಿ, ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಪಟ್ಟಣ ವ್ಯಾಪ್ತಿಯ ಮನೆಗಳ್ಳತನ, ಸಾಗ್ಯ ಸರಗೂರು ಗ್ರಾಮದ ಪಟ್ಟಲದಮ್ಮ ದೇವಸ್ಥಾನದಲ್ಲಿ ಕಳ್ಳತನ ಪೈಕಿ 168 ಗ್ರಾಂ ಚಿನ್ನ, 291 ಗ್ರಾಂ ಬೆಳ್ಳಿ ಹಾಗೂ ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳಲ್ಲಿ 19 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು. ಅಲ್ಲದೇ ಈ ಎಲ್ಲಾ ಪ್ರಕರಣಗಳಲ್ಲಿ ಓರ್ವ ಅಪ್ರಾಪ್ತ ಸೇರಿದಂತೆ 10 ಮಂದಿ ಆರೋಪಿಗಳನ್ನು ಮಳವಳ್ಳಿ ಪೊಲೀಸರು ಬಂಧಿಸಿದ್ದಾರೆ.

ಮಳವಳ್ಳಿ ಪಟ್ಟಣದ ನಿವಾಸಿ ಗಂಗಾಧರ್ ಅವರ ಮನೆಯಲ್ಲಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 16 ವರ್ಷದ ಬಾಲಕ ಹಾಗೂ ಆತನ ತಂದೆಯನ್ನು ಬಂಧಿಸಲಾಗಿದೆ. ತನಿಖೆ ವೇಳೆ ಮಳವಳ್ಳಿ ಪುರ ಪೊಲೀಸ್ ಠಾಣೆಯಲ್ಲಿ 3, ಹಲಗೂರು ಹಾಗೂ ಬನ್ನೂರು ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣ ಸೇರಿದಂತೆ ಒಟ್ಟು 20 ಲಕ್ಷ ರೂ. ಮೌಲ್ಯದ 144 ಗ್ರಾಂ ಚಿನ್ನ, 46 ಗ್ರಾಂ ಬೆಳ್ಳಿ ವಶಪಡಿಸಿಕೊಳ್ಳಲಾಗಿದೆ.

ಸಾಗ್ಯ ಸರಗೂರು ಗ್ರಾಮದ ಶ್ರೀಪಟ್ಟಲದಮ್ಮ ದೇವಸ್ಥಾನದ ಬಾಗಿಲು ಒಡೆದು ಕಳ್ಳತನ ಪ್ರಕರಣದಲ್ಲಿ ತಮಿಳುನಾಡಿನ ವಿಜಯ್, ಮಣಿ, ಮಂಡ್ಯದ ಮಧುರ, ಭರತ್, ರಾಮನಗರದ ನವೀನ್, ಮೈಸೂರಿನ ಶಬ್ಬೀರ್ ಸೇರಿದಂತೆ 6 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಎಲ್ಲರ ವೃತ್ತಿ ಚಿಂದಿ ಆಯುವುದು.



ಸುದ್ದಿಗೋಷ್ಠಿಯಲ್ಲಿ ಎಸ್ಪಿ ಶೋಭಾರಾಣಿ ಮಾತನಾಡಿದರು.

ಪಾತ್ರೆ ರಿಪೇರಿ ಮಾಡುವುದಾಗಿದೆ. ಆರೋಪಿಗಳ ವಿರುದ್ಧ ಹಲಗೂರು ಠಾಣಾ ವ್ಯಾಪ್ತಿಯಲ್ಲಿ 4 ಪ್ರಕರಣಗಳಿದ್ದು, 24 ಗ್ರಾಂ ಚಿನ್ನ, 245 ಗ್ರಾಂ ಬೆಳ್ಳಿ, 5094 ರೂ. ಹುಂಡಿ ಹಣ, 2 ಜೊತೆ ದೀಪಾಲೆ ಕಂಬ, 2 ಪೂಜಾ ತಟ್ಟೆ, 5 ಗಂಟೆ, ಬೈಕ್ ಮತ್ತು ಗೂಡ್ಸ್ ಆಟೋ ಹಾಗೂ ಎರಡು ಮೇಕೆಗಳ ಮಾರಾಟದ ಹಣ ಸೇರಿ ಒಟ್ಟು 7,17,844 ರೂ. ವಶಪಡಿಸಿಕೊಳ್ಳಲಾಗಿದೆ.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಬೈಕ್ ಕಳ್ಳತನ ಪ್ರಕರಣ ಭೇದಿಸಿರುವ ಟೌನ್ ಪೊಲೀಸರು ಮೈಸೂರಿನ ಕೆ.ಕಾರ್ತಿಕ್, ಮಳವಳ್ಳಿಯ ಎಸ್.ಎಸ್.ಸಾಗರ್ ಮತ್ತು ಎಂ.ಸಿ.ಪ್ರಜ್ವಲ್ ಎಂಬುವರನ್ನು ಬಂಧಿಸಿದ್ದಾರೆ. ತನಿಖೆ ವೇಳೆ ಬನ್ನೂರು ಠಾಣಾ ವ್ಯಾಪ್ತಿಯಲ್ಲಿ 10, ಕೊಳ್ಳೇಗಾಲ ಟೌನ್, ಕೊಳ್ಳೇಗಾಲ ಗ್ರಾಮಾಂತರ, ಮಂಡ್ಯ ಪಶ್ಚಿಮ ಠಾಣೆ ವ್ಯಾಪ್ತಿಯಲ್ಲಿ ತಲಾ 2, ಮೈಸೂರು ನಗರ, ಮಳವಳ್ಳಿ, ಕಿರುಗಾವಲು ಠಾಣಾ ವ್ಯಾಪ್ತಿಯಲ್ಲಿ ತಲಾ 1 ಪ್ರಕರಣಗಳಿಂದ 19 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಈ ಎಲ್ಲಾ ಪ್ರಕರಣಗಳ ಕಾರ್ಯಾಚರಣೆಯಲ್ಲಿ ಮಳವಳ್ಳಿ ಟೌನ್ ಪೊಲೀಸ್ ಠಾಣೆಯ ಎಸ್‌ಐಗಳಾದ ಶಿವಲಿಂಗ ದಳವಾಯಿ, ಲೋಕೇಶ್, ಎಎಸ್‌ಐಗಳಾದ ಎಂ.ಬಿ.ಸುರೇಶ್, ರಮೇಶ್, ಗೋಪಾಲ್, ಸಿಬ್ಬಂದಿಗಳಾದ ಮಹದೇಶ್, ಮಹದೇವಸ್ವಾಮಿ, ಹರ್ಷವರ್ಧನ್, ಪ್ರಭುಸ್ವಾಮಿ, ರಿಯಾಜ್ ಪಾಷಾ, ಸಿದ್ದರಾಜು, ವಿಕಾಸ್, ರಫೀಕ್, ಶ್ರೀನಿವಾಸ್, ಮೋಹನ್ ಕುಮಾರ್, ನದಾಫ್, ಮಂಜು, ಮಧುಕಿರಣ್ ಭಾಗವಹಿಸಿದ್ದರು. ಅಲ್ಲದೇ ಡಿವೈಎಸ್‌ಪಿ ಎಸ್.ಬಿ.ಯಶವಂತ್ ಕುಮಾರ್, ಸಿಐ ಬಿ.ಎಸ್.ಶ್ರೀಧರ್ ಮಾರ್ಗದರ್ಶನದಲ್ಲಿ ಪ್ರಕರಣ ಭೇದಿಸಿ, ಆರೋಪಿಗಳನ್ನು ಬಂಧಿಸಿದ ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿದರು.

ಗೋಷ್ಠಿಯಲ್ಲಿ ಎಎಸ್ಪಿಗಳಾದ ಸಿ.ಇ.ತಿಮ್ಮಯ್ಯ, ಎಸ್.ಇ.ಗಂಗಾಧರಸ್ವಾಮಿ, ಡಿವೈಎಸ್‌ಪಿ ಎಸ್.ಬಿ.ಯಶವಂತ್ ಕುಮಾರ್, ಸಿಐ ಬಿ.ಎಸ್.ಶ್ರೀಧರ್ ಇತರರಿದ್ದರು.

ವಿಜೃಂಭಣೆಯ ಶ್ರೀಸ್ವತಂತ್ರ ಸಿದ್ದಲಿಂಗೇಶ್ವರ ಬ್ರಹ್ಮ ರಥೋತ್ಸವ



ಶ್ರೀಸ್ವತಂತ್ರ ಸಿದ್ದಲಿಂಗೇಶ್ವರರ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ, ಫೆ.2– ತಾಲೂಕಿನ ಕಾಪನಹಳ್ಳಿ ಗವಿಮಠದ ಶ್ರೀಸ್ವತಂತ್ರ ಸಿದ್ದಲಿಂಗೇಶ್ವರ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಶಾಸಕ ಹೆಚ್.ಟಿ.ಮಂಜು, ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಟಿ.ಲೋಕೇಶ್, ಕೆಎಂಎಫ್ ನಿರ್ದೇಶಕ ಅಶೋಕ್, ಮಾಜಿ ಸಿಎಂ ವಿಶೇಷಾಧಿಕಾರಿ ಅರವಿಂದ್ ಹಾಗೂ ಗವಿಮಠದ ಪೀಠಾಧ್ಯಕ್ಷ ಶ್ರೀ ಸ್ವತಂತ್ರ ಚನ್ನವೀರಸ್ವಾಮೀಜಿ ಅವರು ಕ್ಷೇತ್ರದ ಅಧಿದೇವತೆ ಮಡುವಿನಮ್ಮ ತಾಯಿ ಹಾಗೂ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಎಲ್ಲಾ ಜಾತಿ ವರ್ಗಗಳ ಜನರು ರಥೋತ್ಸವದಲ್ಲಿ ಭಾಗವಹಿಸಿ ಭಗವಂತನ ದರ್ಶನ ಪಡೆದಾಗ ಸಿಗುವ ಸಂತೋಷಕ್ಕೆ ಪಾರವೇ ಇಲ್ಲ. ಆದ್ದರಿಂದ ಜಾತ್ರೆ ರಥೋತ್ಸವಗಳು ನಮ್ಮ ಸಂಸ್ಕೃತಿಯ ಒಂದು ಭಾಗವಾಗಿ ಇಂದಿಗೂ ಮುಂದುವರಿಯುತ್ತಿವೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಕುಮಾರ್, ಪಿಡಿಓ ರವಿಕುಮಾರ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ.ಹರೀಶ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟಪ್ಪಶೆಟ್ಟಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಸುಜೇಂದ್ರ ಕುಮಾರ್, ಮುಖಂಡ ಬ್ಯಾಂಕ್ ಪರಮೇಶ್ವರ್, ಗಣಪತಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ.ಬಿ.ಚಂದ್ರಶೇಖರ್, ವಿ.ಡಿ.ಮೋಹನ್ ಸೇರಿದಂತೆ ಇನ್ನಿತರರಿದ್ದರು.

ಮಲತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೂಮಿ ಪೂಜೆ

ಪಾಂಡವಪುರ, ಫೆ.2– ಪಟ್ಟಣದಲ್ಲಿ 20 ಕೋಟಿ ರೂ. ವೆಚ್ಚದ ಮಲತ್ಯಾಜ್ಯ ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೋಮವಾರ ಭೂಮಿ ಪೂಜೆ ನೆರವೇರಿಸಿದರು.

ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಪಟ್ಟಣದಲ್ಲಿ ಒಳಚರಂಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಿ, ಪಟ್ಟಣದ ಬನ್ನಾರಿ ಮಾರಿಯಮ್ಮ ದೇವಸ್ಥಾನದ ಮುಂಭಾಗ ರೈತರಿಂದ ಪಡೆದುಕೊಂಡಿರುವ 5.21 ಎಕರೆ ಕೃಷಿ ಪ್ರದೇಶದಲ್ಲಿ ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಮಲತ್ಯಾಜ್ಯ ಸಂಸ್ಕರಣ ಘಟಕ ನಿರ್ಮಿಸಲು ಚಾಲನೆ ನೀಡಲಾಗಿದೆ ಎಂದರು.

2007ರಲ್ಲಿ ಸಂಸ್ಕರಣ ಘಟಕ ನಿರ್ಮಾಣಕ್ಕೆ ಭೂಮಿ ನೀಡಿದ ರೈತರು ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋದ ಕಾರಣ ಅಲ್ಲಿಂದ ಇಲ್ಲಿವರೆಗೂ ಘಟಕ



ಮಲತ್ಯಾಜ್ಯ ಸಂಸ್ಕರಣ ಘಟಕಕ್ಕೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ನಿರ್ಮಾಣ ಸಾಧ್ಯವಾಗಿರಲಿಲ್ಲ. ನಮ್ಮ ತಂದೆ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಹ ತಮ್ಮ ಅಧಿಕಾರ ವಧಿಯಲ್ಲಿ ರೈತರ ಮನವೊಲಿಸಿ ಸರ್ಕಾರದಿಂದ ಹೆಚ್ಚಿನ ಪರಿಹಾರ ನೀಡಲು ಸಾಕಷ್ಟು ಶ್ರಮಿಸಿದ್ದಾರೆ. ಇದೀಗ ರೈತರಿಗೆ ಪರಿಹಾರ ನೀಡಿ ಘಟಕ ನಿರ್ಮಾಣ ಸೇರಿದಂತೆ ಈಗಾಗಲೇ ಅಳವಡಿಸಿರುವ ಪೈಪ್‌ಲೈನ್ ಹಾಗೂ ಹೊಸದಾಗಿ ಅಳವಡಿಸಬೇಕಿರುವ ಪೈಪ್‌ಲೈನ್ ಕಾಮಗಾರಿ ಸೇರಿದಂತೆ ಘಟಕ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸಿ ಭೂಮಿ ಪೂಜೆ ಸಲ್ಲಿಸಲಾಗಿದೆ. ಇಲ್ಲಿ ಸಂಸ್ಕರಿಸುವ ನೀರನ್ನು ರೈತರ ಭೂಮಿಗೆ ಬಿಡುವ ಜೊತೆಗೆ ಭೂಮಿ ನೀಡಿದ ರೈತರ ಕುಟುಂಬಕ್ಕೆ ಉದ್ಯೋಗ ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಡಿ.ಶ್ರೀನಿವಾಸ್ ಮಾತನಾಡಿ, 2007–08ರಲ್ಲಿ ಶಾಸಕರಾಗಿದ್ದ ಸಿ.ಎಸ್.ಪುಟ್ಟರಾಜು ಅವರು ಸಂಸ್ಕರಣ ಘಟಕ ನಿರ್ಮಾಣಕ್ಕೆ ಮುಂದಾಗಿದ್ದರು. ಈ ವೇಳೆ ಹೆಚ್ಚಿನ ಪರಿಹಾರಕ್ಕಾಗಿ ಕೆ.ಎಸ್.ಪುಟ್ಟಣ್ಣಯ್ಯರ ನೇತೃತ್ವದಲ್ಲಿ ಭೂ ಮಾಲೀಕರು ಪ್ರತಿಭಟನೆ ನಡೆಸಿ ಕೋರ್ಟ್ ಮೊರೆ ಹೋಗಿದ್ದರು. 2013ರಲ್ಲಿ ಪುಟ್ಟಣ್ಣಯ್ಯ ಶಾಸಕರಾದ ಬಳಿಕ ರೈತರಿಗೆ 10 ಲಕ್ಷ ಪರಿಹಾರ ಮಂಜೂರು ಮಾಡಿಸಿದ್ದರು. 2018ರಲ್ಲಿ ಪುಟ್ಟರಾಜು ಶಾಸಕರಾಗಿ, ಸಚಿವರಾದ ಬಳಿಕ ಗುಂಟೆಗೆ 10 ಲಕ್ಷ ಮಂಜೂರು ಮಾಡಿಸಿಕೊಟ್ಟರು. ಇದೀಗ ಶಾಸಕ ದರ್ಶನ್ ಪುಟ್ಟಣ್ಣಯ್ಯ ಘಟಕ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದರು. ಈ ವೇಳೆ ತಹಸೀಲ್ದಾರ್ ಬಸಪ್ಪ ರೆಡ್ಡಿ ರೋಣದ, ಪುರಸಭೆ ಮುಖ್ಯಾಧಿಕಾರಿ ಸತೀಶ್, ನಾಮಿನಿ ಸದಸ್ಯರಾದ ಸೋಮಶೇಖರ್, ರಮೇಶ್, ಎಂ.ಮುರಳೀಧರ್, ಮಹಮದ್ ಹನೀಫ್, ಲಕ್ಷ್ಮೀಗೌಡ, ಡಿ.ಶ್ರೀನಿವಾಸ್, ಎಂ.ಗಿರೀಶ, ಜ್ಯೋತಿಬಾಬು, ಅರ್ಚನ ಚಂದ್ರು, ಸತೀಶ್, ಚಂದ್ರು ಇನ್ನಿತರರಿದ್ದರು.

ಒಂದನೇ ಪುಟದಿಂದ

ಅಂಗಳಕ್ಕೆ ಹೊತ್ತಾಕಿದ ರಾಜ್ಯಪಾಲರು

ಅಭಿಪ್ರಾಯ ವ್ಯಕ್ತವಾಗಿದೆ. ಕಾಂಗ್ರೆಸ್ ನಾಯಕರು ರಾಜ್ಯಪಾಲರ ನಡೆಗೆ ವಿರೋಧ ಮಾಡಿದರೆ, ಬಿಜೆಪಿ ನಾಯಕರು ಸಮರ್ಥನೆ ಮಾಡಿ ಕೊಂಡಿದ್ದಾರೆ. ದ್ವೇಷ ಭಾಷಣ ನಾವು ಮಾಡೋದು ತಪ್ಪೇ, ನೀವು ಮಾಡೋದು ತಪ್ಪೇ, ಅದಕ್ಕೆ ಬಿಲ್ ತಂದಿದ್ದೇವೆ. ದ್ವೇಷ ಭಾಷಣ ಪಿತಾಮಹರು ರಾಜ್ಯದಲ್ಲಿದ್ದಾರೆ ಎಂದು ಶಾಸಕ ಪ್ರದೀಪ್ ಈಶ್ವರ್ ಕುಟುಕಿದರೆ, ನೇರವಾಗಿ ಒಂದು ವರ್ಗವನ್ನ ಕಾನೂನಿನಲ್ಲಿ ಸಿಲುಕಿಸಲು ಬಿಲ್ ತಂದಿದ್ದರು. ಇದಕ್ಕೆ ನಾವು ವಿರೋಧಿಸಿದ್ದೆವು. ಹೀಗಾಗಿ ರಾಜ್ಯಪಾಲರು ದ್ವೇಷ ಭಾಷಣ ಬಿಲ್ ರಾಷ್ಟ್ರಪತಿ ಗಳಿಗೆ ಕಳಿಸಿದ್ದಾರೆ. ವಿಮರ್ಶೆ ಮಾಡಿ ಎಂದು ಹೇಳಿದ್ದಾರೆ ಎಂದು ಬಿಜೆಪಿ ಹೇಳುತ್ತಿದೆ. ದ್ವೇಷ ಭಾಷಣ ಬಿಲ್ ಬಗ್ಗೆ ಹಲವು ಗೊಂದಲ ಇದೆ ಎಂದು ಕಾರಣ ನೀಡಿ ರಾಜ್ಯಪಾಲರು ರಾಷ್ಟ್ರಪತಿಗಳಿಗೆ ರವಾನೆ ಮಾಡಿದ್ದಾರೆ. ಸರ್ಕಾರ ಈಗ ಏನು ತೀರ್ಮಾನ ಮಾಡುತ್ತದೆ ಎಂದು ಕಾದು ನೋಡಬೇಕಿದೆ.

ಪರ; ಕೇಂದ್ರದ ವಿರುದ್ಧ ಇದ್ದೇವೆ

ಘೋಷಿಸಿ, ಅನುದಾನ ನೀಡಿಲ್ಲ. ಇದು ಸತ್ಯವಲ್ಲವೇ. ಅನುದಾನ ಕಡಿತಗಳ ಬಗ್ಗೆ ಪ್ರಶ್ನಿಸುವುದು ಎಲ್ಲ ಜನಪ್ರತಿನಿಧಿಗಳ ಜವಾಬ್ದಾರಿ. ರಾಜ್ಯಕ್ಕೆ ಅನುದಾನ ಕಡಿತದ ಬಗ್ಗೆ ಹಲವು ಬಾರಿ ಪತ್ರ ಬರೆದಿದ್ದೇನೆ. ಕೇಂದ್ರ ವಿತ್ತ ಸಚಿವರನ್ನು ಭೇಟಿ ಮಾಡಲಾಗಿದೆ. ಜಿಎಸ್‌ಟಿ ಸಮಿತಿ ಸಭೆಯಲ್ಲಿ ರಾಜ್ಯ ಸರ್ಕಾರ ತನ್ನ ನಿಲುವು ಮಂಡಿಸಿದರೂ ಪರಿಗಣಿಸಿಲ್ಲ ಎಂದರು.

ಬಿಜೆಪಿ ಸರ್ಕಾರ ಸಂವೇದನಾ ರಹಿತ ವಾಗಿತ್ತು: ಮುಖ್ಯಮಂತ್ರಿಗಳಿಗೆ ಸಂವೇ ದನೆಯಿಲ್ಲ ಎಂದು ಟೀಕಿಸಿದ್ದೀರಿ. ಆದರೆ ಹಿಂದೆ ಯಡಿಯೂರಪ್ಪನವರು ಅನ್ನಭಾಗ್ಯ ಯೋಜನೆಯಡಿ ನೀಡಲಾಗುತ್ತಿದ್ದ ಅಕ್ಕಿಯನ್ನು ಕಡಿತಗೊಳಿಸಿದಿರಿ, ಯಡಿ ಯೂರಪ್ಪ ರೈತರು ಗೊಬ್ಬರ ಕೇಳಿದ್ದಕ್ಕೆ ಗೋಲಿಬಾರ್ ನಡೆಸಿದರು. ಹಿಂದಿನ ಬಿಜೆಪಿ ಸರ್ಕಾರ ಸಂವೇದನಾ ರಹಿತವಾಗಿತ್ತು. ಅಂತೆಯೇ ಹಿಂದೆ ಇದ್ದ 'ಅನುಗ್ರಹ ಮತ್ತು ಕೃಷಿ ಭಾಗ್ಯ' ಯೋಜನೆಗಳನ್ನು ಬಿಜೆಪಿ ಸರ್ಕಾರ ನಿಲ್ಲಿಸಿತು. ಆದರೆ ನಮ್ಮ ಸರ್ಕಾರ ಸಂವೇದನಾಶೀಲವಾಗಿದೆ.

ಕಬ್ಬುಬೆಳೆಗಾರರಿಗೆ ಕೇಂದ್ರ ಎಫ್‌ಆರ್‌ಪಿ ನಿಗದಿಗೊಳಿಸಿ, ಹೋರಾಟ ನಡೆಸಿದ ರೈತರೊಂದಿಗೆ ಸಂಧಾನ ನಡೆಸಿ, ಪ್ರತಿ ಟನ್‌ಗೆ 3300 ರೂ. ನಿಗದಿಪಡಿಸಿತು. ಇದಕ್ಕಾಗಿ ರಾಜ್ಯದ ಮೇಲೆ 300 ಕೋಟಿ ಹೆಚ್ಚಿನ ಹೊರೆ ಬಿದ್ದಿರೂ, ರೈತರಿಗೆ ಸರ್ಕಾರ ಸ್ಪಂದಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಮೆಕ್ಕೆಜೋಳಕ್ಕೆ 2400 ರೂ. ಬೆಂಬಲ ಬೆಲೆ ನಿಗದಿಪಡಿಸಿತು. ಆದರೆ ರಾಜ್ಯ ಸರ್ಕಾರ ರೈತರು ಮತ್ತು ಕಾರ್ಖಾನೆ ಯವರ ಜೊತೆ ಸಂಧಾನ ನಡೆಸಿ, 40 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಗೆ ವ್ಯವಸ್ಥೆ ಮಾಡಿದೆ. ಕ್ವಿಂಟಾಲ್‌ಗೆ 250 ರೂ.ದರ ವನ್ನು ನಿಗದಿಪಡಿಸಿ ರೈತರ ಸಮಸ್ಯೆಗೆ ರಾಜ್ಯ ಸರ್ಕಾರ ಸ್ಪಂದಿಸಿದೆ.

ಎಸ್‌ಸಿಪಿ, ಟಿಎಸ್‌ಪಿ ಯೋಜನೆಯನ್ನು ನಮ್ಮ ಸರ್ಕಾರ ಜಾರಿಗೆ ತಂದಿತು. ಈ ಯೋಜನೆಯನ್ನು ಕೇಂದ್ರವೂ ಜಾರಿಗೆ ತರಲು ಒತ್ತಾಯಿಸುತ್ತೇನೆ. 2022–23ರ ಬಿಜೆಪಿ ಅವಧಿಯಲ್ಲಿ ಕೇವಲ 1,10,627 ಕೋಟಿ ಒದಗಿಸಿತ್ತು. ಆದರೆ ನಮ್ಮ ಸರ್ಕಾರ 2023–24 ರಿಂದ ಇಲ್ಲಿಯ ವರೆಗೂ 1,17,197 ಕೋಟಿ ರೂ.ಗಳನ್ನು ಈ ಯೋಜನೆಯಡಿ ನೀಡಿದ್ದೇವೆ ಎಂದರು.

ಕೋವಿಡ್ ಬಂದಾಗ ಚಾಮರಾಜ ನಗರದಲ್ಲಿ ಆಕ್ಸಿಜನ್ ಕೊಟ್ಟು ರೋಗಿ ಗಳನ್ನು ಉಳಿಸಿಕೊಳ್ಳಲಾಗಲಿಲ್ಲ. ಆಕ್ಸಿಜನ್ ಇಲ್ಲದೆ ರೋಗಿಗಳು ವಿಲ ವಿಲ ಒದ್ದಾಡಿ ಪ್ರಾಣ ಬಿಟ್ಟಾಗ ನಿಮ್ಮ ಸಂವೇದನೆ ಯನ್ನೂ ಐಸಿಯುನಲ್ಲಿಟ್ಟಿದ್ರಾ ಎಂದು ಬಿಜೆಪಿ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಯುಪಿಎ ಅಧಿಕಾರಾವಧಿ ಯಲ್ಲಿ ಹತ್ತು ವರ್ಷಗಳಲ್ಲಿ 2003–04ರಿಂದ 2013–14ರವರೆಗೆ ಕೇಂದ್ರ ಬಜೆಟ್ ಗಾತ್ರ 95,21,493 ಕೋಟಿ ಆಗಿತ್ತು. ಎನ್ ಡಿ ಎ ಅಧಿಕಾರಾವಧಿಯಲ್ಲಿ 2014–15 ರಿಂದ ಇಲ್ಲಿಯವರೆಗೆ ಈ ಮೊತ್ತ 380,95,527 ಕೋಟಿ ಯಾಗಿದೆ ಎಂದು ತಿಳಿಸಿದರು.

ವಿವಿಧ ಸಮುದಾಯಗಳ ನಿಗಮ ಮಂಡಳಿಗಳಿಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 1538.60 ಕೋಟಿ ರೂ. ಗಳನ್ನು ನೀಡಲಾಗಿದೆ. ಆದರೆ ಹಿಂದಿನ ಬಿಜೆಪಿ ಯಡಿಯೂರಪ್ಪನವರ ಸರ್ಕಾರ 472.80 ಕೋಟಿಗಳನ್ನು ನೀಡಿದ್ದರೆ, ಬಸವರಾಜ ಬೊಮ್ಮಾಯಿಯವರ ಸರ್ಕಾರ 883 ಕೋಟಿಗಳನ್ನು ನೀಡಿದೆ. ನಮ್ಮ ಸರ್ಕಾರ 1452000 ಮನೆಗಳನ್ನು ನಿರ್ಮಿಸಿದ್ದೇವೆ, ಬಿಜೆಪಿ ಅವಧಿಯಲ್ಲಿ ಕೇವಲ 5 ಲಕ್ಷ ಮನೆಗಳಾಗಿವೆ. ಈ ಎಲ್ಲ ಸತ್ಯಾಂಶ ಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸ ಲಾಗಿತ್ತು. ನಾವು ಜನಪರವಾದ, ಸಮಾಜ ಮುಖಿ ಯಾದ ಆಡಳಿತವನ್ನು ನೀಡು ತ್ತಿದ್ದು, ಕರ್ನಾಟಕದ ಅಭಿವೃದ್ಧಿ ಮಾದರಿ ಸರ್ಕಾರವಾಗಿದೆ. ಈ ಅಭಿವೃದ್ಧಿ ಮಾದರಿ ಯನ್ನು 21 ಕ್ಕಿಂತ ಹೆಚ್ಚು ಕೇಂದ್ರ ಸಚಿವರು ಮತ್ತು ವಿವಿಧ ರಾಜ್ಯದ ಮುಖ್ಯಮಂತ್ರಿಗಳು ಶ್ಲಾಘಿಸಿದ್ದಾರೆ. ಆದ್ದರಿಂದ ರಾಜ್ಯಪಾಲರು, ಸರ್ಕಾರದ ಭಾಷಣವನ್ನು ಓದಿದ್ದರೆ, ನಮ್ಮ ಜನಪರ ಆಡಳಿತದ ಬಗ್ಗೆ ಜನರಿಗೆ ಅರಿವು ನೀಡಿದಂತಾಗುತ್ತಿತ್ತು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಹೈಕೋರ್ಟ್ ತೀವ್ರ ಕಳವಳ


ಗಾಂಜಾ ಅಪರಾಧಿಗಳು ಅಪರಾಧ ಒಪ್ಪಿಕೊಂಡು ಕನಿಷ್ಠ ದಂಡ ಕಟ್ಟಿ ಜೈಲಿನಲ್ಲಿರಲು ಸಿದ್ಧರಾದರೆ ಗತಿಯೇನು' ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು.

ಮೈಸೂರಿನಲ್ಲೇ ಏಕೆ ಗಾಂಜಾ ಕೇಸ್ ಹೆಚ್ಚು: ಇದೇ ವೇಳೆ ಮೈಸೂರಿನಲ್ಲೇ ಗಾಂಜಾ ಕೇಸುಗಳು ಯಾಕೆ ಜಾಸ್ತಿ ಎಂದು ಅರ್ಜಿದಾರರ ಪರ ವಕೀಲರನ್ನು ಕೌತುಕದಿಂದಲೇ ಪ್ರಶ್ನಿಸಿದ ನ್ಯಾಯಮೂರ್ತಿಗಳು, ಮುಂದೆ ಏನಾದರೂ ಈ ಆರೋಪಿಯ ಕೈಯಿಂದ 3 ಗ್ರಾಂ ಗಾಂಜಾ ಸಿಕ್ಕರೂ ಬಿಡುವುದಿಲ್ಲ. ಜೈಲಿಗೆ ಕಳುಹಿಸುತ್ತೇನೆ ಎಂದು ಎಚ್ಚರಿಸಿ ಮಧ್ಯಂತರ ಮನವಿಯ ಅನುಸಾರ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದರು.

ಮಂಡಿ ಠಾಣೆ ಪೊಲೀಸರು ಜ.13 ರಂದು ಬೆಳಗ್ಗೆ ವಿಶೇಷ ಗಸ್ತು ನಡೆಸುತ್ತಿದ್ದ ವೇಳೆ ಟೀ ವ್ಯಾಪಾರಿ ಸಮೀರ್ ಖಾನ್ ಅಲಿಯಾಸ್ ದಾದು ಗಾಂಜಾ ಸಹಿತ ಸಿಕ್ಕಿಬಿದ್ದಿದ್ದ. ಜೈಲ್ ಕ್ವಾಟ್ರರ್ಸ್ ಬಳಿಯ ಬಿಇಓ ಕಚೇರಿ ಕಾಂಪೌಂಡ್ ಪಕ್ಕದಲ್ಲಿರುವ ಪೆಟ್ಟಿ ಟೀ ಸ್ಟಾಲ್ ಬಳಿ ಕುಳಿತಿದ್ದ ಈತನನ್ನು ಪೊಲೀಸರು ಪರಿಶೀಲಿಸಿದಾಗ 53 ಗ್ರಾಂ ಗಾಂಜಾ ಪತ್ತೆಯಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದಾಗ ಉದಯಗಿರಿಯಲ್ಲಿ ಅಪರಿಚಿತ ವ್ಯಕ್ತಿಯಿಂದ ಸಾವಿರ ರೂ.ಗೆ ಗಾಂಜಾ ಖರೀದಿಸಿ ತಂದು, ಗಿರಾಕಿಗಳಿಗಾಗಿ ಕಾಯುತ್ತಿರುವುದಾಗಿ ತಿಳಿಸಿದ್ದ. ಆತನನ್ನು ಬಂಧಿಸಿ, ಮಾದಕ ದ್ರವ್ಯ ನಿಗ್ರಹ ಕಾಯ್ದೆ 1985ರ(ಎನ್‌ಡಿಪಿಎಸ್) ಕಲಂ 20(ಬಿ)(ii)ಎ ಅಡಿಯಲ್ಲಿ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಮೈಸೂರಿನ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಆದೇಶಿಸಿತ್ತು.

ಮೈಸೂರು ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ಮೂಲಕ ಗಾಂಜಾ ಮಾರಾಟಗಾರರು ಮಾತ್ರವಲ್ಲದೆ ಸೇವಿಸುವವರ ವಿರುದ್ಧವೂ ಪ್ರಕರಣ ದಾಖಲಿಸುತ್ತಿದ್ದಾರೆ. ಆಗಾಗ್ಗೆ ಅನುಮಾನಾಸ್ಪದ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ, ಪರಿಶೀಲನೆ ನಡೆಸುತ್ತಿದ್ದಾರೆ. ಮತ್ತೊಂದೆಡೆ ರಾಸಾಯನಿಕ ಕೈಗಾರಿಕೆ ಮೇಲೆ ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿದ ನಂತರ ಕೈಗಾರಿಕಾ ಪ್ರದೇಶದಲ್ಲೂ ವ್ಯಾಪಕ ಶೋಧ ನಡೆಸಲಾಗುತ್ತಿದೆ. ಆದರೂ ಮೈಸೂರಲ್ಲಿ ಗಾಂಜಾ ಮಾರಾಟಗಾರರು ನಿರ್ಭಯ, ನಿರಾತಂಕವಾಗಿ ಚಟುವಟಿಕೆ ಮುಂದುವರೆಸಿದ್ದಾರೆ. ಈ ಬಗ್ಗೆ ಇದೀಗ ಹೈಕೋರ್ಟ್ ಕಳವಳ ವ್ಯಕ್ತಪಡಿಸಿರುವುದು ಗಮನಾರ್ಹವಾಗಿದೆ.

ಕೈಗಾರಿಕಾ ಘಟಕಗಳಲ್ಲಿ ತೀವ್ರ ಶೋಧನೆ



ಗಾಂಜಾ ಇನ್ನಿತರ ಮಾದಕ ವಸ್ತುಗಳ ಸಾಗಾಟ, ಮಾರಾಟ ತಡೆಯುವ ನಿಟ್ಟಿನಲ್ಲಿ ನಗರ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದಾರೆ.

ಕಚ್ಚಾವಸ್ತುಗಳೆಂಬ ಅನುಮಾನ ಬಂದರೆ ಅವುಗಳ ಮಾದರಿಯನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸುತ್ತಿದ್ದಾರೆ.

ನಗರದ ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಸೇರಿದಂತೆ ಇತರೆ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲೂ ನಷ್ಟದಿಂದ ಬಂದ್ ಮಾಡಿರುವ(ಸಿಕ್ ಇಂಡಸ್ಟ್ರಿ) ಫ್ಯಾಕ್ಟರಿಗಳನ್ನೂ ಪರಿಶೀಲಿಸಲು ಕ್ರಮ ವಹಿಸಿದ್ದಾರೆ. ಅಂತಹ ಫ್ಯಾಕ್ಟರಿಗಳ ಆವರಣದಲ್ಲಿ ಶ್ವಾನ ದಳ ಬಳಸಿಕೊಂಡು ತಪಾಸಣೆ ನಡೆಸುತ್ತಿದ್ದಾರೆ. ಸದ್ಯಕ್ಕೆ ಯಾವ ಕಾರ್ಖಾನೆಯಲ್ಲೂ ಡ್ರಗ್ಸ್ ತಯಾರಿಸುತ್ತಿರುವ ಸುಳಿವು ಪತ್ತೆಯಾಗಿಲ್ಲ.

ಮೈಸೂರು ಹೊರ ವಲಯದ ಯಾಂದಳ್ಳಿಯ ಒಂಟಿ ಮನೆಯಲ್ಲಿ ಅನುಮಾನಾಸ್ಪದ ರಾಸಾಯನಿಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಹೊರ ವಲಯದ ಹಲವು ಬಡಾವಣೆಗಳಲ್ಲಿರುವ ಸಾವಿರಾರು ಒಂಟಿ ಮನೆಗಳ ಮೇಲೂ ನಿಗಾ ವಹಿಸಲಾಗಿದೆ. ಕೈಗಾರಿಕಾ ಪ್ರದೇಶಗಳಲ್ಲಿ ಸಂಚರಿಸುವ ಸರಕು ವಾಹನಗಳ ಮೇಲೂ ಕಣ್ಣಿಡಲಾಗಿದೆ.

ಗುರಿ ಮುಟ್ಟುವುದು ನಿಶ್ಚಿತ!

ತಕ್ಷಣವೇ ಮಾತನಾಡಿದ ಆರ್.ಅಶೋಕ್, ಉಪಮುಖ್ಯಮಂತ್ರಿ ಶಿವಕುಮಾರ್ ನೀಡುವ ಹೇಳಿಕೆ ಹಲವು ಉತ್ತರ ಮತ್ತು ಗೊಂದಲಗಳಿಗೆ ಕಾರಣವಾಗುತ್ತದೆ. ಇದು ಪ್ರತಿಪಕ್ಷಗಳಲ್ಲಿ ಮಾತ್ರವಲ್ಲ, ಆಡಳಿತ ಪಕ್ಷದಲ್ಲೂ ಗೊಂದಲಕ್ಕೆ ಕಾರಣವಾಗಿದೆ. ಈ ಬಗ್ಗೆ ಸ್ಪಷ್ಟನೆ ನೀಡಿ. ಶಾಸಕರ ಮಾತುಗಳನ್ನು ನಂಬಿ ಹಾಳಾಗಬೇಡಿ. ಈ ಮೊದಲು ನಿಮ್ಮ ಜೊತೆ 56 ಮಂದಿ ಶಾಸಕರು ಇದ್ದರು ಎಂದು ಹೇಳಲಾಗಿತ್ತು. ಆದರೆ ಅವರೆಲ್ಲ ಬೆಳಗ್ಗೆ ನಿಮ್ಮ ಜೊತೆ ಇರುತ್ತಾರೆ. ಸಂಜೆ ಮುಖ್ಯಮಂತ್ರಿಗಳ ಮನೆಗೆ ಹೋಗಿರುತ್ತಾರೆ ಎಂಬ ಅಭಿಪ್ರಾಯವಿದೆ. ನಿಮ್ಮ ಜೊತೆ ಯಾರಿದ್ದಾರೆ ಎನ್ನುತ್ತಿದ್ದಂತೆ ಎದ್ದು ನಿಂತ ಕಾರ್ಮಿಕ ಸಚಿವ ಸಂತೋಷ್ ಲಾಡ್, ಪಕ್ಷದ ಎಲ್ಲ ಶಾಸಕರು ಒಟ್ಟಾಗಿದ್ದೇವೆ ಎಂದರು. ಅದಕ್ಕೆ ತಿರುಗೇಟು ನೀಡಿದ ಅಶೋಕ್, ಇಂತಹವರ ಬಗ್ಗೆ ಎಚ್ಚರದಿಂದ ಇರಿ. ಅವರು ರಾತ್ರಿ ವೇಳೆ ಮುಖ್ಯಮಂತ್ರಿಗಳ ಜೊತೆ ಇರುತ್ತಾರೆ. ಬೆಳಗ್ಗೆ ನಿಮ್ಮ ಜೊತೆಗೆ ಇರುತ್ತಾರೆ. ಇವರು ಅಪಾಯಕಾರಿ ಎಂದಾಗ, ಸಂತೋಷ್ ಲಾಡ್ ತೀವ್ರ ಪ್ರತಿರೋಧ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಶಿವಕುಮಾರ್, ಕಾಂಗ್ರೆಸ್‌ನ ಎಲ್ಲಾ ಶಾಸಕರು ಒಟ್ಟಾಗಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ 139 ಮಂದಿ ಶಾಸಕರು ನನ್ನ ಜೊತೆ ಇದ್ದಾರೆ. ಇದರಲ್ಲಿ ಯಾವುದೇ ಸಂಶಯ ಬೇಡ. ದೃಢವಾದ ಸಂಕಲ್ಪ ವಿಶ್ವಾಸ ಮತ್ತು ಬದ್ಧತೆ ಇದ್ದರೆ ಒಬ್ಬ ಕೂಡ 139 ಆಗಬಹುದು ಎಂದರು.

ಹೈ ಅಲರ್ಟ್

ಸೋಂಕಿನ ಗುಣ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ವೈದರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. ಬಾವಲಿಗಳು ಹೆಚ್ಚಿರುವ ಪ್ರದೇಶಗಳಲ್ಲಿ ಓಡಾಟ ಬೇಡ, ಮರಗಳಿಂದ ತಯಾರಿಸುವ ನೀರಾಗಳ ಸೇವನೆಯಿಂದ ಸದ್ಯಕ್ಕೆ ದೂರವಿರಿ. ಜೊತೆಗೆ ಬಾವಲಿಗಳು ತಿಂದ ಹಣ್ಣುಗಳನ್ನ ಸೇವಿಸದಂತೆ ಸಾರ್ವಜನಿಕರಿಗೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಏನು ಮಾಡಬೇಕು: ಹಣ್ಣುಗಳನ್ನ ತಿನ್ನುವ ಮೊದಲು ಚೆನ್ನಾಗಿ ತೊಳೆಯಬೇಕು, ಕುದಿಸಿ ಆರಿಸಿದ ನೀರನ್ನ ಕುಡಿಯಬೇಕು, ಸಾಕು ಪ್ರಾಣಿಗಳ ಆಹಾರವು ಬಾವಲಿಗಳ ಸಂಪರ್ಕಕ್ಕೆ ಬಾರದಂತೆ ನೋಡಿಕೊಳ್ಳಬೇಕು, ಪ್ರಾಣಿಗಳನ್ನ ಸಂಪರ್ಕಿಸುವಾಗ ರಕ್ಷಣಾತ್ಮಕ ಉಡುಪುಗಳನ್ನ ಧರಿಸಬೇಕು, ಮರಗಳಿಂದ ತೆಗೆಯುವ ಹಣ್ಣಿನ ರಸದ ಸಂಪರ್ಕಕ್ಕೆ ಬಾವಲಿಗಳು ಬಾರದಂತೆ ನೋಡಿಕೊಳ್ಳಬೇಕು, ಸೋಂಕಿತ ವ್ಯಕ್ತಿಗಳನ್ನ ಸಂಪರ್ಕಿಸುವಾಗ ರಕ್ಷಣಾತ್ಮಕ ಕ್ರಮ ವಹಿಸಬೇಕು.

ಏನು ಮಾಡಬಾರದು: ಮರದಿಂದ ಬಿದ್ದ ಹಾಗೂ ಪ್ರಾಣಿಗಳು ಕಚ್ಚಿದ ಹಣ್ಣುಗಳನ್ನ ತಿನ್ನಬಾರದು, ತೆರೆದ ಪಾತ್ರೆಗಳಲ್ಲಿ ಇಟ್ಟ ಪಾನೀಯಗಳನ್ನ ಸೇವಿಸಬಾರದು, ನಿಫಾ ಬಂದಿರುವ ವ್ಯಕ್ತಿಯ ಸಂಪರ್ಕ ಮಾಡಬಾರದು, ಖಾಯಿಲೆ ಬಂದ ಅಥ್ವಾ ಸತ್ತ ಪ್ರಾಣಿಗಳ ಹತ್ತಿರ ಹೋಗಬಾರದು, ಬಾವಲಿಗಳ ಸಂಪರ್ಕದಿಂದ ದೂರ ಇರಬೇಕು.

ಇನ್ನು ನಿಫಾ ವೈರಸ್‌ನ ರೋಗ ಲಕ್ಷಣಗಳು ತಕ್ಷಣಕ್ಕೆ ಗೋಚರಿಸುವುದಿಲ್ಲ. ಸಾಮಾನ್ಯವಾಗಿ 4 ರಿಂದ 14 ದಿನಗಳಲ್ಲಿ ಇವು ಗಮನಕ್ಕೆ ಬರಲಿದ್ದು, ಆರೋಗ್ಯ ಇಲಾಖೆಯ ಸಲಹೆ ಮತ್ತು ಸೂಚನೆಗಳನ್ನು ಪಾಲಿಸುವಂತೆ ಸಾರ್ವಜನಿಕರಲ್ಲಿ ಕೋರಲಾಗಿದೆ. ಸೋಂಕಿತರು ಕಂಡುಬಂದಲ್ಲಿ ಅಂತವರ ಚಿಕಿತ್ಸೆಗೂ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಸಿ.ಜೆ. ರಾಯ್ ಆತ್ಮಹತ್ಯೆ ಪ್ರಕರಣ

ನ್ಯಾಯಾಂಗ ತನಿಖೆಗೆ ಕೇರಳ ಸಿಎಂ ಪಿಣರಾಯಿ ಒತ್ತಾಯ; ಕೇಂದ್ರಕ್ಕೆ ಪತ್ರ

ತಿರುವನಂತಪುರಂ: ಐಟಿ ಇಲಾಖೆ ದಾಳಿ ವೇಳೆ ನಡೆದಿರುವ ಕಾನ್ಫಿಡೆಂಟ್ ಗ್ರೂಪ್ ಅಧ್ಯಕ್ಷ ಸಿಜೆ ರಾಯ್ ಅವರ ಅಸ್ವಾಭಾವಿಕ ಸಾವು ದೇಶದ ತೆರಿಗೆ ಆಡಳಿತಕ್ಕೆ ಕಳಂಕ ಎಂದು ಕೇರಳ ಮುಖ್ಯಮಂತ್ರಿ ಪಿಣ ರಾಯಿ ವಿಜಯನ್ ಬಣ್ಣಿಸಿದ್ದಾರೆ.



ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಕೇಂದ್ರಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ.

ಘಟನೆಯು ಗಂಭೀರ ಶ್ರದ್ಧೆಯ ಕೊರತೆಯನ್ನು ತೋರಿಸಿದೆ. ಐಟಿ ಶೋಧ ಕಾರ್ಯಾಚರಣೆ ವೇಳೆ ಮನೆಯಲ್ಲಿದ್ದ ವ್ಯಕ್ತಿಯು ಲೋಡ್ ಮಾಡಿದ ಬಂದೂಕು ತೆಗೆದುಕೊಂಡು ತನ್ನನ್ನು ತಾನೇ ಶೂಟ್ ಮಾಡಿಕೊಳ್ಳಬಹುದು ಎಂಬುದು ಆತಂಕ ಕಾರಿಯಾಗಿದೆ ಎಂದು ಭಾನುವಾರ ಬರೆದಿರುವ ಪತ್ರದಲ್ಲಿ ಕೇರಳ ಮುಖ್ಯ ಮಂತ್ರಿ ಹೇಳಿದ್ದಾರೆ.

ರಾಯ್ ಅವರನ್ನು ಶೋಧದ ಸ್ಥಳದಲ್ಲಿ ಇರಿಸುವ ಬದಲು ಮತ್ತೊಂದು ಕೊಠಡಿಗೆ ಸ್ಥಳಾಂತರಿಸಲಾಗಿದೆ ಎನ್ನುವ ಇತ್ತೀಚಿನ ವರದಿಗಳನ್ನು ವಿಜಯನ್ ಉಲ್ಲೇಖಿಸಿದ್ದು, ಇದು ಗಂಭೀರವಾದ ಲೋಪ ಮತ್ತು ಅಗತ್ಯ ಶಿಷ್ಟಾಚಾರ ಅನುಸರಿಸದಿರುವುದಕ್ಕೆ ಸಾಕ್ಷಿ ಎಂದಿದ್ದಾರೆ.

ಕಾನೂನು ನಿಬಂಧನೆಗಳನ್ನು ಅನುಸರಿಸಲಾಗಿದೆ ಎಂದು ಹೇಳುವ ಅಧಿಕೃತ ಸ್ಪಷ್ಟೀಕರಣವು ಸಾಕಾಗುವುದಿಲ್ಲ. ಪ್ರಕರಣದ ವ್ಯಾಪಕ ಅಂಶಗಳನ್ನು ಪರಿಶೀಲಿಸಲು ನ್ಯಾಯಾಂಗ ತನಿಖೆ ಅಗತ್ಯ ಎಂದು ವಾದಿಸಿದ್ದಾರೆ.

ಕೇಂದ್ರ ಸರ್ಕಾರ ವಿಳಂಬ ಮಾಡದೆ ಇಂತಹ ತನಿಖೆಗೆ ಆದೇಶಿಸಬೇಕು ಮತ್ತು ನಿಗದಿತ ಕಾಲಮಿತಿಯೊಳಗೆ ಸಮಗ್ರ ವರದಿಯನ್ನು ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಭವಿಷ್ಯದಲ್ಲಿ ಇಂತಹ ದುರಂತ ಘಟನೆಗಳು ನಡೆಯದಂತೆ ನಿಷ್ಪಕ್ಷಪಾತ ತನಿಖೆ ಅತ್ಯಗತ್ಯ ಎಂದು ಅವರು ಒತ್ತಾಯಿಸಿದ್ದಾರೆ.

ಸುರಕ್ಷಿತ ಮತ್ತು ಮಾನವೀಯ ರೀತಿಯಲ್ಲಿ ಶೋಧಗಳನ್ನು ನಡೆಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ಸಿಜೆ ರಾಯ್ ಅವರಂತೆ ಅಮೂಲ್ಯವಾದ ಮಾನವ ಜೀವವನ್ನು ಕಳೆದುಕೊಳ್ಳುವ ಯಾವುದೇ ಕ್ರಮವನ್ನು ನಾಗರಿಕ ಪ್ರಜಾಪ್ರಭುತ್ವ ಸಮಾಜದಲ್ಲಿ ಸಮರ್ಥಿಸಲಾಗುವುದಿಲ್ಲ ಎಂದು ವಿಜಯನ್ ಹೇಳಿದ್ದಾರೆ.


ಟಿ20 ವಿಶ್ವಕಪ್‌ನಲ್ಲಿ ಭಾರತ ಜೊತೆಗಿನ ಪಂದ್ಯವನ್ನು ಬಹಿಷ್ಕರಿಸಿದ ಪಾಕ್

ಇಸ್ಲಾಮಾಬಾದ್: ಟಿ20 ವಿಶ್ವಕಪ್ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿದ್ದು, ಈ ವೇಳೆ ಪಾಕಿಸ್ತಾನ ತಂಡವು ಭಾರತ ಎದುರಿನ ಪಂದ್ಯವನ್ನು ಬಹಿಷ್ಕರಿಸಿದೆ. ಈ ಮೂಲಕ ಭಾರತ ಹಾಗೂ ಪಾಕಿಸ್ತಾನ ನಡುವಿನ ಪಂದ್ಯವನ್ನು ಕಣ್ತುಂಬಿಕೊಳ್ಳುವ ಕಾತುರದಲ್ಲಿದ್ದ ಅಭಿಮಾನಿಗಳಿಗೆ ನಿರಾಸೆಯಾಗಿದೆ.

ಪಾಕಿಸ್ತಾನ ಸರ್ಕಾರದ ಅಧಿಕಾರಿಗಳು ಅಧಿಕೃತವಾಗಿ ಎಕ್ಸ್ ಖಾತೆಯಲ್ಲಿ ಈ ವಿಚಾರವನ್ನು ಹಂಚಿಕೊಂಡಿದ್ದು, ಪಾಕಿಸ್ತಾನ ತಂಡವು ಟಿ20 ವಿಶ್ವಕಪ್ ಟೂರ್ನಿಯನ್ನಾಡಲು ಶ್ರೀಲಂಕಾಗೆ ಪ್ರಯಾಣ ಬೆಳೆಸಲಿದೆ. ಆದರೆ ಫೆಬ್ರವರಿ 15ರಂದು ಕೊಲಂಬೋದಲ್ಲಿ ನಿಗದಿಯಾಗಿದ್ದ ಭಾರತ ಎದುರಿನ ಪಂದ್ಯವನ್ನು ಪಾಕಿಸ್ತಾನ ತಂಡವು ಬಾಯ್ಕಾಟ್ ಮಾಡಿದೆ ಎಂದು ತಿಳಿಸಿದೆ.

'ಪಾಕಿಸ್ತಾನ ತಂಡವು ಫೆಬ್ರವರಿ 15ರಂದು ಭಾರತ ವಿರುದ್ಧ ಕ್ರಿಕೆಟ್ ಆಡಲು ಮೈದಾನಕ್ಕಿಳಿಯುವುದಿಲ್ಲ' ಎಂದು ಎಕ್ಸ್ ಮೂಲಕ ಘೋಷಿಸಿದೆ. ಆದರೆ ಪಾಕಿಸ್ತಾನ ತಂಡವು ಯಾವ ಕಾರಣಕ್ಕಾಗಿ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಎದುರಿನ ಮ್ಯಾಚ್ ಬಾಯ್ಕಾಟ್ ಮಾಡಿದೆ ಎನ್ನುವ ವಿಚಾರವನ್ನು ಸ್ಪಷ್ಟಪಡಿಸಿಲ್ಲ.

ಭಾರತ–ಪಾಕ್ ಪಂದ್ಯ ಆರ್ಥಿಕವಾಗಿ ಐಸಿಸಿಗೆ ಬಹಳ ಪ್ರಾಮುಖ್ಯವಾದದ್ದು. ಈ ಪಂದ್ಯದ ಪ್ರಸಾರದಿಂದಲೇ ಬಹುಕೋಟಿ ಲಾಭ ಸಿಗಲಿದೆ. ಪ್ರಾಯೋಜಕರು, ಪ್ರಸಾರಕರು, ಜಾಹೀರಾತುದಾರರಿಗೂ ವಿಶ್ವಕಪ್‌ನಲ್ಲೇ ಈ ಪಂದ್ಯ ಹೆಚ್ಚು ಮಹತ್ವದ್ದು.



ಇರ್ಲ್ ಬ್ರಿಯಾನ್ ಡವ್ ನಿಧನ

ಮೈಸೂರು,ಫೆ.2– ನಿವೃತ್ತ ರೈಲ್ವೆ ಉದ್ಯೋಗಿ ಹಾಗೂ ಕೆಸರೆ 3ನೇ ಹಂತದ ಪುಷ್ಪಾಶ್ರಮ ಮುಖ್ಯ ರಸ್ತೆಯ ನಿವಾಸಿ ಇರ್ಲ್ ಬ್ರಿಯಾನ್ ಡವ್ (67) ಸೋಮವಾರ ನಿಧನರಾದರು.


ಮೃತರು 'ಸ್ಟಾರ್ ಆಫ್ ಮೈಸೂರ್'ನ ಸೀನಿಯರ್ ಎಕ್ಸಿಕ್ಯೂಟಿವ್ (ಆಡ್–ಸೇಲ್ಸ್), ಪುತ್ರ ಜಾಯ್ ಆಂಥೋನಿ ಡವ್, ಸೊಸೆ ಡಾ.ಫ್ಲೋರಿಟಾ, ಪುತ್ರಿ ಐರೀನ್ ಡವ್, ಅಳಿಯ ಲಿಥಿನ್ ಆಂಥೋನಿ, ಮೊಮ್ಮಕ್ಕಳಾದ ಮಿಕೈಲಾ ಡವ್, ಕೆವಿನ್ ಅಬಲ್ ಡವ್ ಮತ್ತು ಲಿಯಾಮ್ ಆಂಥೋನಿ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ರೋಮನ್ ಕ್ಯಾಥೋಲಿಕ್ ಸ್ಮಶಾನದಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಶುಭಾಶಯ...



ಜೆಡಿಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರೂ ಆದ ಹುಣಸೂರು ಕ್ಷೇತ್ರದ ಶಾಸಕರಾದ ಜಿ.ಡಿ.ಹರೀಶ್‌ಗೌಡ ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಚಾಮುಂಡಿಬೆಟ್ಟದಲ್ಲಿ ಶಾಲು ಹೊದಿಸಿ, ಹೂವಿನ ಹಾರ ಹಾಕಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜಯಪುರ ಮುಖಂಡರಾದ ರಂಗಸ್ವಾಮಿ, ಅಬ್ದುಲ್ ಮುತಾಲೀಫ್, ಅಭಿಷೇಕ್, ರಾಕೇಶ್, ಧರಣೇಶ್ ಇನ್ನಿತರರಿದ್ದರು.



ಹುಣಸೂರು ಶಾಸಕರಾದ ಜಿ.ಡಿ. ಹರೀಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆ ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಪುನೀತ್ ಎಂ.ಎಸ್. ಅಭಿನಂದಿಸಿ, ಶುಭಾಶಯ ಕೋರಿದರು.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ: ಪ್ರಥಮ ಸ್ಥಾನ



ಸಿದ್ದರಾಜು

ಮೈಸೂರು,ಫೆ.2(ಎಂಕೆ)–ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯ ಪ್ರೌಢಶಾಲಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಟಿ.ನರಸೀಪುರ ತಾಲೂಕಿನ ಜಿ.ಹೆಚ್.ಎಸ್ ಮೇದಿನಿ ಶಾಲೆಯ ಸಿದ್ದರಾಜು, ರಾಜ್ಯಮಟ್ಟದಲ್ಲಿಯೂ ಪ್ರಥಮ ಸ್ಥಾನ ಪಡೆದಿದ್ದಾನೆ. 'ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಗಾಂಧೀಜಿ ಅವರ ಪಾತ್ರ' ಕುರಿತು ಬರೆದ ಪ್ರಬಂಧ ಆಯ್ಕೆಯಾಗಿದ್ದು, ವಿಜೇತ ಸಿದ್ದರಾಜುಗೆ 31 ಸಾವಿರ ರೂ.ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ಶಾಲೆ ಮುಖ್ಯೋಪಾಧ್ಯಾಯ ಬಿ.ಶಿವನಂಜು, ಕನ್ನಡಭಾಷ ಶಿಕ್ಷಕ ಜಿ.ಸುರೇಶ್‌ಕುಮಾರ್ ಹಾಗೂ ವಾರ್ತಾ ಇಲಾಖೆ ಅಧಿಕಾರಿ–ಸಿಬ್ಬಂದಿ ವಿದ್ಯಾರ್ಥಿಗೆ ಶುಭಾಶಯ ಕೋರಿದ್ದಾರೆ.

ಶಾಲಾ ವಾರ್ಷಿಕೋತ್ಸವ...



ಮೈಸೂರಿನ ವಿಜಯನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಗೋಕುಲಂನ ಬ್ರೈಟ್ ಸ್ಕಾಲರ್ಸ್ ಲರ್ನಿಂಗ್ ಸೆಂಟರ್, ಪ್ರೀ ಸ್ಕೂಲ್‌ನ ವಾರ್ಷಿಕೋತ್ಸವ ಆಚರಿಸಲಾಯಿತು. ಈ ವೇಳೆ ಪ್ರೀ ಸ್ಕೂಲ್‌ನ ಸಂಸ್ಥಾಪಕರೂ ಆದ ಅಧ್ಯಕ್ಷೆ ಡಾ.ರೂಪಶ್ರೀ ಶೇಷಾದ್ರಿ, ಕವಿತಾ ಗುರುರಾಜ್, ಡಾ.ಸೀತಾಲಕ್ಷ್ಮಿ ಸೋಮನಾಥ್ ಹಾಗೂ ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಾಳೆಯಿಂದ 'ಸರಿಗಮ–ಪದನಿಸ' ಬಹುಭಾಷಾ ಸಂಗೀತ ಕಾರ್ಯಕ್ರಮ

ಮೈಸೂರು, ಫೆ.2(ಜಿಎ)–ಮೈಸೂರಿನ ಜನ ಚೈತನ್ಯ ಫೌಂಡೇಷನ್ ವತಿಯಿಂದ ಫೆ.4 ಮತ್ತು 5ರಂದು ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಸರಿಗಮ–ಪದನಿಸ' ಬಹು ಭಾಷಾ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಭಾರತೀಯ ಚಿತ್ರರಂಗದ ಜನಪ್ರಿಯ ಸಂಗೀತ ನಿರ್ದೇಶಕರ ರಾಗ ಸಂಯೋಜನೆಯಲ್ಲಿ ಖ್ಯಾತ ಹಿನ್ನೆಲೆ ಗಾಯಕರು ಹಾಡಿರುವ ಬಹು ಭಾಷಾ ಜನಪ್ರಿಯ ಗೀತೆಗಳನ್ನು 20ಕ್ಕೂ ಹೆಚ್ಚು ಗಾಯಕ, ಗಾಯಕಿಯರು ಪ್ರತಿದಿನ ಸಂಜೆ 4.30ರಿಂದ ರಾತ್ರಿ 9.30ರವರೆಗೆ ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಸಭಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಸಮಾಜ ಸೇವಕ ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವೈದ್ಯೆ ಡಾ.ರೇಖಾ ಅರುಣ್, ಆನಂದ್ ಶೆಟ್ಟಿ ಆಗಮಿಸಲಿದ್ದಾರೆ. ಕರ್ನಾಟಕ ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಾಯ್ಸ್ ವೈಶಾಕ್, ಬಿ.ಎಸ್.ವಿಜಯ್ ಆನಂದ್, ಬಿ.ಎಂ. ಮಹದೇವಯ್ಯ ಮತ್ತಿತರರಿದ್ದರು.

ಅಮೆರಿಕ, ಭಾರತ ವ್ಯಾಪಾರ ಒಪ್ಪಂದಕ್ಕೆ ಒಪ್ಪಿಗೆ; ಪರಸ್ಪರ ಸುಂಕ ಕಡಿತ: ಟ್ರಂಪ್ ಘೋಷಣೆ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ–ಟ್ರಂಪ್ ಮಾತನಾಡಿದ್ದಾರೆ, ಕಾದು ನೋಡಿ ಎಂದು ಭಾರತದ ಅಮೆರಿಕ ರಾಯಭಾರಿ ಸೆರ್ಗಿಯೊ ಗೋರ್ ಹೇಳಿದ್ದ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಟ್ರಂಪ್ ಮಹತ್ವದ ಘೋಷಣೆ ಮಾಡಿದ್ದಾರೆ. ಟ್ರೂತ್ ಸೋಷಿಯಲ್‌ನಲ್ಲಿನ ಪೋಸ್ಟ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತ ಮತ್ತು ಅಮೆರಿಕ ಒಂದು ವ್ಯಾಪಾರ ಒಪ್ಪಂದಕ್ಕೆ ಒಪ್ಪಿಕೊಂಡಿವೆ.

ಆ ಮೂಲಕ ಅಮೆರಿಕವು ಕಡಿಮೆ ಪರಸ್ಪರ ಸುಂಕವನ್ನು ವಿಧಿಸುತ್ತದೆ, ಅದನ್ನು 25% ರಿಂದ 18% ಕ್ಕೆ ಇಳಿಸುತ್ತದೆ ಎಂದು ಘೋಷಿಸಿದ್ದಾರೆ. ಇಬ್ಬರು ನಾಯಕರು ಇಂದು ಬೆಳಿಗ್ಗೆ ಮಾತನಾಡಿದ್ದಾರೆ ಮತ್ತು ವಿವರಗಳನ್ನು ಆರಂಭದಲ್ಲಿ ಬಹಿರಂಗಪಡಿಸದಿದ್ದರೂ, ಭಾರತಕ್ಕೆ ಅಮೆರಿಕದ ರಾಯಭಾರಿ ಸೆರ್ಗಿಯೊ ಗೋರ್ ಅವರು ಕಾದು ನೋಡಿ ಎಂದು ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಮೈಸೂರಿನ ಫೈವ್ ಲೈಟ್ ಸರ್ಕಲ್, ಜೆಎಲ್‌ಬಿ ರಸ್ತೆಯಲ್ಲಿ ತರಕಾರಿ ವ್ಯಾಪಾರಕ್ಕೆ ನಿರ್ಬಂಧ

ಸುಗಮ ವಾಹನ ಸಂಚಾರಕ್ಕೆ ಸಂಚಾರಿ ಪೊಲೀಸರ ಕ್ರಮ

ಮೈಸೂರು, ಫೆ.2(ಬಿಎಲ್‌ಯು)–ರಸ್ತೆಬದಿ ವ್ಯಾಪಾರದಿಂದ ಸುಗಮ ವಾಹನ ಸಂಚಾರಕ್ಕೆ ಅಡ್ಡಿಯಾಗಿ, ಸರಣಿ ಅಪಘಾತಕ್ಕೆ ಕಾರಣವಾಗಿದ್ದ ಜೆಎಲ್‌ಬಿ ರಸ್ತೆಯಲ್ಲಿ ತರಕಾರಿ ವ್ಯಾಪಾರವನ್ನು ಸಂಚಾರಿ ಪೊಲೀಸರು ನಿರ್ಬಂಧಿಸಿದ್ದಾರೆ.

ಮೊದಲು ನಂಜುಮಳಿಗೆ ಕೆಳಗಿನ ಫೈವ್ ಲೈಟ್ ಸರ್ಕಲ್ ಸುತ್ತ ತರಕಾರಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡಲಾಗುತ್ತಿತ್ತು. ತರುವಾಯ ಜೆಎಲ್ ಬಿ ರಸ್ತೆಯ ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ಮುಂದೆ ಒಂದೊಂದೇ ಗಾಡಿ ನಿಲ್ಲಿಸಿ ವ್ಯಾಪಾರ ಆರಂಭವಾಯ್ತು. ಫೈವ್ ಲೈಟ್ ಸರ್ಕಲ್ ಹಾಗೂ ಜೆಎಲ್‌ಬಿ ರಸ್ತೆಯಲ್ಲಿ ಈಗ ಸುಮಾರು 60ಕ್ಕೂ ಹೆಚ್ಚು ತರಕಾರಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುತ್ತಿದ್ದರು. ತೀರಾ, ಬಸ್ ಪ್ರಯಾಣಿಕರ ತಂಗುದಾಣ ಮರೆ ಮಾಡಿ, ಅದನ್ನು ತರಕಾರಿ ಉಗ್ರಾಣವನ್ನಾಗಿ ಮಾಡಿಕೊಂಡಿದ್ದರು.



ಜೆಎಲ್‌ಬಿ ರಸ್ತೆಯಲ್ಲಿ ಸಂಚಾರಿ ಪೊಲೀಸರಿಂದ ತರಕಾರಿ ವ್ಯಾಪಾರಕ್ಕೆ ನಿರ್ಬಂಧ.

ಜನ ಹಾಗೂ ವ್ಯಾಪಾರ ಕಿರಿಕಿರಿಯಿಂದ ಫೈವ್ ಲೈಟ್ ಸರ್ಕಲ್ ಹಾಗೂ ಜೆಎಲ್‌ಬಿ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಅಲ್ಲದೆ ಪ್ರತಿ ದಿನ ಸರಣಿ ಅಪಘಾತಗಳು ಸಂಭವಿಸುತ್ತಲೇ ಇದ್ದವು. ಇದು ಸಹಜವಾಗಿಯೇ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸಂಚಾರಿ ಪೊಲೀಸರು ತರಕಾರಿ ವ್ಯಾಪಾರಕ್ಕೆ ನಿರ್ಬಂಧ ಹೇರಿದ್ದಾರೆ. ತರಕಾರಿ ಗಾಡಿ ನಿಲ್ಲುತ್ತಿದ್ದ ಸ್ಥಳಗಳಾದ ಫೈವ್‌ಲೈಟ್ ಸರ್ಕಲ್ ಹಾಗೂ ಜೆಎಲ್‌ಬಿ ರಸ್ತೆಯಲ್ಲಿ ವ್ಯಾಪಾರ ನಿರ್ಬಂಧಿಸಿ ರಿಬ್ಬನ್‌ಗಳನ್ನು ಕಟ್ಟಿದ್ದಾರೆ. ಯಾರೂ ಈ ಸ್ಥಳದಲ್ಲಿ ಯಾವುದೇ ರೀತಿಯ ವ್ಯಾಪಾರ ಮಾಡಬಾರದೆಂದು ಕಟ್ಟಾಜ್ಞೆ ಮಾಡಿದ್ದಾರೆ. ಅಲ್ಲದೆ ವ್ಯಾಪಾರಕ್ಕೆ ಕಡಿವಾಣ ಹಾಕಲು ಸಂಚಾರಿ ಪೊಲೀಸರನ್ನು ನಿಯೋಜಿಸಿದ್ದಾರೆ.

ಮೊದಲು ರಸ್ತೆಬದಿ ವ್ಯಾಪಾರ ! ಈಗ ರಸ್ತೆಯಲ್ಲೇ ವ್ಯಾಪಾರ !!

ಇಲ್ಲಿವರೆಗೆ ಫುಟ್‌ಪಾತ್‌ನಲ್ಲಿ ಪೆಟ್ಟಿ ಇಟ್ಟು ಇಲ್ಲವೇ ತಳ್ಳುಗಾಡಿ ನಿಲ್ಲಿಸಿಕೊಂಡು ವ್ಯಾಪಾರ ಮಾಡುವುದನ್ನು ನಾವೆಲ್ಲಾ ನೋಡಿದ್ದೆವು. ಪಾಪ, ಪಾದಚಾರಿಗಳು ಫುಟ್‌ಪಾತ್‌ನಲ್ಲಿ ಜಾಗವಿಲ್ಲದೆ ರಸ್ತೆಗಿಳಿದು ಓಡಾಡುವ ಪರಿಸ್ಥಿತಿ ಬಂತು. ಈ ವೇಳೆ ವಾಹನಗಳಿಗೆ ಸಿಲುಕಿ ಸಾವು–ನೋವು ಉಂಟಾಗಿದ್ದವು. ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂದಿನ ರಸ್ತೆ, ಹಳೇ ಡಿಸಿ ಕಚೇರಿ ಬಳಿ, ಸಯ್ಯಾಜಿರಾವ್ ರಸ್ತೆ ಮೈಸೂರಿನ ಎಲ್ಲೆಡೆ ತಳ್ಳುಗಾಡಿಗಳು ರಸ್ತೆಗಿಳಿದಿವೆ. ರಸ್ತೆಯಲ್ಲೇ ರಾಜಾ ರೋಷವಾಗಿ ವ್ಯಾಪಾರ ಮಾಡುತ್ತಿದ್ದಾರೆ. ವಾಹನ ಚಾಲಕರು ಇವುಗಳಿಂದಾಗಿ ಹೊಸ ಸಮಸ್ಯೆ ಎದುರಿಸುವಂತಾಗಿದೆ. ಇವರನ್ನು ಪ್ರಶ್ನಿಸಿದರೆ ಮುಗಿಯಿತು. ಒಂದು ರೀತಿ ಗೂಂಡಾ ವರ್ತನೆಗೆ ಬೆಚ್ಚಿ ಬೀಳಬೇಕಿದೆ. ಇನ್ನು ಇದರ ಬಗ್ಗೆ ಪಾಲಿಕೆ ಸಿಬ್ಬಂದಿ ಹಾಗೂ ಸಂಚಾರಿ ಪೊಲೀಸರಿಗೆ ಗೊತ್ತಿಲ್ಲವೆಂದೇನಲ್ಲ. ಆದರೆ, ಅವರು ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ. ಇನ್ನೆಲ್ಲಿಂದ ಸ್ವಚ್ಛ, ಶಿಸ್ತು, ಅಂದದ ನಗರಿಯನ್ನು ಬಯಸುವುದು.

ಬಿಜೆಪಿ ಕಚೇರಿಯಲ್ಲಿ ಸಂತ ಶಿರೋಮಣಿ ಗುರು ರವಿದಾಸ್ ಜಿ ಜನ್ಮದಿನ ಆಚರಣೆ



ಮೈಸೂರು ಬಿಜೆಪಿ ಎಸ್‌ಸಿ ಮೋರ್ಚಾ ವತಿಯಿಂದ ಸಂತ ಶಿರೋಮಣಿ ಗುರು ರವಿದಾಸ್‌ಜಿ ಜನ್ಮದಿನ ಆಚರಿಸಲಾಯಿತು.

ಮೈಸೂರು, ಫೆ.2 (ಜಿಎ)–ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಎಸ್‌ಸಿ ಮೋರ್ಚಾ ವತಿಯಿಂದ ಸಂತ ಶಿರೋಮಣಿ ಗುರು ರವಿದಾಸ್ ಜಿ ಅವರ ಜನ್ಮ ದಿನ ಆಚರಿಸಲಾಯಿತು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸಂತ ಶಿರೋಮಣಿ ಗುರು ರವಿದಾಸ್ ಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿ, ಸಮಾನತೆಯ ಹರಿಕಾರರು ಅಸಮಾನತೆ ವಿರುದ್ಧ ದಾರ್ಶನಿಕತೆ ಮಾರ್ಗದಲ್ಲಿ ಭಕ್ತಿಯ ದಾರಿಯಲ್ಲಿ ಸಂತ ಶಿರೋಮಣಿ ರವಿದಾಸ್ ಜಿ 15, 16ನೇ ಶತಮಾನ ಭಕ್ತಿ ಚಳುವಳಿಯ ಮಹಾನ್ ಕವಿ, ಸಮಾಜ ಸುಧಾರಕ ಮತ್ತು ಆಧ್ಯಾತ್ಮಿಕ ಗುರುಗಳಾಗಿದ್ದ ಅವರು ಜಾತಿ ಪದ್ಧತಿಯನ್ನು ವಿರೋಧಿಸಿ, ಸಮಾನತೆ, ಪ್ರೀತಿ ಮತ್ತು ಭಗವಂತನ ಮೇಲಿನ ಭಕ್ತಿಯನ್ನು ಬೋಧಿಸಿದರು ಎಂದರು.

ರವಿದಾಸ್ ಜಿ ವಾರಣಾಸಿಯಲ್ಲಿ ಜನಿಸಿದ ಇವರು ಚರ್ಮಕಾರರ ಸಮುದಾಯದಿಂದ ಬಂದವರು. ಜಾತಿ, ಲಿಂಗ ಮತ್ತು ಸಾಮಾಜಿಕ ವಿಭಾಗಗಳನ್ನು ತೊರೆದು ಏಕತೆಯನ್ನು ಪ್ರತಿಪಾದಿಸಿದರು. ದುಃಖವಿಲ್ಲದ ನಗರ ಎಂಬ ಪರಿಕಲ್ಪನೆಯನ್ನು ನೀಡಿದ ಅವರು ಎಲ್ಲರಿಗೂ ಆಹಾರ, ಯಾರು ಹಸಿವಿನಿಂದ ಮಲಗಬಾರದು ಎಂಬ ಸಾಮಾಜಿಕ ವ್ಯವಸ್ಥೆಯನ್ನು ಅವರು ಕನಸು ಕಂಡಿದ್ದರು. ಅವರ ಕವಿತೆಗಳು ಮತ್ತು ಭಜನೆಗಳು ಭಗವಂತನ ಮೇಲಿನ ಭಕ್ತಿ, ಆಂತರಿಕ ಪರಿಶುದ್ಧತೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಬೆಳಕು ಚೆಲ್ಲುತ್ತವೆ ಉತ್ತರ ಭಾರತದ ಪಂಜಾಬ್, ಉತ್ತರ ಪ್ರದೇಶ, ಮಧ್ಯ ಪ್ರದೇಶ ಇವರನ್ನು ಗುರುವಾಗಿ ಪೂಜಿಸಲಾಗುತ್ತದೆ. ಇವರ ಜನ್ಮದಿನವನ್ನು 'ರವಿದಾಸ್ ಜಯಂತಿ'ಯಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಸಿದ್ದರಾಜು, ಗ್ರಾಮಾಂತರ ಅಧ್ಯಕ್ಷ ಸುಬ್ಬಣ್ಣ, ವಕ್ತಾರ ಮೋಹನ್, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಸಿ.ಕೆ.ರುದ್ರಮೂರ್ತಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಅನಿಲ್, ಶೈಲೇಂದ್ರ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಕಾರ್ತಿಕ್ ಮರಿಯಪ್ಪ, ಸ್ವಾಮಿ, ರಾಕೇಶ್‌ಗೌಡ, ಲೋಹಿತ್, ಸಚಿನ್‌ಗೌಡ, ಕೆ.ಗಿರೀಶ್, ಎನ್.ಯೋಗಾನಂದ, ನಾರಾಯಣ ಲೋಲಪ್ಪ, ಕೃಷ್ಣನಾಯಕ, ಮಹೇಶ್‌ರಾಜೇ ಅರಸ್, ಜಿ.ಎಂ. ಪಂಚಾಕ್ಷರಿ, ತ್ಯಾಗರಾಜ್, ಸರ್ವೇಶ್, ಶಿವರಾಜ್,ರಂಗಸ್ವಾಮಿ,ಚಿಕ್ಕವೆಂಕಟು, ಗುರುವಿನಾಯಕ, ನಂದಕುಮಾರ್, ಸೋಮು, ಪಾಪಣ್ಣ, ಚೆಲುವರಾಜ್ ಮತ್ತಿತರಿದ್ದರು ಉಪಸ್ಥಿತರಿದ್ದರು.

ರಾಮನಗರ ಬಿಟ್ಟು ಎಲ್ಲಿಗೂ ಹೋಗಲ್ಲ

- ಮುಂದಿನ ಸ್ಪರ್ಧಾಕ್ಷೇತ್ರದ ಊಹಾಪೋಹಕ್ಕೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ತೆರೆ
- ತಂದೆಯ ಕರ್ಮಭೂಮಿ, ತಾತನ ರಾಜಕೀಯ ಮರುಜನ್ಮದ ಪುಣ್ಯಭೂಮಿಯಲ್ಲೇ ಸ್ಪರ್ಧೆ

ಚಿಕ್ಕಮಗಳೂರು: ರಾಮನಗರ ನಮ್ಮ ತಂದೆಯ ಕರ್ಮಭೂಮಿ ಮತ್ತು ನಮ್ಮ ತಾತನಿಗೆ ರಾಜಕೀಯ ಮರುಜನ್ಮ ನೀಡಿದ ಪುಣ್ಯಭೂಮಿ. ಹಾಗಾಗಿ ಆ ನೆಲವನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.



ನಿಖಿಲ್

ಚಿಕ್ಕಮಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮನಗರ ಜಿಲ್ಲೆ ನನ್ನ ತಂದೆಯವರ ಕರ್ಮ ಭೂಮಿ. ಅಲ್ಲಿನ ಜನ 1994ರಲ್ಲಿ ನಮ್ಮ ತಾತ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ರಾಜಕೀಯವಾಗಿ ಮರುಜನ್ಮ ನೀಡಿದ್ದಾರೆ. ಅಂತಹ ಮಣ್ಣನ್ನು ಬಿಟ್ಟು ನಾನು ಎಲ್ಲಿಗೆ ಹೋಗಲಿ ಎಂದು ಹೇಳಿದರು.

ರಾಮನಗರದಲ್ಲಿನ ತಮ್ಮ ರಾಜಕೀಯ ಅಸ್ತಿತ್ವದ ಬಗ್ಗೆ ಮಾತನಾಡಿ, ಅಲ್ಲಿ ಪಕ್ಷದ ಹಿರಿಯ ಮುಖಂಡರಿದ್ದಾರೆ ಮತ್ತು ನಮ್ಮ ಕುಟುಂಬವನ್ನು ಪ್ರೀತಿಸುವ ಒಂದು ದೊಡ್ಡ ಬಳಗವೇ ಇದೆ. ನಡುನೀರಿನಲ್ಲಿ ಅವರ ಕೈಬಿಟ್ಟು ಬೇರೆ ಕ್ಷೇತ್ರಕ್ಕೆ ವಲಸೆ ಹೋಗುವ ಜಾಯಮಾನ ನಮ್ಮದಲ್ಲ. ಬೇರೆ ಯಾವುದೇ ಕ್ಷೇತ್ರದಲ್ಲಿ ನಾನು ಚುನಾವಣೆಗೆ ಸ್ಪರ್ಧಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ದೇವೇಗೌಡರ ಕುಟುಂಬ ರಾಮನಗರ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಪಾರ ಶ್ರಮ ಹಾಕಿದೆ. ಅಲ್ಲಿನ ನೀರಾವರಿ, ರಸ್ತೆ ಅಭಿವೃದ್ಧಿ ಸೇರಿದಂತೆ ಮೂಲ ಸೌಕರ್ಯಗಳ ವೃದ್ಧಿಗೆ ನಾವು ಪ್ರಾಮಾಣಿಕವಾಗಿ ದುಡಿದಿದ್ದೇವೆ. ಈ ಅಭಿವೃದ್ಧಿ ಕೆಲಸಗಳೇ ನಮಗೆ ಶ್ರೀರಕ್ಷೆಯಾಗಲಿವೆ. ಮುಂದಿನ ದಿನಗಳಲ್ಲಿ ಮತ್ತೆ ಜನರ ವಿಶ್ವಾಸಗಳಿಸುತ್ತೇವೆ. ಇತ್ತೀಚಿನ ದಿನಗಳಲ್ಲಿ ಪಕ್ಷಕ್ಕೆ ಸ್ವಲ್ಪ ಹಿನ್ನಡೆಯಾಗಿರುವುದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ರಾಜಕೀಯದಲ್ಲಿ ಏರು–ಪೇರುಗಳು ಸರ್ವೇ ಸಾಮಾನ್ಯ. ಕಳೆದ ನಾಲ್ಕು ಚುನಾವಣೆಗಳಲ್ಲಿ ರಾಮನಗರದ ಜನತೆ ನಮ್ಮ ಕೈಬಿಟ್ಟಿರಲಿಲ್ಲ. ಆದರೆ ಕೆಲವೊಂದು ಕಾಲಘಟ್ಟದಲ್ಲಿ ಬದಲಾವಣೆಗಳಾಗುತ್ತವೆ. ಅದೆಲ್ಲವನ್ನೂ ನಾವು ಸಮಚಿತ್ತದಿಂದ ಸ್ವೀಕರಿಸಬೇಕು ಎಂದರು.

ವದಂತಿಗಳಿಗೆ ತೆರೆ ಪ್ರಯತ್ನ: ನಿಖಿಲ್ ಕುಮಾರಸ್ವಾಮಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು, ತುಮಕೂರು ಅಥವಾ ಚಾಮರಾಜನಗರದಲ್ಲಿ ಸ್ಪರ್ಧಿಸುತ್ತಾರೆ ಎಂಬ ಚರ್ಚೆ ಶುರುವಾಗಿತ್ತು. ಇದಕ್ಕೆ ತುಮಕೂರಿನಲ್ಲಿ ಇತ್ತೀಚೆಗೆ ಸ್ಪಷ್ಟನೆ ನೀಡಿದ್ದ ನಿಖಿಲ್, ಸ್ಪರ್ಧಿಸುವ ಕ್ಷೇತ್ರ ತಿಳಿದರೆ ಕಾಣದ ಕೈಗಳು ಕೆಲಸ ಶುರು ಮಾಡುತ್ತವೆ. ನಾನು ಎಲ್ಲಿ ಮತ್ತು ಯಾವಾಗ ಸ್ಪರ್ಧಿಸಬೇಕು ಎಂಬುದನ್ನು ಜನ ತೀರ್ಮಾನಿಸುತ್ತಾರೆ. ಯಾವುದೇ ಕ್ಷೇತ್ರಕ್ಕೆ ಮೂಗು ತೂರಿಸುವ ವ್ಯಕ್ತಿತ್ವ ನನ್ನದಲ್ಲ. ಈ ವಿಚಾರದಲ್ಲಿ ಯಾವುದೇ ಗೊಂದಲ ಬೇಡ ಎಂದಿದ್ದರು.

ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಉನ್ನತ ಬದಲಾವಣೆ

- ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕ ಎಸ್.ಬಸವರಾಜು ಅಭಿಮತ
- ಶ್ರೀ ಮುರುಘರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆಯ 15ನೇ ವಾರ್ಷಿಕೋತ್ಸವ

ಮೈಸೂರು,ಫೆ.2(ಪಿಎಂ)–ಶಿಕ್ಷಣದಿಂದ ಸಮಾಜದಲ್ಲಿ ಉನ್ನತ ಬದಲಾವಣೆ ಸಾಧ್ಯ ಎಂದು ಮೈಸೂರಿನ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಅಭಿಪ್ರಾಯಪಟ್ಟರು.

ಚಾಮರಾಜನಗರದ ಮರಿಯಾಲ ಗ್ರಾಮದಲ್ಲಿರುವ ಮರಿಯಾಲ ಮಠದ ಶ್ರೀಮುರುಘ ರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆಯ ಆವರಣದಲ್ಲಿ ವಿದ್ಯಾಸಂಸ್ಥೆಯ 15ನೇ ವಾರ್ಷಿಕೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಮರಿಯಾಲ ಮಠದ ಶ್ರೀ ಮುರುಘ ರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆ ವಾರ್ಷಿಕೋತ್ಸವವನ್ನು ಎಸ್.ಬಸವರಾಜು ಉದ್ಘಾಟಿಸಿದರು.

ಶಿಕ್ಷಣವು ಜ್ಞಾನ, ಕೌಶಲ ಮತ್ತು ಬೌದ್ಧಿಕ ಬೆಳವಣಿಗೆ ಒದಗಿಸಿ ವ್ಯಕ್ತಿಯ ಜೀವನ ರೂಪಿಸುವ ಶಕ್ತಿಶಾಲಿ ಸಾಧನ. ಆತ್ಮವಿಶ್ವಾಸ, ತಾರ್ಕಿಕ ಚಿಂತನೆ ಮತ್ತು ಉತ್ತಮ ನೈತಿಕ ಮೌಲ್ಯಗಳನ್ನು ಬೆಳೆಸುವುದರೊಂದಿಗೆ ಆರ್ಥಿಕ ಭದ್ರತೆ ಮತ್ತು ವೈಯಕ್ತಿಕ ಯಶಸ್ಸನ್ನು ಖಚಿತಪಡಿಸುತ್ತದೆ. ದೇಶದ ಭವಿಷ್ಯ ಶಿಕ್ಷಣದ ಮೇಲೆ ನಿಂತಿದೆ ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಬಾಲ್ಯದಿಂದಲೇ ಅವರಿಗೆ ಉತ್ತಮ ಮಾರ್ಗದರ್ಶನ ಮಾಡಬೇಕು. ಆ ಮೂಲಕ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ದೇಶಕ್ಕೆ ಕೊಡುಗೆಯನ್ನಾಗಿ ನೀಡಬೇಕು ಎಂದು ಸಲಹೆ ನೀಡಿದರು.

ಶಿಕ್ಷ ಪಿಯು ಕಾಲೇಜಿನ ದೇವರಾಜ ಪಿ.ಚಿಕ್ಕಹಳ್ಳಿ ಮಾತನಾಡಿ, ಬಸವಾದಿ ಶರಣರು ನಾಡಿನಲ್ಲಿ ಜನ್ಮ ಪಡೆಯದಿದ್ದರೆ ಶಿಕ್ಷಣದ ಕ್ರಾಂತಿಯಾಗುತ್ತಿರಲಿಲ್ಲ. ಚಾತುರ್ವರ್ಣ ವ್ಯವಸ್ಥೆಯನ್ನು ಧಿಕ್ಕರಿಸಿ, ಲಿಂಗ, ಜಾತಿ, ಮತ್ತು ವರ್ಗ ತಾರತಮ್ಯವಿಲ್ಲದ ಸಮಸಮಾಜ ನಿರ್ಮಾಣಕ್ಕೆ ಅವರು ಶ್ರಮಿಸಿದರು. ಅವರ ಹಾದಿಯಲ್ಲಿ ಶ್ರೀ ಮಠ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮರಿಯಾಲದ ಶ್ರೀ ಮುರುಘ ರಾಜೇಂದ್ರ ಸ್ವಾಮಿ ಮಹಾ ಸಂಸ್ಥಾನ ಮಠದ ಅಧ್ಯಕ್ಷ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಮಾತನಾಡಿ, ಪ್ರತಿಭೆ ಮುಚ್ಚಿಟ್ಟರೆ ಕೊಳೆಯುತ್ತದೆ. ಬಿಚ್ಚಿಟ್ಟರೆ ಹೊಳೆಯುತ್ತದೆ. ಗ್ರಾಮೀಣ ಭಾಗದ ಮಕ್ಕಳಿಗೆ ಸಂಸ್ಕಾರ, ಮೌಲ್ಯಯುತ ಶಿಕ್ಷಣ ನೀಡಬೇಕು ಎನ್ನುವುದು ಶ್ರೀಮಠದ ಗುರಿ. ನಮ್ಮ ಶಾಲೆಯ ಮಕ್ಕಳು ಕೇವಲ ಪಠ್ಯಕ್ಕೆ ಸೀಮಿತವಾಗದೆ, ಪಠ್ಯೇತರ ಚಟುವಟಿಕೆಯಲ್ಲಿ ಸಾಧನೆ ಮಾಡಿದ್ದಾರೆ. ಅದಕ್ಕೆ ಬೋಧಕ ವರ್ಗದ ಶ್ರಮ ಅನನ್ಯ ಎಂದು ಹೇಳಿದರು.

ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ತೋಟೇಶ್, ನಿವೃತ್ತ ಸೈನಿಕ ಎಸ್.ಗಂಗಾಧರ್, ಸಿಆರ್‌ಪಿ ರೇಚಣ್ಣ ಮಾತನಾಡಿದರು. ಇದೇ ವೇಳೆ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಬಿ.ಕೆ.ನಾಗರಾಜು ಬ್ಯಾತಹಳ್ಳಿ, ಪ್ರಥಮ ದರ್ಜೆ ಗುತ್ತಿಗೆದಾರ ನಟರಾಜು, ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಶಾಲೆಯ ಮುಖ್ಯ ಶಿಕ್ಷಕ ಮಂಜು ಮತ್ತಿತರರು ಹಾಜರಿದ್ದರು.

ದೇಶ - ವಿದೇಶ

ಅಜಿತ್ ಪವಾರ್ ಅಂತಿಮ ದರ್ಶನದ ವೇಳೆ 30 ಲಕ್ಷ ರೂ. ಚಿನ್ನಾಭರಣ ಕಳ್ಳತನ



ಮಹಾರಾಷ್ಟ್ರ: ವಿಮಾನ ದುರಂತದಲ್ಲಿ ದುರ್ಮರಣಕ್ಕೀಡಾದ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅಂತಿಮ ದರ್ಶನದ ವೇಳೆ ಖದೀಮರ ತಂಡವೊಂದು ಬರೋಬ್ಬರಿ 30 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಿರುವುದು ಬೆಳಕಿಗೆ ಬಂದಿದೆ. ಅಜಿತ್ ಪವಾರ್ ಅವರ ಪಾರ್ಥಿವ ಶರೀರವನ್ನು ಬಾರಾಮತಿಯ ವಿದ್ಯಾ ಪ್ರತಿಷ್ಠಾನ ಮೈದಾನದಲ್ಲಿ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ಮಾಡಲಾಯಿತು. ಮಹಾರಾಷ್ಟ್ರದ ಮೂಲೆ ಮೂಲೆಗಳಿಂದ ಲಕ್ಷಾಂತರ ಜನರು ಅಂತಿಮ ನಮನ ಸಲ್ಲಿಸಲು ಬಾರಾಮತಿಗೆ ಆಗಮಿಸಿದ್ದರು. ಈ ಬೃಹತ್ ಜನಸಂದಣಿಯ ಲಾಭ ಪಡೆದುಕೊಂಡ ಖದೀಮರ ತಂಡವೊಂದು 15 ಜನರ ಚಿನ್ನದ ಸರಗಳನ್ನು ಕಳ್ಳತನ ಮಾಡಿದ್ದಾರೆ. ಕೆಲವು ಶಂಕಿತ ಕಳ್ಳರನ್ನು ನಾಗರಿಕರು ಹಿಡಿದು, ಪೊಲೀಸರಿಗೆ ಒಪ್ಪಿಸಿದರು. ಬಾರಾಮತಿ ತಾಲೂಕು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಮೊಹಮ್ಮದ್ ಯೂನಸ್, ರಾಜ್‌ಕುಮಾರ್ ಅಠಾವಳೆ, ಎಜಾಜ್ ಮಿರಾವಾಲೆ, ಮೊಹಮ್ಮದ್ ಸಿರಾಜ್, ಬಾಲು ಬೋಟ್ರೆ ಮತ್ತು ಇತರ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಬಲೂಚಿಸ್ತಾನ್ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿದ ಮಹಿಳೆಯರು



ಕ್ವೆಟ್ಟಾ: ಬಲೂಚಿಸ್ತಾನದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಬಲೂಚ್ ಲಿಬರೇಷನ್ ಆರ್ಮಿ(ಬಿಎಲ್‌ಎ)ಯ ಪುರುಷ ಹೋರಾಟಗಾರರಿಗೆ ಮಹಿಳೆಯರೂ ಹೆಗಲು ನೀಡಿದ್ದಾರೆ.

ಪಾಕಿಸ್ತಾನ ಸೇನಾ ಪಡೆಗಳ ವಿರುದ್ಧ ಬಿಎಲ್‌ಎ ಆಪರೇಷನ್ ಹೆರೋಫ್ 2.0 ಕಾರ್ಯಾಚರಣೆ ಆರಂಭಿಸಿದ್ದು, ಕಳೆದ 4 ದಿನಗಳಿಂದ ಬಲೂಚಿಸ್ತಾನ ಪ್ರಾಂತ್ಯದ ರಾಜಧಾನಿ ಕ್ವೆಟ್ಟಾ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಪಾಕಿಸ್ತಾನ ಸೇನೆ ಮತ್ತು ಬಿಎಲ್‌ಎ ನಡುವೆ ಭೀಕರ ಕಾಳಗ ನಡೆಯುತ್ತಿದೆ. ಈ ಹೋರಾಟದಲ್ಲಿ ಮಹಿಳಾ ಬಂಡುಕೋರರು ಸಕ್ರಿಯವಾಗಿ ಭಾಗವಹಿಸಿದ್ದಾರೆ. ಬಿಎಲ್‌ಎ ತನ್ನ ಮಹಿಳಾ ಆತ್ಮಹತ್ಯಾ ಬಾಂಬ್ ದಾಳಿಕೋರರನ್ನು ಬಳಸಲಾಗುತ್ತಿದೆ. ಈಗಾಗಲೇ ಓರ್ವ ಮಹಿಳೆ, ಪಾಕ್ ಸೇನಾ ನೆಲೆಗಳ ಮೇಲೆ ಆತ್ಮಹತ್ಯಾ ಬಾಂಬ್ ದಾಳಿ ನಡೆಸಿ ಬಲಿಯಾಗಿದ್ದಾಳೆ. ಮತ್ತೋರ್ವ ಫಿದಾಯಿನ್ ಹವಾ ಬಲೋಚ್, ಪಾಕ್ ಪಡೆಗಳೊಂದಿಗೆ 12 ಗಂಟೆಗಳವರೆಗೆ ಕಾದಾಡಿ ಸಾವನ್ನಪ್ಪಿದ್ದಾಳೆ. ಪಾಕಿಸ್ತಾನ ಸೇನೆಯ ಸುಮಾರು 200ಕ್ಕೂ ಹೆಚ್ಚು ಯೋಧರನ್ನು ಹತ್ಯೆ ಮಾಡಿ, 17 ಪಾಕ್ ಸೈನಿಕರನ್ನು ಸೆರೆ ಹಿಡಿದಿದ್ದಾರೆ. ಬಂಡುಕೋರರಿಗೆ ಭಾರತ ಬೆಂಬಲ ನೀಡುತ್ತಿದೆ ಎಂದು ಪಾಕಿಸ್ತಾನ ಆರೋಪಿಸಿದೆ.

ಭಯೋತ್ಪಾದಕ ದಾಳಿ; ಪಾಕಿಸ್ತಾನದ ಆರೋಪಕ್ಕೆ ಭಾರತ ತಿರುಗೇಟು



ನವದೆಹಲಿ: ಭಯೋತ್ಪಾದಕ ದಾಳಿಗಳಲ್ಲಿ ಭಾರತ ಕೈವಾಡವಿದೆ ಎಂಬ ಪಾಕಿಸ್ತಾನದ ಆರೋಪಗಳನ್ನು ನಿರಾಕರಿಸಿರುವ ಭಾರತ, ಆರೋಪ ಮಾಡುವುದನ್ನು ಬಿಟ್ಟು ಆಂತರಿಕ ಭದ್ರತಾ ವೈಫಲ್ಯಗಳತ್ತ ಗಮನಹರಿಸಲಿ ಎಂದು ತಿರುಗೇಟು ನೀಡಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಂಧೀರ್ ಜೈಸ್ವಾಲ್, ಪಾಕಿಸ್ತಾನವು ಪ್ರತೀ ಬಾರಿ ಹಿಂಸಾತ್ಮಕ ಘಟನೆಗಳು ನಡೆದಾಗ ಭಾರತವನ್ನು ದೂಷಿಸುವುದನ್ನು ರೂಢಿಸಿಕೊಂಡಿದೆ. ಇದು ತನ್ನ ಆಂತರಿಕ ವೈಫಲ್ಯಗಳನ್ನು ಮುಚ್ಚಿಹಾಕುವ ತಂತ್ರವಾಗಿದೆ. ಆರೋಪ ಮಾಡುವುದನ್ನು ಬಿಟ್ಟು, ಪಾಕಿಸ್ತಾನ ಬಲೂಚಿಸ್ತಾನ ಪ್ರದೇಶದಲ್ಲಿ ದೀರ್ಘಕಾಲದಿಂದಲೂ ಇರುವ ರಾಜಕೀಯ ಮತ್ತು ಆರ್ಥಿಕ ಅಸಮಾಧಾನಗಳತ್ತ ಗಮನಹರಿಸಲಿ ಎಂದು ಕಿಡಿಕಾರಿದ್ದಾರೆ. ನಿಷೇಧಿತ ಬಲೂಚಿಸ್ತಾನ್ ಲಿಬರೇಷನ್ ಆರ್ಮಿ, ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಪಾಕ್ ಐಎಸ್‌ಐ ಶಿಬಿರದ ಮೇಲೆ ಶನಿವಾರ ಆತ್ಮಾಹುತಿ ಬಾಂಬ್ ದಾಳಿ ನಡೆದಿತ್ತು. ದಾಳಿಯಲ್ಲಿ 3 ಮಕ್ಕಳು ಸೇರಿ 18 ನಾಗರಿಕರು ಹಾಗೂ 15 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಇದೇ ವೇಳೆ ಬಲೂಚಿಸ್ತಾನದ ವಿವಿಧ ಪ್ರದೇಶಗಳಲ್ಲಿ 145 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ತಿಳಿಸಿದೆ.

ಬಾಂಗ್ಲಾ ಮಾಜಿ ಪ್ರಧಾನಿ ಹಸೀನಾಗೆ 10 ವರ್ಷ ಜೈಲು ಶಿಕ್ಷೆ



ಬಾಂಗ್ಲಾದೇಶ: ಸರ್ಕಾರಿ ವಸತಿ ಯೋಜನೆಯ ಭೂ ಹಂಚಿಕೆಯಲ್ಲಿನ ಅಕ್ರಮಗಳಿಗೆ ಸಂಬಂಧಿಸಿದ ಎರಡು ಪ್ರತ್ಯೇಕ ಭ್ರಷ್ಟಾಚಾರ ಪ್ರಕರಣಗಳಲ್ಲಿ ಬಾಂಗ್ಲಾದೇಶ ಸ್ಥಳೀಯ ನ್ಯಾಯಾಲಯವು ಮಾಜಿ ಪ್ರಧಾನಿ ಶೇಖ್ ಹಸೀನಾಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಢಾಕಾ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಬಿಯುಲ್ ಅಲಂ ತೀರ್ಪು ಪ್ರಕಟಿಸಿದ್ದು, ಹಸೀನಾ ಅವರಿಗೆ ಪ್ರತಿ ಪ್ರಕರಣಕ್ಕೆ 5 ವರ್ಷದಂತೆ ಒಟ್ಟು 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದ್ದಾರೆ. ರಾಜುಕ್ ನ್ಯೂ ಟೌನ್ ಯೋಜನೆಯಡಿ ಪ್ಲಾಟ್‌ಗಳ ಹಂಚಿಕೆಯಲ್ಲಿ ಅಕ್ರಮಗಳ ಆರೋಪದ ಮೇಲೆ 78 ವರ್ಷದ ಶೇಖ್ ಹಸೀನಾ, ಸೋದರಳಿಯ ರದ್ವಾನ್ ಮುಜೀಬ್ ಸಿದ್ದಿಕ್ ಮತ್ತು ಸೊಸೆಯಂದಿರಾದ ತುಲಿಪ್ ರಿಜ್ವಾನಾ ಸಿದ್ದಿಕ್ ಮತ್ತು ಅಜ್ಮಿನಾ ಸಿದ್ದಿಕ್ ಮತ್ತು ಇತರರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ಪ್ರಕಟವಾದ ತೀರ್ಪಿನಲ್ಲಿ ಶೇಖ್ ಹಸೀನಾಳ ಸೊಸೆ ತುಲಿಪ್ ಸಿದ್ದಿಕ್‌ಗೆ 4 ವರ್ಷ ಮತ್ತು ಅಳಿಯ ರದ್ವಾನ್ ಮುಜೀಬ್ ಸಿದ್ದಿಕ್ ಮತ್ತು ಅಜ್ಮಿನಾ ಸಿದ್ದಿಕ್‌ಗೆ ಎರಡೂ ಪ್ರಕರಣಗಳಲ್ಲಿ ತಲಾ 7 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ನ್ಯಾಯಾಲಯದ ಮುಂದೆ ಶರಣಾದ ಏಕೈಕ ಆರೋಪಿ ಮೊಹಮ್ಮದ್ ಖುರ್ಷಿದ್ ಆಲಂಗೆ ಪ್ರತಿ ಪ್ರಕರಣದಲ್ಲಿ ಒಂದು ವರ್ಷದಂತೆ ಒಟ್ಟು ಎರಡು ವರ್ಷಗಳ ಜೈಲು ಶಿಕ್ಷೆ ಹಾಗೂ ತಲಾ 1 ಲಕ್ಷ ಟಾಕಾ ದಂಡ ವಿಧಿಸಿದೆ.

ಒಂದೇ ವಿಳಾಸಕ್ಕೆ 24 ಪಾಸ್‌ಪೋರ್ಟ್ ವಿತರಣೆ!



ಉತ್ತರ ಪ್ರದೇಶ: ಗಾಜಿಯಾಬಾದ್‌ನಲ್ಲಿ ನಕಲಿ ದಾಖಲೆಗಳನ್ನು ಬಳಸಿಕೊಂಡು ಬರೋಬ್ಬರಿ 24 ಪಾಸ್‌ಪೋರ್ಟ್ ಪಡೆದುಕೊಂಡಿರುವ ಹಗರಣ ಬೆಳಕಿಗೆ ಬಂದಿದೆ.

ವಿಚಿತ್ರವೆಂದರೆ ಒಂದೇ ವಿಳಾಸ ಹಾಗೂ ಒಂದೇ ಮೊಬೈಲ್ ನಂಬರ್ ಹಾಗೂ ನಕಲಿ ದಾಖಲೆಗಳನ್ನು ಬಳಸಿಕೊಂಡು ಅರ್ಜಿ ಸಲ್ಲಿಸಿದ 24 ಬಾರಿಯೂ ಪಾಸ್‌ಪೋರ್ಟ್ ವಿತರಿಸಲಾಗಿದೆ. ದೆಹಲಿಯ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ, ಒಂದೇ ವಿಳಾಸಕ್ಕೆ ಬಹು ಪಾಸ್‌ಪೋರ್ಟ್‌ಗಳನ್ನು ನೀಡಲಾಗುತ್ತಿರುವ ಮತ್ತು ಒಂದೇ ಮೊಬೈಲ್ ಸಂಖ್ಯೆಯನ್ನು ಪದೇ ಪದೆ ಬಳಸಲಾಗುತ್ತಿರುವ ಅನುಮಾನಾಸ್ಪದ ಅರ್ಜಿಗಳ ಬಗ್ಗೆ ಪರಿಶೀಲಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ.

ಈ ಬಗ್ಗೆ ಭೋಜ್‌ಪುರ ಪೊಲೀಸ್ ಠಾಣೆಯಲ್ಲಿ, ಪೋಸ್ಟ್ ಮ್ಯಾನ್ ಸೇರಿದಂತೆ 26 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ತನಿಖೆ ವೇಳೆ, ಪೋಸ್ಟ್ ಮ್ಯಾನ್ ಅರುಣ್ ಕುಮಾರ್, ನಕಲಿ ಪಾಸ್ ಪೋರ್ಟ್ ವಿತರಣಾ ಗ್ಯಾಂಗ್‌ನೊಂದಿಗೆ ಶಾಮೀಲಾಗಿರುವುದು ಧೃಡವಾಗಿದೆ. 5 ತಿಂಗಳ ಹಿಂದೆ ಪ್ರಕಾಶ್ ಸುಬ್ಬಾ ಮತ್ತು ವಿವೇಕ್ ಎಂಬುವವರು, ಪಾಸ್‌ಪೋರ್ಟ್‌ಗಳನ್ನು ಮೂಲ ವಿಳಾಸಕ್ಕೆ ಬದಲು ತಮ್ಮ ಕೈಗೆ ನೇರವಾಗಿ ಹಸ್ತಾಂತರಿಸಿದರೆ ಪ್ರತಿ ಪಾಸ್‌ಪೋರ್ಟ್‌ಗೆ 2 ಸಾವಿರ ನೀಡಲು ಒಪ್ಪಂದ ಮಾಡಿಕೊಂಡಿದ್ದರೆಂದು ತಿಳಿಸಿದ್ದಾನೆ. ಈ ದಂಧೆಯ ಹಿಂದೆ ದೊಡ್ಡ ಜಾಲವಿದೆ ಎಂದು ಶಂಕಿಸಲಾಗಿದೆ.

ರಸ್ತೆ ಕಳಪೆ ಕಾಮಗಾರಿ ಕಂಡು ಉದ್ಘಾಟಿಸದೆ ಹಿಂತಿರುಗಿದ ಶಾಸಕರು


ಕುಶಾಲನಗರ, ಫೆ.2–ರಸ್ತೆ ಡಾಂಬರೀಕರಣ ಕಾಮಗಾರಿಯಲ್ಲಿ ಕಳಪೆ ಕಂಡು ಬಂದ ಹಿನ್ನೆಲೆಯಲ್ಲಿ ಶಾಸಕ ಡಾ. ಮಂತರ್ ಗೌಡ ಆಕ್ರೋಶಗೊಂಡು ರಸ್ತೆಯನ್ನು ಉದ್ಘಾಟಿಸದೆ ಹಿಂದಿರುಗಿದ ದೃಷ್ಟಾಂತ ನಡೆದಿದೆ.

ಶಾಸಕ ಮಂತರ್ ಗೌಡ ಹಾಗೂ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ಅಧಿಕಾರಿಗಳು ಹಾಗೂ ಪಕ್ಷದ ಮುಖಂಡರೊಂದಿಗೆ ಕಾಮಗಾರಿಯನ್ನು ಪರಿಶೀಲಿಸಿ ಗುಣಮಟ್ಟದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿಗುತ್ತಿಗೆದಾರ ಮತ್ತು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ನಿಂಗೇಗೌಡ ಬಡಾವಣೆಯ ನಿವಾಸಿಗಳನ್ನು ಕಳಪೆ ಗುಣಮಟ್ಟದ ರಸ್ತೆ ನಿರ್ಮಿಸಿದ್ದರು ಏನು ಮಾಡುತ್ತಿದ್ದಿರಿ ಎಂದು ಪ್ರಶ್ನಿಸಿದರು. ಗುಣಮಟ್ಟದ ರಸ್ತೆ ನಿರ್ಮಾಣ ಮಾಡಿ ಸಾರ್ವಜನಿಕ ಅನುಕೂಲ ಮಾಡಿಕೊಡುವಂತೆ ಗುತ್ತಿಗೆದಾರರಿಗೂ ಹಾಗೂ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು. ಇದು ಕಳಪೆ, ಅಸಮರ್ಪಕ ಹಾಗೂ ಸಾರ್ವಜನಿಕ ಹಣದ ದುರುಪಯೋಗಕ್ಕೆ ಸಾಕ್ಷಿಯಾಗುವ ಕಾಮಗಾರಿ ಎಂದು ಮನವರಿಕೆಯಾದ ಹಿನ್ನೆಲೆಯಲ್ಲಿ, ಶಾಸಕರು ರಸ್ತೆಯನ್ನು ಉದ್ಘಾಟಿಸದೆ ಹಿಂತಿರುಗಿದರು.


ರಸ್ತೆ ಕಾಮಗಾರಿಯನ್ನು ಶಾಶಕ ಮಂತರ್ ಗೌಡ ಪರಿಶೀಲಿಸಿದರು.

ವಿಕಸಿತ ಭಾರತ ಪರಿಕಲ್ಪನೆಯಡಿ ಸರ್ವವ್ಯಾಪಿ ಮುಂಗಡ ಪತ್ರ



ಮಡಿಕೇರಿ,ಫೆ.2–ವಿಕಸಿತ ಭಾರತ ಪರಿಕಲ್ಪನೆಯಡಿ ದೂರದೃಷ್ಟಿಯ ಮತ್ತು ಸರ್ವಜನರನ್ನು ಮುಟ್ಟುವ ಸರ್ವವ್ಯಾಪಿ ಮುಂಗಡ ಪತ್ರವನ್ನು ಕೇಂದ್ರದ ವಿತ್ತ ಸಚಿವರು ಮಂಡಿಸಿದ್ದಾರೆ ಎಂದು ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಪ್ರತಿಕ್ರಿಯಿಸಿದ್ದಾರೆ.

ವಿರೋಧ ಪಕ್ಷಗಳು ಟೀಕಿಸಿರುವಂತೆ ಇದು ಎಂದಿಗೂ ಚುನಾವಣಾ ಪೂರ್ವದ ಬಜೆಟ್ ಅಲ್ಲ. ಬದಲಾಗಿ ಕೃಷಿ, ಶಿಕ್ಷಣಕ್ಕೆ ಒತ್ತು ನೀಡುವ ಅದರಲ್ಲೂ ಪ್ರಮುಖವಾಗಿ ಯುವ ಸಮೂಹವನ್ನು ಮುಟ್ಟುವ ಮುಂಗಡ ಪತ್ರವಾಗಿದೆ. ಇಂತಹ ಮುಂಗಡ ಪತ್ರದ ಬಗ್ಗೆ ಸಿದ್ದರಾಮಯ್ಯ ಅವರು, ಬಜೆಟ್‌ನಲ್ಲಿ ಕರ್ನಾಟಕಕ್ಕೆ ಚೊಂಬು ಎಂದು ಹೇಳಿರುವುದು ಕೇವಲ ಟೀಕೆಗೋಸ್ಕರ ಟೀಕೆ ಎಂದು ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಭಾರತವನ್ನು 2047ಕ್ಕೆ ವಿಕಸಿತ ಭಾರತವನ್ನಾಗಿ ರೂಪಿಸುವ ನಿಟ್ಟಿನಲ್ಲಿ ರಾಷ್ಟ್ರವನ್ನು ಆರ್ಥಿಕವಾಗಿ ಸದೃಢವನ್ನಾಗಿ ಮಾಡುವ ದೂರದೃಷ್ಟಿಯ ಮುಂಗಡ ಪತ್ರವನ್ನು ಕೇಂದ್ರ ಮಂಡಿಸಿದೆ. ದೇಶದ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯಲ್ಲಿ ಉಪಯುಕ್ತವಾಗುವಂತೆ ಮುಂಗಡ ಪತ್ರವನ್ನು ಮಂಡಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಕೇಂದ್ರ ಸರ್ಕಾರದ ದೂರದೃಷ್ಟಿಯ ಇಂತಹ ಪ್ರಯತ್ನಗಳಿಂದಾಗಿ ನೆರೆಯ ರಾಷ್ಟ್ರಗಳು ಆರ್ಥಿಕವಾಗಿ ದಿವಾಳಿಯಾಗಿದ್ದರು, ಭಾರತ ಆರ್ಥಿಕವಾಗಿ ಬಲಾಢ್ಯವಾಗಿ ರೂಪುಗೊಂಡಿದೆ ಎಂದು ಅಭಿಪ್ರಾಯಿಸಿದರು.

ಕರಾವಳಿ ಪ್ರವಾಸೋದ್ಯಮಕ್ಕೆ ಒತ್ತು, ಶ್ರೀಗಂಧ, ಕೊಕ್ಕೊ, ಗೇರು ಬೀಜದ ಕೃಷಿಗೆ ನೀಡಿರುವ ಉತ್ತೇಜನಗಳು ರಾಜ್ಯಕ್ಕೂ ಹೆಚ್ಚಿನ ಅನುಕೂಲತೆಯನ್ನು ಕಲ್ಪಿಸಲಿದೆ. ಕ್ರೀಡೆಗೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ಕ್ರೀಡಾ ತರಬೇತುದಾರರನ್ನು ಸಜ್ಜುಗೊಳಿಸುವುದು, ಕ್ರೀಡಾ ತರಬೇತಿ ಕೇಂದ್ರಗಳನ್ನು ತೆರೆಯುವ ಅಂಶಗಳು ಉಪಯುಕ್ತವಾಗಿದೆ ಎಂದು ಹೇಳಿದರು. ಪಕ್ಷದ ಪ್ರಮುಖರಾದ ಮಹೇಶ್ ಜೈನಿ, ತಳೂರು ಕಿಶೋರ್ ಕುಮಾರ್, ಸಜಿಲ್ ಕೃಷ್ಣನ್, ಬಿ.ಕೆ.ಅರುಣ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಂತ್ಯ ಕಾಣದ ಧರ್ಮವೇ ಸನಾತನ ಹಿಂದೂ ಧರ್ಮ


ಬೃಹತ್ ಹಿಂದೂ ಸಂಗಮ ಸಮಾವೇಶದ ಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮಿಜಿ ಮಾತನಾಡಿದರು

ವಿರಾಜಪೇಟೆ, ಫೆ.2–ಅನೇಕ ಧರ್ಮ ಸಂಸ್ಕೃತಿಗಳು ಜೀವಿಸಿ ಕಣ್ಮರೆಯಾದ ನಿದರ್ಶನಗಳಿವೆ. ಯಾವ ಧರ್ಮ ಅಂತ್ಯ ಕಾಣುವುದಿಲ್ಲವೋ ಅದೇ ಸನಾ ತನ ಹಿಂದೂ ಧರ್ಮ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಸುಳ್ಯ ವಿಭಾಗದ ಕಾರ್ಯವಾಹ ಸುಭಾಷ್ ಚಂದ್ರ ಕಳಂಜೆ ಅವರು ಅಭಿಮತ ವ್ಯಕ್ತಪಡಿಸಿದರು.

ಹಿಂದೂ ಸಂಗಮ ಆಯೋಜನಾ ಸಮಿತಿ ಅರಮೇರಿ ಮಂಡಲವು ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮಿ ವಿದ್ಯಾಪೀಠದ ಶಾಲಾ ಮೈದಾನದಲ್ಲಿ ನಡೆದ ಬೃಹತ್ ಹಿಂದೂ ಸಂಗಮ ಸಮಾವೇಶದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸ ಉಳ್ಳ ಭವ್ಯ ಭಾರತದಲ್ಲಿ ಹಿಂದೂ ಧರ್ಮದ ಆಚರಣೆಯ ಮೇಲೆ ದೇಶ–ವಿದೇಶಗಳ ಅಕ್ರಮಣ ನಡೆದಿದ್ದಾಗ್ಯೂ, ಸನಾತನ ಧರ್ಮವು ಇಂದಿಗೂ ಅಜರಾಮರವಾಗಿದೆ ಎಂದು ಹೇಳಿದರು.

ಸಭಾ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮಿಜಿ ಮಾತನಾಡಿ, ಸಂಘಟನಾತ್ಮಕ ಸಮಸ್ಯೆಗಳು ಎದುರಾದಲ್ಲಿ ಸಂಘಟನೆಯ ಶಕ್ತಿ ಜಾಗೃತವಾಗಬೇಕು. ನಮ್ಮ ರಾಷ್ಟ್ರಕ್ಕೆ ಜಾತಿ ವ್ಯವಸ್ಥೆ, ಮೇಲು ಕೀಲು ಎಂಬ ಧೋರಣೆಯಿಂದಾಗಿ ಹಿನ್ನಡೆ ಅನುಭವಿಸುತ್ತಿದ್ದೇವೆ. ಇದನ್ನು ಧಮನ ಮಾಡಲು ಸಮಾಜ ಪರಿವರ್ತನೆಗೆ ಅಣಿಯಾಗಬೇಕು. ಉತ್ತಮ ಆಲೋಚನೆ, ಗುಣವನ್ನು ಮತ್ತು ರಾಷ್ಟ್ರ ಭಕ್ತಿಯ ಚಿಂತನೆಯನ್ನು ಕರುಣಿಸ ಬೇಕು. ಧರ್ಮ ಚಿಂತನೆ, ರಾಷ್ಟ್ರ ಭಕ್ತಿ, ಸಮಾಜ ಉದ್ಧಾರಕ್ಕೆ ಪ್ರತಿಯೊಬ್ಬರು ನಿರ್ಮಾತೃರಾಗಬೇಕು ಎಂದರು.

ಹಿಂದೂ ಸಂಗಮ ಆಯೋಜನಾ ಸಮಿತಿ ಸಂಚಾಲಕರಾದ ರಾಜೀವ್ ಕಾರ್ಯಪ್ಪ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮದ ಹಿರಿಯರಾದ ಸೋಮೆಯಂಡ ಕೆ.ಪೂವಮ್ಮ, ಬಾಳೆಕುಟ್ಟೀರ ಮಂದಣ್ಣ, ಮತ್ತು ಕಟ್ಟೇರ ಕಾವೇರಪ್ಪ ಉಪಸ್ಥಿತರಿದ್ದರು.

ಮಲ್ಲಂಮಟ್ಟಿ ಜಂಕ್ಷನ್‌ನಿಂದ ಆರಂಭವಾದ ಶೋಭಾಯಾತ್ರೆಯಲ್ಲಿ ಕೊಡಗಿನ ಸಾಂಪ್ರದಾಯಿಕ ವಾದ್ಯ, ದುಡಿಕೊಟ್ಟ್ ಪಾಟ್, ಹೆಗ್ಗಳ ರುದ್ರಂ ಮಹಿಳಾ ತಂಡ ಚೆಂಡೆ ವಾದ್ಯ, ತೋಮರ ಶಾರದ ತಂಡದವರಿಂದ ಉರುಟ್ಟಿಕೊಟ್ಟ್ ಪಾಟ್ ಶೋಭಾಯಾತ್ರೆಗೆ ಸಾತ್ ನೀಡಿತು. ಮೈತಾಡಿ, ಅರಮೇರಿ, ಕದನೂರು ಗ್ರಾಮದ ಹಿಂದೂ ಬಾಂಧವರು ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದರು. ಆಯೋಜನಾ ಸಮಿತಿ ಅಧ್ಯಕ್ಷ ಸೋಮೆಯಂಡ ರೇಶಾ ತಿಮ್ಮಯ್ಯ, ಕುಂಬೇಯಂಡ ಗಣೇಶ್, ಹಿಂದೂ ಸಂಗಮ ಆಯೋಜನಾ ಸಮಿತಿಯ ಸದಸ್ಯರು ಕಾರ್ಯಕರ್ತರು ಅರಮೇರಿ ಮಂಡಲದ ಹಿಂದೂ ಭಾಂದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಚಿರತೆ ದಾಳಿಗೆ ಶ್ವಾನ ಗಂಭೀರ ಗಾಯ

ಮಡಿಕೇರಿ: ಚಿರತೆ ದಾಳಿಗೆ ಶ್ವಾನವೊಂದು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸೋಮವಾರಪೇಟೆ ತಾಲೂಕಿನ ಕಾರೇಕೊಪ್ಪದಲ್ಲಿ ನಡೆದಿದೆ.



ಗ್ರಾಮದ ಸುನಿಲ್ ಮತ್ತು ಕೃಷ್ಣ ಮನೆ ಬಳಿ ತಡರಾತ್ರಿ ಚಿರತೆ ಪ್ರತ್ಯಕ್ಷವಾಗಿದ್ದು, ನಾಯಿಯನ್ನು ಹಿಡಿದು ಎಳೆದೊಯ್ಯುವಾಗ ಶಬ್ದ ಮಾಡಿದ ಪರಿಣಾಮ ಚಿರತೆ ಓಡಿ ಹೋಗಿದೆ. ದಾಳಿಯಿಂದ ಶ್ವಾನ ಗಂಭೀರವಾಗಿ ಗಾಯಗೊಂಡಿದ್ದು, ಸಾವು ಬದುಕಿನ ನಡುವೆ ಸೆಣಸಾಡುತ್ತಿದೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಚಿರತೆ ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡುವಂತೆ ಕಾರೇಕೊಪ್ಪ ಗ್ರಾಮಸ್ಥರು ಆಗ್ರಹಿಸಿದರು. ಗ್ರಾಮದ ಕಾಫಿ ತೋಟಗಳ ಒಳಗೆಯೇ ಚಿರತೆ ಬೀಡು ಬಿಟ್ಟಿದ್ದು, ಸೂಕ್ತ ಕ್ರಮಕ್ಕೆ ಮುಂದಾಗಿರುವ ಅರಣ್ಯ ಇಲಾಖೆ ಚಿರತೆ ಹಿಡಿಯಲು ಬೋನ್ ಅಳವಡಿಸಲು ಸಿದ್ಧತೆ ನಡೆಸಿದ್ದು, ಈ ಭಾಗದ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಮನವಿ ಮಾಡಿದೆ.

ಡಾ.ಸೂರ್ಯಕುಮಾರ್‌ಗೆ ಗೋಪಾಲಕೃಷ್ಣ ದತ್ತಿ ಪ್ರಶಸ್ತಿ



ಮಡಿಕೇರಿ: ಈ ಬಾರಿಯ ದಿ.ಬಿ.ಎಸ್ ಗೋಪಾಲಕೃಷ್ಣ ದತ್ತಿ ಪ್ರಶಸ್ತಿ ಜಿಲ್ಲೆಯ ವೈದ್ಯ ಡಾ.ಕೆ.ಬಿ. ಸೂರ್ಯಕುಮಾರ್ ಪಾತ್ರರಾಗಿದ್ದಾರೆ. ಇವರು ರಚಿಸಿದ 'ವೈದ್ಯ ಕಂಡ ವಿಸ್ಮಯ' ವಿಭಿನ್ನ ವಿಶ್ವದ ಇಣುಕು ನೋಟ ಕೃತಿಯು ದತ್ತಿ ಪ್ರಶಸ್ತಿಗೆ ಪುರಸ್ಕೃತಗೊಂಡಿದೆ. ಜಿಲ್ಲೆಯ ಹಿರಿಯ ಪತ್ರಕರ್ತರಾಗಿದ್ದ ಬಿ.ಎಸ್ ಗೋಪಾಲಕೃಷ್ಣರ ಹೆಸರಿನಲ್ಲಿ ಪುತ್ರರು ಸ್ಥಾಪಿಸಿರುವ ದತ್ತಿಯ ದ್ವಿತೀಯ ಪ್ರಶಸ್ತಿ ಇದಾಗಿದೆ.

ಡಾ.ಕೆ.ಬಿ. ಸೂರ್ಯಕುಮಾರ್ ಜಿಲ್ಲಾ ಆಸ್ಪತ್ರೆಯಲ್ಲಿ 18 ವರ್ಷಗಳ ಕಾಲ ವೈದ್ಯಕೀಯ ವಿಭಾಗ ಮತ್ತು ವಿಧಿವಿಜ್ಞಾನ ಪರಿಣಿತರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. 90ರ ದಶಕದಲ್ಲಿ ಆರೋಗ್ಯ ಇಲಾಖೆಯಲ್ಲಿದ್ದ ಏಕೈಕ ವಿಧಿ ವಿಜ್ಞಾನ ಪರಿಣಿತರು ಎಂಬ ಖ್ಯಾತಿ ಪಡೆದಿದ್ದಾರೆ. ಪ್ರಸ್ತುತ ನಗರದ ನಿವಾಸಿಯಾಗಿರುವ ಇವರು, ಸುಳ್ಯ ಕೆ.ವಿ.ಜಿ ಮೆಡಿಕಲ್ ಕಾಲೇಜಿನ ವಿಧಿ ವಿಜ್ಞಾನ ವಿಭಾಗದಲ್ಲಿ ಪ್ರೊಫೆಸರ್ ಮತ್ತು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಂದೆ ನಡೆಯುವ ಸಮಾರಂಭದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಎಸ್.ಐ.ಮುನೀರ್ ಅಹ್ಮದ್ ತಿಳಿಸಿದ್ದಾರೆ.

ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಲ್ಲುಮುಟ್ಲು ಜಶ್ಮಿ ಚಿಂತು ಆಯ್ಕೆ


ಗೌಡ ಸಮಾಜದ ಸಭಾಂಗಣದಲ್ಲಿ ನಡೆದ ಸ್ಥಾಪನಾ ಸಭೆಯಲ್ಲಿ ಮಹಿಳಾ ಒಕ್ಕೂಟದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಾಪೋಕ್ಲು, ಫೆ.2(ದುಗ್ಗಳ)–ಇಲ್ಲಿಗೆ ಸಮೀಪದ ಮುರ್ನಾಡು ಗೌಡ ಮಹಿಳಾ ಒಕ್ಕೂಟದ ನೂತನ ಅಧ್ಯಕ್ಷರಾಗಿ ಕಲ್ಲುಮುಟ್ಲು ಜಶ್ಮಿ ಚಿಂತು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಸಮಾಜದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಒಕ್ಕೂಟದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಬೈಲೋಳಿ ಮೇನಕಾನಂದ, ಕಾರ್ಯದರ್ಶಿಯಾಗಿ ತೆಕ್ಕಡೆ ಭವ್ಯ ಪುರುಷೋತ್ತಮ್, ಸಹ ಕಾರ್ಯದರ್ಶಿಯಾಗಿ ಮೆರ್ಕಜ್ಜೆ ಸುಷ್ಮಾ ಶಿವಪ್ರಕಾಶ್, ಖಜಾಂಚಿಯಾಗಿ ತೆಕ್ಕಡೆ ಆಶಾ ಪ್ರಸನ್ನ, ಕಲ್ಲುಮುಟ್ಲು ಲತಾ ಬೋಪಯ್ಯ ಅವಿರೋಧವಾಗಿ ಆಯ್ಕೆಯಾದರು.

ಸಭೆಯಲ್ಲಿ ಒಕ್ಕೂಟದ ಸದಸ್ಯರಾದ ಅಂಚೆಮನೆ ದಮಯಂತಿ ಮಾತಾಡಿ, ನಮ್ಮ ಸಂಸ್ಕೃತಿ ಆಚಾರ ವಿಚಾರಗಳನ್ನು ಹಿರಿಯರಿಂದ ನಾವು ಕಲಿತು ಮುಂದಿನ ಪೀಳಿಗೆಗೂ ಕಲಿಸಬೇಕು. ಮಹಿಳೆಯರ ಶಿಕ್ಷಣ, ಆರೋಗ್ಯ, ಆರ್ಥಿಕ ಶಕ್ತೀಕರಣ ಮತ್ತು ಕುಟುಂಬ ಕಲ್ಯಾಣಕ್ಕೆ ಒಕ್ಕೂಟವು ಕೆಲಸ ಮಾಡಬೇಕು ಎಂಬುದು ನಮ್ಮ ಆಶಯ ಎಂದರು. ಈ ನಿಟ್ಟಿನಲ್ಲಿ ಎಲ್ಲ ಸದಸ್ಯರು ಒಗ್ಗಟ್ಟಾಗಿ ಕೆಲಸ ಮಾಡಿದರೆ ನಮ್ಮ ಒಕ್ಕೂಟ ಬಲಿಷ್ಠವಾಗುತ್ತದೆ. ಹಿರಿಯರ ಮಾರ್ಗದರ್ಶನದಿಂದ ಒಕ್ಕೂಟ ಒಳ್ಳೆಯ ಕೆಲಸಗಳನ್ನು ಮಾಡುವಂತಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಒಕ್ಕೂಟದ ಸದಸ್ಯರಾದ ಮುಕ್ಕಾಟಿ ಚುಷ್ಮಾ ದಿಲೀಪ್, ಮೆರ್ಕಜ್ಜೆ ಕೃತಿಕಾ ಪ್ರಮೋದ್, ಬೈಲೋಳಿ ದಿವ್ಯ ತೇಜ್‌ಕುಮಾರ್, ಬಿಳಿಯಾರ ವನಿತಾ, ಮಮತಾ, ಮೌನ, ತೆಕ್ಕಡೆ ಅನುಭೀಮಯ್ಯ ಸಾವಿತ್ರಿ ಒಕ್ಕೂಟದ ಮುಂದಿನ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ಕೈಗೊಳ್ಳಲಾಯಿತು .

ಇಂದು ತಾಲೂಕಿನ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.2–ನಾಪೋಕ್ಲು ಹಾಗೂ ಹೊದ್ದೂರು ಫೀಡರ್‌ನಲ್ಲಿ ಫೆ.3ರ ಬೆಳಗ್ಗೆ 10ರಿಂದ 5 ಗಂಟೆವರೆಗೆ ಜಾಲ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಕಬಡಗೇರಿ, ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೆರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯ ಪರಂಬು, ಹಳೆ ತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಎಂದು ಸೆಸ್ಕಾಂನ ಕಾರ್ಯ ನಿರ್ವಾಹಕ ಇಂಜಿನಿಯರ್ ರಾಮಚಂದ್ರ ತಿಳಿಸಿದ್ದಾರೆ.

ಸತತ ಪರಿಶ್ರಮದಿಂದ ಜೀವನದ ಗುರಿ ತಲುಪಲು ಸಾಧ್ಯ



ಮುಖ್ಯ ಶಿಕ್ಷಕಿ ಶಿಲ್ಪಾ ಪೊನ್ನಮ್ಮ ಶಾಲೆಯ ಮುಖ್ಯದ್ವಾರದಲ್ಲಿ ಚಾರಣವನ್ನು ಉದ್ಘಾಟಿಸಿದರು.

ಮಡಿಕೇರಿ, ಫೆ.2–ದೃಢ ನಿರ್ಧಾರ ಹಾಗೂ ಸತತ ಪರಿಶ್ರಮದಿಂದ ಮಾತ್ರ ಜೀವನದ ಗುರಿಯನ್ನು ಮುಟ್ಟಲು ಸಾಧ್ಯ ಎಂದು ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆ ಅಧ್ಯಕ್ಷೆ ಈರಮಂಡ ಹರಿಣಿ ವಿಜಯ್ ತಿಳಿಸಿದ್ದಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಮೂರ್ನಾಡುವಿನ ಕೋಡಂಬೂರು ಜ್ಞಾನಜ್ಯೋತಿ ವಿದ್ಯಾ ಸಂಸ್ಥೆ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗಾಗಿ ವಿರಾಜಪೇಟೆಯ ಮಲೆತಿರಿಕೆ ಬೆಟ್ಟದಲ್ಲಿ ನಡೆದ ಚಾರಣ ಕಾರ್ಯ ಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಲ್ಲಿ ಶಿಸ್ತು, ಸಂಯಮವನ್ನು ಕಲಿಸುವುದರ ಜೊತೆಗೆ ಸೇವಾ ಮನೋಭಾವವನ್ನು ವೃದ್ಧಿಸುತ್ತದೆ. ಧೈರ್ಯ, ಸಾಹಸ, ನಿಷ್ಠೆ, ಪ್ರಾಮಾಣಿಕತೆ, ದೇಶ ಪ್ರೇಮವನ್ನು ಬೆಳೆಸುತ್ತದೆ. ಪರಿಶ್ರಮದಿಂದ ಗುರಿ ಸಾಧಿಸುವ ಚಾರಣವು ಜೀವನದ ಪಾಠವನ್ನು ಹೇಳುತ್ತದೆ. ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ನ ನಿಯಮಗಳನ್ನು ಪಾಲಿಸುವಂತೆ ತಿಳಿಹೇಳಿದರು.

ಮುಖ್ಯ ಶಿಕ್ಷಕಿ ಶಿಲ್ಪಾ ಪೊನ್ನಮ್ಮ ಮುಖ್ಯದ್ವಾರದಲ್ಲಿ ಚಾರಣವನ್ನು ಉದ್ಘಾಟಿಸಿದರು. ದಂತ ಕಾಲೇಜಿಗೆ ಭೇಟಿ ನೀಡಿದ ವಿದಾರ್ಥಿಗಳಿಗೆ ಹರಿಣಿ ವಿಜಯ್ ಸೂಕ್ತ ಮಾಹಿತಿಯನ್ನು ನೀಡಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ ಹಾಗೂ ಧ್ವಜಗೀತೆಯ ನಂತರ ವಿದ್ಯಾರ್ಥಿಗಳಿಗೆ ದೀಕ್ಷಾ ಸಮಾರಂಭ ನಡೆಯಿತು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚಂದ್ರ ಶೇಖರ್ ಆರ್.ಪಿ, ಸದಸ್ಯ ಸೂರಜ್ ತಿಮ್ಮಯ್ಯ, ಚಾರಣಕ್ಕೆ ಸಹಕಾರ ನೀಡಿದ ಹಿಮಾಲಯನ್ ವುಡ್‌ಬ್ಯಾಡ್ಜ್‌ನ ಗುಲ್ಶನ್ ಮತ್ತಿತರರು ಉಪಸ್ಥಿತರಿದ್ದರು.

ವಚನ ಚಳುವಳಿಯಲ್ಲಿ ಮಡಿವಾಳ ಮಾಚಿದೇವರು ಪ್ರಮುಖರು

ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಅಭಿಪ್ರಾಯ

ಚಾಮರಾಜನಗರ, ಫೆ.2– ಸಮಾಜ ಸುಧಾರಣೆಗೆ ಬಸವಣ್ಣನವರ ನೇತೃತ್ವದಲ್ಲಿ 12ನೇ ಶತಮಾನದಲ್ಲಿ ನಡೆದ ವಚನ ಚಳುವಳಿಯಲ್ಲಿ ಮಡಿವಾಳ ಮಾಚಿದೇವರೂ ಸಹ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಅಭಿಪ್ರಾಯಪಟ್ಟರು.

ನಗರದ ವರನಟ ಡಾ.ರಾಜ್‌ಕುಮಾರ್ ರಂಗ ಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಚನ ಚಳುವಳಿಗೆ ಅನೇಕ ವಚನಕಾರರ ಕೊಡುಗೆ ಇದೆ. ಈ ಪೈಕಿ ಮಡಿವಾಳ ಮಾಚಿದೇವರ ಪಾತ್ರವೂ ಅತ್ಯಂತ ಪ್ರಮುಖವಾಗಿದೆ. ಸಮಾಜದಲ್ಲಿದ್ದ ಜಾತಿ ಪದ್ಧತಿ, ಮೂಢನಂಬಿಕೆ ಹೋಗಲಾಡಿ ಸುವ ನಿಟ್ಟಿನಲ್ಲಿ ವಚನಗಳ ಮೂಲಕ ಅರಿವು ಮೂಡಿಸಿದ ಕಾಲಘಟ್ಟದಲ್ಲಿ ಮಡಿವಾಳ ಮಾಚಿದೇವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಬಸವಣ್ಣನವರ ಕಾಯಕ ತತ್ವವನ್ನು ಅಕ್ಷರಶಃ ಪಾಲಿಸಿದವರು ಮಡಿವಾಳ ಮಾಚಿದೇವರು. ಅನುಭವ ಮಂಟಪದಲ್ಲಿ ಬಸವಣ್ಣನವರು ಪುರುಷ, ಮಹಿಳೆ, ಜಾತಿ, ಕುಲ ನೋಡದೇ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ್ದರು. ಮಡಿವಾಳ ಮಾಚಿದೇವರು ಮಡಿ ಬಟ್ಟೆ ಕಾಯಕ ಮಾಡುತ್ತಿದ್ದರೂ ಸಹ ಭಕ್ತಿ, ನಿಷ್ಠೆ, ವಚನಗಳ ಮೂಲಕ ಶ್ರೇಷ್ಠ ಹಿರಿಮೆ ಸಾರಿದವರು ಎಂದು ಹೇಳಿದರು.

ಯಾವುದೇ ದಾರ್ಶನಿಕರು, ವಚನಕಾರರು, ಮಹಾಪುರುಷರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು. ಸಮಾಜದ ಸರ್ವರ ಒಳಿತಿಗಾಗಿ ಶ್ರಮಿಸಿದ ಎಲ್ಲರ ಆದರ್ಶಗಳನ್ನು ಪಾಲಿಸಬೇಕು. ಮನುಕುಲದ ಉದ್ಧಾರ ಉದ್ದೇಶವಾಗಿಟ್ಟುಕೊಂಡು ದುಡಿದ ಮಹನೀಯರ ಮಾರ್ಗದರ್ಶನ ಇಂದಿಗೂ ಅಗತ್ಯವಾಗಿದೆ. ಸಮಸಮಾಜ ಸದಾಚಾರ ಸಂಪನ್ನ ವಚನಕಾರರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದರು.


ಗಣ್ಯರು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಅಧಿಕಾರಿಗಳ ವಿರುದ್ಧ ಆಕ್ರೋಶ

ಚಾಮರಾಜನಗರ: ನಗರದಲ್ಲಿ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿಗೆ ನಿಗದಿತ ಸಮಯಕ್ಕೆ ಅಧಿಕಾರಿಗಳು ಆಗಮಿಸದ ಹಿನ್ನೆಲೆಯಲ್ಲಿ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಸಮುದಾಯದ ಮುಖಂಡರಿಗೆ ಮಾಹಿತಿ ನೀಡಿ, ಕಾರ್ಯಕ್ರಮಕ್ಕೆ ಕೇವಲ 50 ಜನರು ಮಾತ್ರ ಬನ್ನಿ ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ದಿಢೀರನೇ ಕಾರ್ಯಕ್ರಮದ ಸ್ಥಳ ಬದಲಾವಣೆ ಮಾಡಲಾಗಿದೆ. 11 ಗಂಟೆಗೆ ಆರಂಭವಾಗಬೇಕಿದ್ದ ಕಾರ್ಯಕ್ರಮ 11.45 ಆದರೂ ಆರಂಭವಾಗಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ರಾಜು ಅವರನ್ನು ಮುಖಂಡರು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ರಾಜು ಮಾತನಾಡಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ರಿಪೇರಿ ಕೆಲಸ ನಡೆಯುತ್ತಿದೆ. ಹೀಗಾಗಿ, ಕಾರ್ಯಕ್ರಮದ ಸ್ಥಳ ಬದಲಾವಣೆ ಮಾಡಲಾಗಿದೆ. ಕಾರ್ಯಕ್ರಮ ನಡೆಸಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದ ಬಳಿಕ ಕಾರ್ಯಕ್ರಮ ನಡೆಯಿತು.

ಯಳಂದೂರಲ್ಲೂ ಮಡಿವಾಳ ಮಾಚಿದೇವರ ಜಯಂತಿ


ಯಳಂದೂರಿನ ತಾಪಂ ಕಚೇರಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ ನಡೆಯಿತು.

ಯಳಂದೂರು, ಫೆ2– ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಮಡಿವಾಳ ಮಾಚಿದೇವರ ಜಯಂತಿಯನ್ನು ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇದೇ ವೇಳೆ ತಹಸೀಲ್ದಾರ್ ನಯನ ಹಾಗೂ ಅಧಿಕಾರಿಗಳು ಮತ್ತು ಸಮುದಾಯದ ಮುಖಂಡರು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ಎನ್.ನಾಗರಾಜು ವೈ.ಕೆ.ಮೊಳೆ ಮಾತನಾಡಿ, ಮಡಿವಾಳ ಮಾಚಿದೇವರು ಸಮಾಜಕ್ಕೆ ಸಮಾನತೆ, ಶ್ರಮ ಮತ್ತು ಸೇವೆಯ ಮೌಲ್ಯಗಳನ್ನು ಸಾರಿದ ಮಹಾನ್ ವ್ಯಕ್ತಿ. ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಅನುಸರಿಸುವ ಅಗತ್ಯವಿದೆ. ಶಿಕ್ಷಣದಿಂದ ಮಾತ್ರ ಜನಾಂಗದ ಅಭಿವೃದ್ಧಿ ಸಾಧ್ಯ ಮಡಿವಾಳ ಸಮಾಜದವರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಮುಖ್ಯ ಭಾಷಣಕಾರ, ಉಪನ್ಯಾಸಕ ಮಹದೇವ ಪ್ರಭು ಮಡಿವಾಳ ಮಾಚಿದೇವರ ಕುರಿತು ಮಾತನಾಡಿದರು. ಈ ವೇಳೆ ಪಪಂ ಸದಸ್ಯ ಲಿಂಗರಾಜ ಮೂರ್ತಿ, ಬಿಳಿಗಿರಿ ರಂಗನಬೆಟ್ಟ ದೇವಸ್ಥಾನ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಆರ್‌ಐ ಯದುಗಿರಿ, ಗ್ರಾಮ ಸಹಾಯಕ ಮಹದೇವಸ್ವಾಮಿ, ಕಸಾಪ ಅಧ್ಯಕ್ಷ ನಾಗೇಂದ್ರ ಸೇರಿದಂತ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಮಡಿವಾಳ ಸಮಾಜದ ಮುಖಂಡರು ಹಾಜರಿದ್ದರು.

ನಿವೃತ್ತ ಮುಖ್ಯ ಶಿಕ್ಷಕ ಎ.ಸಿದ್ದಯ್ಯ ಮಾತನಾಡಿ, ಮಡಿವಾಳ ಮಾಚಿದೇವರು ಕಾಯಕಕ್ಕೆ ಹೊಸ ಅರ್ಥ ತಂದುಕೊಟ್ಟ ವರು. ದೇವರು ಎದುರಾದರು ಕಾಯಕ ನಿಲ್ಲಿಸಬಾರದು. ಕಾಯಕ ನಿಷ್ಠೆ ನಿರಂತರವಾಗಿರಬೇಕು ಎಂಬ ಮಹತ್ವ ತಿಳಿಸಿಕೊಟ್ಟರು. ಅವರ ಜೀವನ ವಿಧಾನ, ಶ್ರಮ, ಶ್ರದ್ಧೆ ಇಂದಿಗೂ ಅನುಕರಣೀಯ. ಅವರ ವಿಚಾರಗಳು, ವಚನಗಳ ಸಾರ ಅರ್ಥ ಪೂರ್ಣ ಎಂದರು.

ಎಎಸ್ಪಿ ಎಂ.ಎನ್.ಶಶಿಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಸ್.ರಾಜು, ಮುಖಂಡರಾದ ರೇವಣ್ಣ, ರಮೇಶ್, ವಿಜಯಕುಮಾರ್, ಗೋವಿಂದರಾಜು, ಸಿದ್ದರಾಜು, ನಾಗರಾಜು ಇತರರಿದ್ದರು.

ಕೋಟಂಬಳ್ಳಿ ಶ್ರೀಆಂಜನೇಯಸ್ವಾಮಿ ದೇವಾಲಯ ಪುನರ್ ನಿರ್ಮಾಣಕ್ಕೆ

ಅನುದಾನ ಬಿಡುಗಡೆಗೊಳಿಸಲು ಸರ್ಕಾರ ನಿರ್ಲಕ್ಷ್ಯ: ಆರೋಪ


ಮಂಜುನಾಥ್

ಚಾಮರಾಜನಗರ, ಫೆ.2– ತಾಲೂಕಿನ ಕೋಟಂಬಳ್ಳಿ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀಆಂಜನೇಯ ಸ್ವಾಮಿ ದೇವಾಲಯ ಪುನರ್ ನಿರ್ಮಾಣ ಕಾಮಗಾರಿಗೆ ಅನುದಾನ ಬಿಡುಗಡೆ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ದೇವಾಲಯ ಸೇವಾ ಸಮಿತಿ ಅಧ್ಯಕ್ಷ ಮಂಜುನಾಥ್ ಆರೋಪಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೋಟಂಬಳ್ಳಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯಕ್ಕೆ ನೂರಾರು ವರ್ಷಗಳ ಇತಿಹಾಸವಿದೆ ಪ್ರಸ್ತುತ ದೇವಾಲಯ ಶಿಥಿಲಗೊಂಡು ಕುಸಿದಿದೆ. ಇದರ ಪುನರ್ ನಿರ್ಮಾಣಕ್ಕೆ ಸರ್ಕಾರ ಕಾಳಜಿ ವಹಿಸಬೇಕಿದೆ ಎಂದರು.

ದೇವಾಲಯ ಪುನರ್ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸುವಂತೆ ಸಮಿತಿ ವತಿಯಿಂದ ಸರ್ಕಾರವನ್ನು 2024ರ ಫೆಬ್ರವರಿಯಲ್ಲಿ ಒತ್ತಾಯಿಸಿ, ದೇವಾಲಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲಾಗಿತ್ತು. ಸರ್ಕಾರದ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರಿಗೆ ಪತ್ರ ಬರೆದು, ದೇವಾಲಯದ ಅಭಿವೃದ್ಧಿ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದರು. ಅದರಂತೆ ನಮ್ಮ ದೇವಾಲಯದ ಅಭಿವೃದ್ಧಿಗೆ 75 ಲಕ್ಷ ರೂ. ಅಗತ್ಯವಿದ್ದು, ಅದಕ್ಕೆ ತಕ್ಕಂತೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಲಾಗಿತ್ತು. ದೇವಾಲಯ ಪುನರ್ ನಿರ್ಮಾಣಕ್ಕೆ 75 ಲಕ್ಷ ರೂ. ಸಾಕಾಗುವುದಿಲ್ಲ ಎಂಬುದನ್ನು ಮನಗಂಡು ನಾವು ಮತ್ತೆ ಹೆಚ್ಚಿನ ಅನುದಾನ ಕೋರಿ ಮನವಿ ಸಲ್ಲಿಸಿದ್ದೆವು. ಆದರೆ, ಹೆಚ್ಚಿನ ಅನುದಾನವಿರಲಿ, ಶಿಫಾರಸ್ಸು ಮಾಡಿದ್ದ 75 ಲಕ್ಷ ರೂ. ಸಹ ಇನ್ನು ಮಂಜೂರಾಗಿಲ್ಲ. ಈ ಸಂಬಂಧ ಧಾರ್ಮಿಕ ದತ್ತಿ ಇಲಾಖೆ ಕಚೇರಿಗೆ ಸಾಕಷ್ಟು ಬಾರಿ ಅಲೆದಾಡಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ದೂರಿದರು.

ಈ ನಡುವೆ ಸರ್ಕಾರ, ಆರ್ಥಿಕ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ನಡುವಿನ ಸಮನ್ವಯ ಕೊರತೆ ಪರಿಣಾಮ ನಮ್ಮ ದೇವಾಲಯದ ಅಭಿವೃದ್ಧಿಗೆ ಸಂಬಂಧಿಸಿದ ಕಡತವನ್ನೇ ಮುಕ್ತಾಯಗೊಳಿಸಲಾಗಿದೆ. ಇದು ನಿಜಕ್ಕೂ ದುರದೃಷ್ಟಕರ. ಬೇರೆ ದೇವಾಲಯಗಳ ಅಭಿವೃದ್ಧಿಗೆ ಕೋಟ್ಯಾಂತರ ರೂ. ನೀಡಿರುವ ಸರ್ಕಾರ, ಹಿಂದುಳಿದ ಚಾಮರಾಜನಗರದ ಕೋಟಂಬಳ್ಳಿ ಗ್ರಾಮದ ಆಂಜನೇಯ ದೇವಾಲಯವನ್ನು ಕಡೆಗಣಿಸಿದೆ ಎಂದು ಆಪಾದಿಸಿದರು.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ

ನಾನೇ ಜೆಡಿಎಸ್ ಅಭ್ಯರ್ಥಿ; ಪುಟ್ಟಸ್ವಾಮಿ ವಿಶ್ವಾಸ



ಕೊಳ್ಳೇಗಾಲ, ಫೆ.2–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಾನು ಕೊಳ್ಳೇಗಾಲ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ. ನನಗೇ ಚುನಾವಣಾ ಟಿಕೆಟ್ ನೀಡುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದೇನೆ. ಖಂಡಿತ ನನಗೆ ಟಿಕೆಟ್ ಸಿಗಲಿದೆ ಎಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪುಟ್ಟ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಕೋರ್ ಕಮಿಟಿ ನೂತನ ರಾಜ್ಯಾಧ್ಯಕ್ಷ ಕೃಷ್ಣಾರೆಡ್ಡಿ ಅವರನ್ನು ಅಭಿನಂದಿಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಳ್ಳೇಗಾಲ ಕ್ಷೇತ್ರದಲ್ಲಿ ನನಗೆ ಅವಕಾಶ ಕಲ್ಪಿಸುವಂತೆ, ಒಂದು ವೇಳೆ ಮೈತ್ರಿ ವಿಚಾರದಲ್ಲಿ ಒಪ್ಪಂದವಾದರೆ ನಮಗೆ ಕ್ಷೇತ್ರದಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಡುವಂತೆ ಈಗಾಗಲೇ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದೇನೆ. ಅವರೂ ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಕೊಳ್ಳೇಗಾಲದಿಂದ ಸ್ಪರ್ಧೆಗೆ ನಾನು ಸಜ್ಜಾಗಿದ್ದೇನೆ. ವರಿಷ್ಠರು ನನಗೆ ಅವಕಾಶ ಕಲ್ಪಿಸುವ ವಿಶ್ವಾಸವಿದೆ. ಕ್ಷೇತ್ರದಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಿದ್ದೇನೆ ಎಂದರು.

ವಿಜೃಂಭಣೆಯ ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ

ಗುಂಡ್ಲುಪೇಟೆ, ಫೆ.2 (ಸೋಮ್.ಜಿ)– ತಾಲೂಕಿನ ತೆರಕಣಾಂಬಿ ಗ್ರಾಮದ ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಜಾತ್ರೆ ಹಿನ್ನೆಲೆಯಲ್ಲಿ ಕಳೆದ 3 ದಿನಗಳಿಂದ ಗ್ರಾಮದ ಬೀದಿಗಳಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿ ದೇವಸ್ಥಾನದಲ್ಲಿ ನಡೆಯುವ ಪೂಜಾ ಕೈಂಕರ್ಯಗಳು ಎಲ್ಲರಿಗೂ ತಿಳಿಯುವ ವ್ಯವಸ್ಥೆ ಮಾಡಲಾಗಿತ್ತು. ರಸ್ತೆ ಇಕ್ಕೆಲ ಹಾಗೂ ಆಂಜನೇಯ, ವಾಲಿ ಸುಗ್ರೀವ ದೇವಸ್ಥಾನಗಳಿಗೆ ವಿದ್ಯುತ್ ದೀಪಾಲಂಕಾರ, ತಳಿರು ತೋರಣಗಳನ್ನು ಕಟ್ಟಿ ಸಿಂಗರಿಸಲಾಗಿತ್ತು. ಪ್ರತಿ ಮನೆ ಮಹಿಳೆಯರು ತಮ್ಮ ಮನೆಗಳ ಮುಂದೆ ವರ್ಣರಂಜಿತ ರಂಗೋಲಿ ಬಿಡಿಸಿ ಸಂಭ್ರಮಿಸಿದರು.


ಶ್ರೀ ಲಕ್ಷ್ಮಿ ವರದರಾಜಸ್ವಾಮಿಯವರ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಪ್ರತಿ ವರ್ಷ ಮಾಘಮಾಸದ ಹುಣ್ಣಿಮೆಯಂದು ನಡೆಯುವ ರಥೋತ್ಸವಕ್ಕೆ ತಾಲೂಕು ಹಾಗೂ ನೆರೆಯ ಜಿಲ್ಲೆಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಭಾನುವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಮುಜರಾಯಿ ಅಧಿಕಾರಿಯೂ ಆದ ತಹಶೀಲ್ದಾರ್ ಎಂ.ಎಸ್.ತನ್ಮಯ್ ಅವರು ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಗೋವಿಂದ, ಗೋಪಾಲ ನಾಮಸ್ಮರಣೆಯೊಂದಿಗೆ ಭಕ್ತರು ಜಯಘೋಷ ಕೂಗುತ್ತಾ ತೇರನ್ನು ಎಳೆದರು. ದೇವಸ್ಥಾನದಿಂದ ಹೊರಟ ರಥ ಮುಖ್ಯರಸ್ತೆಯಲ್ಲಿ ಸಾಗಿ ಶ್ರೀಆಂಜನೇಯಸ್ವಾಮಿ ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕಿದ ನಂತರ ಬಂದ ಮಾರ್ಗದಲ್ಲಿಯೇ ದೇವಸ್ಥಾನಕ್ಕೆ ಹಿಂತಿರುಗಿತು. ಪ್ರತಿ ವರ್ಷ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ರಥವನ್ನು ಎಳೆಯುವುದು ಇದರ ವಿಶೇಷ. ರಥೋತ್ಸವದಲ್ಲಿ ಮಂಗಳವಾದ್ಯ, ಬ್ಯಾಂಡ್ ವಾದನ, ಛತ್ರಿ ಚಮರಗಳು, ಗೊರವರ ಕುಣಿತ, ಗಾರುಡಿ ಗೊಂಬೆ, ದೊಣ್ಣೆ ವರಸೆ, ಕೇರಳದ ಚಂಡೆ ಮದ್ದಳೆ ಮುಂತಾದ ಜಾನಪದ ಕಲಾ ತಂಡಗಳ ಜೊತೆ ಯುವಕರು ನರ್ತಿಸುತ್ತಾ ಸಾಗಿದರು. ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದ ವ್ಯಾಪಾರಸ್ಥರು ಭಕ್ತರಿಗೆ ನೀರು, ಪಾನಕ, ಮಜ್ಜಿಗೆ, ರೈಸ್‌ಬಾತ್, ಮೊಸರನ್ನ ವಿತರಿಸಿ ಭಕ್ತರ ದಾಹ ಮತ್ತು ಹಸಿವು ನೀಗಿಸಿದರು. ಬಿಸಿಲಿನ ಬೇಗೆಯಿಂದ ರಸ್ತೆ ಕಾಯುವುದು ಹಾಗೂ ಧೂಳೆಳುವುದನ್ನು ತಪ್ಪಿಸಲು ರಸ್ತೆಯಲ್ಲಿ ನೀರು ಹಾಕಲಾಗಿತ್ತು. ಗ್ರಾಮಸ್ಥರು ರಥಕ್ಕೆ ಪೂಜೆ ಸಲ್ಲಿಸಿ ತಮ್ಮ ಭಕ್ತಿಭಾವ ಮೆರೆದರೆ ನವ ದಂಪತಿಗಳು ಹಣ್ಣು ಜವನ ಎಸೆದು ಕೃತಾರ್ಥರಾದರು. ತೆರಕಣಾಂಬಿ ಠಾಣೆ ಎಸ್‌ಐ ಕೆ.ಎಂ.ಮಹೇಶ್ ನೇತೃತ್ವದಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.



ವಿಜೃಂಭಣೆಯ ಮಾರಮ್ಮನ ಹಬ್ಬ

ಬೇಗೂರು ಸಮೀಪದ ಬೆಟ್ಟದ ಮಾದಹಳ್ಳಿಯಲ್ಲಿ ಗ್ರಾಮದೇವತೆ ಮಾರಮ್ಮನ ಹಬ್ಬ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೈಸೂರು ಮಿತ್ರ

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿನ ಹೆಗ್ಗಣಗಳ ಎದುರಿಸಲಾಗದೆ ಸಿಎಂ ಇಲಿಯಾಗಿ ಬಿಲ ಸೇರಿದ್ದಾರೆ

ರಾಜ್ಯದಲ್ಲಿ ಭ್ರಷ್ಟಾಚಾರ, ಲಂಚಗುಳಿತನ ಮಿತಿ ಮೀರಿದೆ: ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ

ಬೆಂಗಳೂರು, ಫೆ.2(ಕೆಎಂಶಿ)– ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ ಎಲ್ಲ ಇಲಾಖೆಗಳಲ್ಲಿ ಲಂಚಗುಳಿತನ ತಾಂಡವವಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ವಿಧಾನಸಭೆಯಲ್ಲಿ ಇಂದು ವಾಗ್ದಾಳಿ ನಡೆಸಿದರು.

ಲಂಚ ಕೊಡದೆ ಕೆಲಸ ಆಗಲ್ಲ

ಕಂದಾಯ ಇಲಾಖೆಯಲ್ಲಿ ಸಣ್ಣಪುಟ್ಟ ಕೆಲಸಗಳಿಗೂ ದೊಡ್ಡ ಮಟ್ಟದ ಲಂಚ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಂದಾಯ ಮಂತ್ರಿ ವೀಡಿಯೊ ಕಾನ್ಫರೆನ್ಸಿಂಗ್‌ಗೆ ಸೀಮಿತವಾಗಿದ್ದಾರೆ. ಯಾವುದೇ ಇಲಾಖೆಯಲ್ಲಿ ಲಂಚ ಕೊಡದೆ ಕೆಲಸ ಆಗುತ್ತಿಲ್ಲ. ಜನಸಾಮಾನ್ಯರ ಸಂಕಷ್ಟ ಕೇಳುವವರೇ ಇಲ್ಲದಂತಾಗಿದೆ.

ಸಂಪನ್ಮೂಲ ಕ್ರೋಢೀಕರಣದಲ್ಲಿ ವಿಫಲ, ಅಭಿವೃದ್ಧಿ ಯೋಜನೆಗಳು ಮರೀಚಿಕೆಯಾಗಿವೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲಾಗದೆ ಪರದಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿಶೇಷ ಯೋಜನೆಗಳಿಗೆ ಮೀಸಲಾಗಿಟ್ಟ ಹಣ ಗ್ಯಾರಂಟಿಗಳಿಗೆ ವೆಚ್ಚ ಮಾಡುವ ಮೂಲಕ ಸಮುದಾಯದ ಹಿತಾಸಕ್ತಿ ಕಾಪಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ.

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರ ಮತ್ತು ಕಮಿಷನ್ ಆರೋಪದ ವಿರುದ್ಧ ಸಮರ ಎಂಬುದಾಗಿ ಹೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಕಮಿಷನ್ ಮತ್ತು ಭ್ರಷ್ಟಾಚಾರದ ದಾಸನಾಗಿದೆ. ಇಲಾಖೆಗಳಲ್ಲಿ ಹೆಗ್ಗಣಗಳೇ ತುಂಬಿಹೋಗಿವೆ ಇವುಗಳನ್ನು ಎದುರಿಸಬೇಕಾದ ಮುಖ್ಯಮಂತ್ರಿ ಇಲಿಯಾಗಿ ಬಿಲ ಸೇರಿದ್ದಾರೆ ಎಂದು ವ್ಯಂಗ್ಯವಾಡಿದರು.

ನಗರಾಭಿವೃದ್ಧಿ, ಅಬಕಾರಿ, ಕಂದಾಯ, ವಿದ್ಯುತ್, ನೀರಾವರಿ ಸೇರಿದಂತೆ ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸಣ್ಣಪುಟ್ಟ ಕೆಲಸಗಳಿಗೂ ಜನಸಾಮಾನ್ಯರು ಲಂಚ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯಪಾಲರಿಗೆ ದೂರು ನೀಡಿದ್ದಾರೆ: ಗುತ್ತಿಗೆದಾರರ ಸಂಘದ ಪ್ರತಿನಿಧಿಗಳು ಸರ್ಕಾರದಲ್ಲಿನ ಕಮಿಷನ್ ದಂಧೆ ಬಗ್ಗೆ ಬಹಿರಂಗವಾಗಿಯೇ ಆರೋಪ ಮಾಡಿದ್ದಾರೆ. ಅಬಕಾರಿ ಗುತ್ತಿಗೆದಾರರು ಮಂತ್ರಿ ಮತ್ತು ಇಲಾಖೆ ಮುಖ್ಯಸ್ಥರಿಗೆ ನೀಡಬೇಕಾದ ಹಣದ ವಿವರ ನೀಡಿ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.


ಪರಿಸ್ಥಿತಿ ಇಷ್ಟೊಂದು ಗಂಭೀರವಾಗಿದ್ದರೂ ಕ್ರಮ ಕೈಗೊಳ್ಳಲಾಗದೆ ಮುಖ್ಯಮಂತ್ರಿ ಅಸಹಾಯಕರಾಗಿದ್ದಾರೆ.

ಅಧಿಕಾರ ಹಸ್ತಾಂತರ ವಿಷಯಕ್ಕೆ ಕಾಂಗ್ರೆಸ್‌ನಲ್ಲಿ ಜಗಳ ಮಿತಿಮೀರಿದೆ. ಯಾರ ಮೇಲೂ ನಿಯಂತ್ರಣವಿಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊನಚು ಕಳೆದುಕೊಂಡು ಕುರ್ಚಿಗೆ ಅಂಟಿಕೊಂಡು ಕುಳಿತಿದ್ದಾರೆ. ಅಧಿಕಾರಿಗಳಿಗೆ ಯಾರ ಭಯವೂ ಇಲ್ಲದಂತಾಗಿದೆ. ಭ್ರಷ್ಟಾಚಾರದ ಗ್ರಾಫ್ ದಿನದಿಂದ ದಿನಕ್ಕೆ ಮೇಲ್ಮಟ್ಟಕ್ಕೆ ಸಾಗುತ್ತಿದೆ.

ಬರೀ ಕೇಂದ್ರದ ವಿರುದ್ಧ ಆರೋಪ: ಮುಖ್ಯಮಂತ್ರಿ ಸಿದ್ದರಾಮಯ್ಯ ಅನಗತ್ಯವಾಗಿ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುವ ಮೂಲಕ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ನಡೆಸಿದ್ದಾರೆ. ಅವಶ್ಯಕತೆ ಇಲ್ಲದಿದ್ದರೂ ಸಮರ ಘೋಷಣೆ ಮೂಲಕ ಅಭಿವೃದ್ಧಿ ಯೋಜನೆಗಳು ಕುಂಠಿತವಾಗುವಂತೆ ಮಾಡಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ, ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಕೇಂದ್ರದೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸಿದ್ದರಿಂದಾಗಿ ಬೆಂಗಳೂರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮೆಟ್ರೊ ರೈಲು ಸೇರಿದಂತೆ ಹಲವು ಯೋಜನೆಗಳು ಅನುಷ್ಠಾನಕ್ಕೆ ಬಂದವು.

ಕರ್ನಾಟಕ ಅಭಿವೃದ್ಧಿಯತ್ತ ನಾಗಾಲೋಟದಿಂದ ಸಾಗಿತ್ತು. ಕಾಲು ಕೆರೆದು ಜಗಳ ಆಡುವುದರಿಂದ ಏನೂ ಪ್ರಯೋಜನವಿಲ್ಲ.



ಕಾಂಗ್ರೆಸ್‌ನವರಿಗೆ ರಾಮನ ಕಂಡರೆ ಸಹಿಸಿಕೊಳ್ಳಲು ಆಗುವುದಿಲ್ಲ. ಅದಕ್ಕಾಗಿ ವಿಕಸಿತ ಭಾರತ್–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ – ಗ್ರಾಮೀಣ (ವಿಬಿ–ಜಿ–ರಾಮ್–ಜಿ) ಯೋಜನೆಗೆ ವಿರೋಧ ಮಾಡುತ್ತಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ 12 ಪುಟಗಳಷ್ಟು ಯೋಜನೆ ಟೀಕೆಗೆ ಬಳಕೆ ಮಾಡಿದ್ದಾರೆ.

ಏಳು ಲಕ್ಷ ಕೋಟಿ ಸಾಲ: ಕರ್ನಾಟಕದ ಇತಿಹಾಸದಲ್ಲೇ ಅತೀ ಹೆಚ್ಚು ಸಾಲ ಮಾಡಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಧನೆಯಾಗಿದೆ. ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂದರೆ ಕೋಪ ಬರುತ್ತದೆ. ಆದರೆ, ಸಿದ್ದರಾಮಯ್ಯ ಇದುವರೆಗೂ ಏಳು ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ.

ಮಾಡಿದ ಸಾಲ ತೀರಿಸಲು ಆಗುತ್ತಿಲ್ಲವೆಂದರೆ ಆರ್ಥಿಕ ಶಿಸ್ತು ಎಲ್ಲಿಂದ ಬರುತ್ತದೆ. ಆರ್ಥಿಕಸ್ಥಿತಿ ಸರಿಯಾಗಿದ್ದರೆ ಗೃಹಲಕ್ಷ್ಮೀ ಯೋಜನೆಯ 2025ರ ಫೆಬ್ರವರಿ ಕಂತಿನ 5 ಸಾವಿರ ಕೋಟಿ ರೂ. ಎಲ್ಲಿ ಹೋಯಿತು.

ಅನ್ನಭಾಗ್ಯಕ್ಕೂ ಕನ್ನ ಹಾಕಿದ್ದಾರೆ. ಕಳೆದ ವರ್ಷದ ಜನವರಿಯ ಅನ್ನಭಾಗ್ಯದ 657 ಕೋಟಿ ರೂ. ಬಿಡುಗಡೆಯಾಗಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಜೋಡೆತ್ತು ಎಂದೆಲ್ಲಾ ಹೇಳುತ್ತಿದ್ದರು. ಈಗ ಕುಂಟೆತ್ತುಗಳಾಗಿದ್ದಾರೆ. ಇವರಿಬ್ಬರು ಒಂದೊಂದು ದಾರಿ ಯಲ್ಲಿ ಓಡಿ ಹೋಗಿದ್ದಾರೆ.

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಸರ್ಕಾರ ಲೂಟಿ ಮಾಡದ ಇಲಾಖೆ ಇಲ್ಲ. ಜನ ಕೆಲಸ ಆಗಿಲ್ಲವೆಂದು, ಗುತ್ತಿಗೆದಾರರು ಹಣ ಬಿಡುಗಡೆಯಾಗಿಲ್ಲವೆಂದು, ಅಂಗನವಾಡಿ ಕಾರ್ಯಕರ್ತೆಯರು ವೇತನ ಬಿಡುಗಡೆಯಾಗಿಲ್ಲವೆಂದು ಪರದಾಡುತ್ತಿದ್ದರೆ, ಮಂತ್ರಿಗಳು ಹಣ ಮಾಡುವುದರಲ್ಲಿ ಮುಳುಗಿದ್ದಾರೆ, ಸರ್ಕಾರ ದಿವಾಳಿಯಾಗಿದೆ. ಖಜಾನೆ ಖಾಲಿ–ಖಾಲಿ.

ಸದನಕ್ಕೆ ಬಂದು ಭಾಷಣ ಮಾಡಿದ ರಾಜ್ಯಪಾಲರಿಗೆ ನಾವು ವಂದನೆ ಸಲ್ಲಿಸುತ್ತೇವೆ. ಆದರೆ, ಅವರ ಬಾಯಲ್ಲಿ ಹೇಳಿಸಿದ ಭಾಷಣಕ್ಕೆ ಬೆಂಬಲ ನೀಡುವುದಿಲ್ಲ ಎಂದರು.

ಕೇಂದ್ರದ್ದು ಅತ್ಯಂತ ದುರ್ಬಲ ಬಜೆಟ್

ರಾಜ್ಯ ಗೃಹ ಸಚಿವ ಡಾ. ಪರಮೇಶ್ವರ್ ಟೀಕೆ

ಬೆಂಗಳೂರು, ಫೆ.2(ಕೆಎಂಶಿ)– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಮಂಡಿಸಿದ ಮುಂಗಡಪತ್ರ ಅತ್ಯಂತ ದುರ್ಬಲ ಬಜೆಟ್ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದಿನ ಬಜೆಟ್‌ಗಳಲ್ಲಿ ಕೃಷಿ, ಕೈಗಾರಿಕಾ ವಲಯಗಳಿಗೆ ಪ್ರಾತಿನಿಧ್ಯ ಕೊಡುತ್ತಿದ್ದರು. ಬಡತನ ನಿರ್ಮೂಲನೆಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮ ನೀಡುತ್ತಿದ್ದರು. ಈಗ ಇಡೀ ದೇಶಕ್ಕೆ ನಿರಾಸೆ ಮಾಡಿದ್ದಾರೆ ಎಂದರು.

ಕೇಂದ್ರ ಬಜೆಟ್ ಮೊತ್ತ 53.50 ಲಕ್ಷ ಕೋಟಿ ರೂ.ಗಳಲ್ಲಿ 16 ಲಕ್ಷ ಕೋಟಿ ರೂ. ಸಾಲ ಎಂಬುದಾಗಿ ತೋರಿಸಲಾಗಿದೆ. ಇಷ್ಟೊಂದು ಸಾಲ ಮಾಡುವವರು ನಮಗೇ ನೀತಿಪಾಠ ಹೇಳುತ್ತಾರೆ. ಮುಂಗಡಪತ್ರದಲ್ಲಿ ಕರ್ನಾಟಕಕ್ಕೆ ಒಂದು ಯೋಜನೆಯನ್ನೂ ನೀಡಿಲ್ಲ. ನೀರಾವರಿ, ಕೃಷಿ, ಮೂಲ ಭೂತಸೌಕರ್ಯ ಅಭಿವೃದ್ಧಿಗೆ ಒತ್ತು ಕೊಟ್ಟಿಲ್ಲ ಇದನ್ನು ಬಜೆಟ್ ಅಂತ ಕರೆಯಬೇಕೇ.

ದೇಶದ ಶಿಕ್ಷಣ ಕ್ಷೇತ್ರವನ್ನೇ ಹಿಂದೆ ತಳ್ಳಿದ್ದಾರೆ. ರಾಜ್ಯಕ್ಕೆ ಐಐಟಿ, ಏಮ್ಸ್ ಸಂಸ್ಥೆ ನೀಡುವ ನಿರೀಕ್ಷೆ ಇತ್ತು, ಬಜೆಟ್‌ನಲ್ಲಿ ಪ್ಲಾಸ್ಟಿಕ್, ಬೆಂಕಿ ಪೊಟ್ಟಣ ಬೆಲೆ ಕಡಿಮೆ ಮಾಡಿದ್ದಾರೆ ಎಂದರು.

ಕರ್ನಾಟಕದ ದ್ವೇಷ ಭಾಷಣ ಮಸೂದೆಯಲ್ಲಿನ 28 ಅಂಶಗಳನ್ನು ರಾಜ್ಯಪಾಲರು ಪ್ರಶ್ನಿಸಿ, ರಾಷ್ಟ್ರಪತಿ ಅವರಿಗೆ ಕಳುಹಿಸಿದ್ದಾರೆ. ಅವರು ಪರಿಶೀಲಿಸಿ ವಾಪಸ್ ಕಳುಹಿಸಿದರೆ, ಮಾರ್ಪಾಡು ಮಾಡಲಾಗುವುದು.

ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಯೆಂದು ಮನಬಂದಂತೆ ಮಾತನಾಡು ವುದು, ಸಮುದಾಯಗಳನ್ನು ದೂಷಿಸುವು ದರಿಂದ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಕೆಲವರು ಮಾಡಿದ ಭಾಷಣದಿಂದ ಏನಾಯಿತು ಎಂಬುದನ್ನೂ ನೋಡಿದ್ದೇವೆ ಇಂತಹ ಘಟನೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಮಸೂದೆ ತರಲಾಗಿದೆ.

ರಾಜ್ಯಪಾಲರು ಉದ್ದೇಶಪೂರ್ವಕವಾಗಿ ದ್ವೇಷ ಭಾಷಣ ಮಸೂದೆ ನೆನೆಗುದಿಗೆ ಬೀಳಬೇಕು. ಜಾರಿಯಾಗಬಾರದು ಎಂಬ ಉದ್ದೇಶದಿಂದ ರಾಷ್ಟ್ರಪತಿ ಅವರಿಗೆ ಕಳುಹಿಸಿದ್ದಾರೆ ಎಂದರು.

ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣದಲ್ಲಿ ಊಹಾಪೋಹಗಳು ಆಗಬಾರದೆಂಬ ಕಾರಣಕ್ಕೆ ಎಸ್‌ಐಟಿ ರಚಿಸಲಾಗಿದೆ. ವರದಿ ಬಂದ ನಂತರ ಸತ್ಯ ತಿಳಿಯಲಿದೆ ಎಂದರು.

ಅನಧಿಕೃತ ತಂಬಾಕು ಬೆಳೆಗೆ ದಂಡ ಸುಂಕ ವಿಧಿಸದ್ದಕ್ಕೆ

ಸಂಸದ ಯದುವೀರ್ ಕೇಂದ್ರಕ್ಕೆ ಧನ್ಯವಾದ

ಮೈಸೂರು, ಫೆ.2– ತಂಬಾಕು ಬೆಳೆಗಾರರ ಅನಧಿಕೃತ ಅಥವಾ ಹೆಚ್ಚುವರಿ ಉತ್ಪನ್ನಕ್ಕೆ ಅಬಕಾರಿ ದಂಡ ಸುಂಕ ವಿಧಿಸದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಧನ್ಯವಾದ ತಿಳಿಸಿದ್ದಾರೆ.



ತಂಬಾಕು ಬೆಳೆಯುವ ರೈತರು ಹಾಗೂ ಸಂಬಂಧಿತ ವಲಯದ ಹಿತದೃಷ್ಟಿಯಿಂದ, ಅನಧಿಕೃತ ತಂಬಾಕು ಮೇಲಿನ ಅತಿಯಾದ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ಹೆಚ್ಚಳವನ್ನು ಮರುಪರಿಶೀಲಿಸುವಂತೆ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಅನಧಿಕೃತ ತಂಬಾಕು ಮೇಲಿನ ಅಬಕಾರಿ ಸುಂಕವನ್ನು ಶೂನ್ಯಗೊಳಿಸಿ, ಅಧಿಸೂಚನೆ ಹೊರಡಿಸಿರುವುದು ಸಂತಸದ ಸಂಗತಿ.

ಈ ಮಹತ್ವದ ನಿರ್ಧಾರವು ತಂಬಾಕು ಬೆಳೆಗಾರರ ಆರ್ಥಿಕ ನಷ್ಟ ತಡೆಯುವುದರೊಂದಿಗೆ ಅವರ ಜೀವನೋಪಾಯ ರಕ್ಷಣೆಗೆ ಸಹಕಾರಿಯಾಗಲಿದೆ. ರೈತಪರ ಮನವಿಗೆ ತ್ವರಿತವಾಗಿ ಸ್ಪಂದಿಸಿ, ಸೂಕ್ತ ಕ್ರಮ ಕೈಗೊಂಡಿರುವ ಕೇಂದ್ರ ಹಣಕಾಸು ಸಚಿವರು ಹಾಗೂ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆಗಳು ಎಂದು ಯದುವೀರ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಬೆಂಗಳೂರು ಬನ್ನೇರುಘಟ್ಟದಲ್ಲಿ ಸಿನಿಮಾ ಶೈಲಿಯಲ್ಲಿ ದರೋಡೆ

ಯುವಕನಿಗೆ ಲಾಂಗ್ ತೋರಿಸಿ ಬೆದರಿಕೆ; 31 ಲಕ್ಷ ರೂ. ಲೂಟಿ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಖದೀಮರ ಅಟ್ಟಹಾಸ ಮಿತಿಮೀರಿದ್ದು, ಬನ್ನೇರುಘಟ್ಟ ಸಮೀಪ ಹಾಡಹಗಲೇ ಸಿನಿಮೀಯ ರೀತಿಯಲ್ಲಿ ದರೋಡೆ ಪ್ರಕರಣವೊಂದು ಬೆಳಕಿಗೆ ಬಂದಿದೆ.

ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿದ ದುಷ್ಕರ್ಮಿಗಳ ಗ್ಯಾಂಗ್, ಬರೋಬ್ಬರಿ 31 ಲಕ್ಷದ 38 ಸಾವಿರ ರೂಪಾಯಿ ನಗದನ್ನು ದೋಚಿ ಪರಾರಿಯಾಗಿರುವ ಘಟನೆ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ.

ಕೈಲಾಸ್ ಎಂಬ ಯುವಕ ರಾಕೇಶ್ ಎಂಬುವವರ ಬಳಿ ಕ್ಯಾಷ್ ಕಲೆಕ್ಟಿಂಗ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಈತನ ಕೆಲಸ ಉಡಾನ್ ಕಂಪನಿಯ ವಿವಿಧ ಬ್ರಾಂಚ್‌ಗಳಿಗೆ ಭೇಟಿ ನೀಡಿ ಹಣವನ್ನು ಸಂಗ್ರಹಿಸುವುದಾಗಿತ್ತು. ಎಂದಿನಂತೆ ನಿನ್ನೆ (ಭಾನುವಾರ) ಸಂಜೆ ಕೂಡ ಕೈಲಾಸ್ ವಿವಿಧ ಬ್ರಾಂಚ್‌ಗಳಿಂದ ಒಟ್ಟು 31,38,625 ರೂಪಾಯಿ ಹಣ ಕಲೆಕ್ಟ್ ಮಾಡಿದ್ದ.

ಸಂಗ್ರಹಿಸಿದ ಇಷ್ಟೂ ಬೃಹತ್ ಮೊತ್ತದ ಹಣವನ್ನು ಕೈಲಾಸ್ ತನ್ನ ಜುಪಿಟರ್ ಸ್ಕೂಟರ್‌ನ ಡಿಕ್ಕಿಯಲ್ಲಿಟ್ಟುಕೊಂಡು ಬನ್ನೇರುಘಟ್ಟ ಸಮೀಪದ ಸಕಲವಾರ ರಸ್ತೆಯಲ್ಲಿ ಸಂಚರಿಸುತ್ತಿದ್ದ. ನಿನ್ನೆ ಸಂಜೆ ಸುಮಾರು 4:20ರ ಸುಮಾರಿಗೆ ಈತ ಸಕಲವಾರ ರಸ್ತೆಯಿಂದ ಬನ್ನೇರುಘಟ್ಟದ ಕಡೆಗೆ ಬರುತ್ತಿದ್ದಾಗ ದರೋಡೆ ನಡೆದಿದೆ.

ಎರಡು ಬೈಕ್‌ಗಳಲ್ಲಿ ಬೆನ್ನಟ್ಟಿಕೊಂಡು ಬಂದ ನಾಲ್ವರು ಅಪರಿಚಿತ ವ್ಯಕ್ತಿಗಳು ಏಕಾಏಕಿ ಕೈಲಾಸ್‌ನನ್ನು ಅಡ್ಡಗಟ್ಟಿದ್ದಾರೆ. ಕೈಯಲ್ಲಿದ್ದ ಲಾಂಗ್ ತೋರಿಸಿ ಯುವಕನ ಮೇಲೆ ಹಲ್ಲೆಗೆ ಮುಂದಾದ ದರೋಡೆಕೋರರು ಆತನ ಬೆದರಿಸಿ ಬೈಕ್ ಸಮೇತ ಅಲ್ಲಿಂದ ಪರಾರಿಯಾಗಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಬನ್ನೇರುಘಟ್ಟ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ದರೋಡೆ ಪ್ರಕರಣ ದಾಖಲಾಗಿದೆ. ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಶರಣ ಪರಂಪರೆಯನ್ನು ಯುವ ಪೀಳಿಗೆ ಅನುಸರಿಸಿದರೆ ನಮ್ಮ ದೇಶ ಎಲ್ಲಾ ರಂಗದಲ್ಲೂ ಉತ್ತುಂಗದಲ್ಲಿರುತ್ತದೆ

ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಕೆ.ಸಿ.ಬಸವರಾಜ್ ಅಭಿಮತ



ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಕೆ.ಸಿ.ಬಸವರಾಜು ಪುಷ್ಪಾರ್ಚನೆ ಸಲ್ಲಿಸಿದರು.

ಮೈಸೂರು, ಫೆ.2(ಎಸ್‌ಪಿಎನ್)– ಹನ್ನೆರಡನೇ ಶತಮಾನದ ಶರಣ ಪರಂಪರೆಯನ್ನು ಇಂದಿನ ಪೀಳಿಗೆ ಅನುಸರಿಸಿದರೆ ನಮ್ಮ ದೇಶ ಮತ್ತು ರಾಜ್ಯ ಎಲ್ಲಾ ರಂಗದಲೂ ಉತ್ತುಂಗದಲ್ಲಿರುತ್ತದೆ ಎಂದು ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಕೆ.ಸಿ.ಬಸವರಾಜು ಅಭಿಪ್ರಾಯಪಟ್ಟರು.

ಮೈಸೂರು ನೇತಾಜಿ ನಗರದ ಶ್ರೀ ಗಣಪತಿ ದೇವಸ್ಥಾನದ ಆವರಣದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಮತ್ತು ಬಸವ ಬಳಗ ಪೂರ್ವ ವಲಯ ಟ್ರಸ್ಟ್ ಸಹಯೋಗದೊಂದಿಗೆ ನಡೆದ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಶರಣರ ವೈಚಾರಿಕ ಪರಂಪರೆ' ಕುರಿತು ಮಾತನಾಡಿದರು.

ಹನ್ನೆರಡನೇ ಶತಮಾನದ ಶರಣರ ವಚನಗಳು ಎಲ್ಲಾ ಕಾಲಕ್ಕೂ ಸಲ್ಲುತ್ತವೆ. ಇಂತಹ ಅಮೂಲ್ಯ ಜೀವನ ಪದ್ಧತಿಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಈ ವೇಳೆ ಮೈಸೂರಿನ ನಿವೃತ್ತ ಡಿವೈಎಸ್ಪಿ ಎಚ್.ಎಲ್ ಶಿವಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಎಸ್.ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಉಪಾಧ್ಯಕ್ಷರಾದ ಮಹದೇವಸ್ವಾಮಿ, ಶ್ರೀಕಂಠ ಮೂರ್ತಿ, ಸಂಚಾಲಕ ಪ್ರೊ ಮಾದೇವಸ್ವಾಮಿ, ಸಹ ಕಾರ್ಯದರ್ಶಿ ಮಹದೇವ ಪ್ರಸಾದ್, ನಿರ್ದೇಶಕರಾದ ದೇವಪ್ಪಾಜಿ, ಆನಂದ್ ಮೂರ್ತಿ, ಸಿದ್ದಪ್ಪ ಸ್ವಾಮಿ ಶ್ರೀಶೈಲ ಕುಂಬಾರ, ಗಜೇಂದ್ರ, ಕೆಎಸ್‌ಆರ್‌ಟಿಸಿ ನಂದೀಶ್, ವಿಶ್ವ, ಬಸವರಾಜು, ಪುಟ್ಟಬುದ್ಧಿ, ಕುಮಾರಣ್ಣ, ಮಹೇಶ್, ಮಹದೇವಪ್ಪ, ಪೂಜೆ ಮಾದಪ್ಪ ಮತ್ತು ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ.ದೊರೆಸ್ವಾಮಿ, ಸಾಹಿತಿ ಪುಟ್ಟಪ್ಪ, ಪ್ರಕಾಶ್, ಬಸಪ್ಪ ನಿರಂಜನ್, ಗುರುಪ್ರಸಾದ್ ಉಪಸ್ಥಿತರಿದ್ದರು.

ಕನಕಪುರದಲ್ಲಿ ಅಡುಗೆ ಅನಿಲ ಸೋರಿಕೆ; ಬೆಂಕಿ ದುರಂತದಲ್ಲಿ ಗಾಯಗೊಂಡಿದ್ದ ಮೂವರ ಸಾವು

ಕನಕಪುರ: ಅಡುಗೆ ಸಿಲಿಂಡರ್ ಪೈಪ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು ಸಂಭವಿಸಿದ ದುರಂತದಲ್ಲಿ ಗಾಯಗೊಂಡಿದ್ದ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದಾರೆ.



ಕನಕಪುರದ ಅಮರನಾರಾಯಣ ಬ್ಲಾಕ್ ನ ಪ್ರಶಾಂತ್ (22), ಅವರ ತಾಯಿ ಸವಿತಾ (45) ಮತ್ತು ತಂದೆ ಸಿದ್ದರಾಜು (50) ಸಾವನ್ನಪ್ಪಿದ್ದಾರೆ.

ಗ್ಯಾರೇಜ್ ಮುಂಭಾಗದಲ್ಲಿ ತಳ್ಳುಗಾಡಿ ಇಟ್ಟುಕೊಂಡು ಬಜ್ಜಿ–ಬೋಂಡ ಮತ್ತು ಖಾರ ಮಿಕ್ಸರ್ ಮಾರುವ ಹೋಟೆಲ್ ನಡೆಸುತ್ತಿದ್ದ ಪ್ರಶಾಂತ್, ಸೋಮವಾರ ಮನೆಯಲ್ಲೇ ಖಾರ ಮಿಕ್ಸರ್ ತಯಾರಿಸುತ್ತಿದ್ದಾಗ ಸಿಲಿಂಡರ್ ಪೈಪ್‌ನಿಂದ ಗ್ಯಾಸ್ ಸೋರಿಕೆಯಾಗಿತ್ತು.

ಬೆಂಕಿ ಹೆಚ್ಚಾಗುತ್ತಿರುವುದನ್ನು ಕಂಡ ಪ್ರಶಾಂತ್, ಸಿಲಿಂಡರ್ ಹೊತ್ತಿಕೊಂಡು ಮನೆಗೆ ಬೆಂಕಿ ಹತ್ತಬಹುದೆಂದು ಭಯಪಟ್ಟು ಅದನ್ನು ನಂದಿಸಲು ನೀರಿನ ತೊಟ್ಟಿಯಲ್ಲಿ ಹಾಕಲು ಪ್ರಯತ್ನಿಸಿದರು. ಆ ಸಮಯದಲ್ಲಿ ಅವರಿಗೆ ತೀವ್ರವಾಗಿ ಬೆಂಕಿ ತಗಲಿ ಗಂಭೀರ ಸುಟ್ಟಗಾಯಗಳಾಗಿದ್ದವು.

ಬೆಂಕಿ ತಗುಲಿ ಸುಟ್ಟ ಗಾಯಗಳಾದಾಗ ಭಯಗೊಂಡ ಪ್ರಶಾಂತ್ ಮತ್ತು ಅವರ ತಂದೆ, ತಾಯಿ ಗ್ಯಾಸ್ ಸ್ಟವ್ ಸಿಲಿಂಡರ್ ಅಲ್ಲೇ ಬಿಟ್ಟು ಮನೆಯ ಒಳಗೆ ಓಡಿದ್ದಾರೆ. ಮನೆಯ ಅಕ್ಕಪಕ್ಕದವರು ಬೆಂಕಿ ಹತ್ತಿಕೊಂಡಿರುವುದನ್ನು ನೋಡಿ ಕೂಡಲೇ ಅಗ್ನಿಶಾಮಕ ದಳದವರಿಗೆ ಮಾಹಿತಿಯನ್ನು ತಿಳಿಸಿದ್ದಾರೆ, ಅಗ್ನಿಶಾಮಕ ದಳದವರು ಬಂದು ಬೆಂಕಿಯನ್ನು ನಂದಿಸಿದ್ದರು.

ಘಟನೆಯ ಮಾಹಿತಿ ತಿಳಿದ ಗ್ಯಾಸ್ ಏಜೆನ್ಸಿ ಅವರು ಕಠಿಣ ಸ್ಥಳಕ್ಕೆ ಭೇಟಿ ನೀಡಿ ಯಾವ ಕಾರಣದಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದನ್ನು ಪರಿಶೀಲಿಸಿ ಮನೆಯ ಒಳಗಡೆ ಇದ್ದಂತಹ ಗ್ಯಾಸ್ ತುಂಬಿದ್ದ ಮತ್ತೊಂದು ಸಿಲಿಂಡರನ್ನು ಹೊರಗಡೆ ತೆಗೆದಿದ್ದರು.

ಮಡಿವಾಳ ಮಾಚಿದೇವರ ಜಯಂತಿ



ಮೈಸೂರಿನ ಕೆಎಸ್‌ಆರ್‌ಟಿಸಿ ವಿಜಯನಗರ ಬಸ್ ಡಿಪೋದಲ್ಲಿ ವೀರ ಮಡಿವಾಳ ಮಾಚಿದೇವರ ಜಯಂತ್ಯುತ್ಸವ ಆಚರಿಸಲಾಯಿತು. ಘಟಕ ವ್ಯವಸ್ಥಾಪಕ ಮಹದೇವ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಶಿವಪ್ರಸಾದ್, ಸಂಚಾರಿ ನಿರೀಕ್ಷಕ ಹೆಚ್.ಎಸ್.ಮಹೇಶ್, ಸಹಾಯಕ ನಿರೀಕ್ಷಕ ರವಿಕುಮಾರ್, ಸಂಚಾರಿ ನಿಯಂತ್ರಕ ಸ್ವಾಮಿ. ಮುಖಂಡರಾದ ಎಸ್.ಡಿ.ರಾಜು, ರಾಜೇಶ್ ಹೆಚ್.ಮಡಹಳ್ಳಿ, ವಿಶ್ವನಾಥ್, ಆರ್.ಆರ್.ಪ್ರಕಾಶ್, ಕಲಾವಿದ ಯೋಗೇಶ್, ಡಿ.ಎನ್.ಕುಮಾರ್, ಶ್ರೀನಿವಾಸ್, ಎ.ಬಿ.ಲೋಕೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಆಯಿಷ್‌ನಲ್ಲಿ ಚಿಕಿತ್ಸೆ ಪಡೆಯುವ ಮಕ್ಕಳ ಪೋಷಕರಿಗೆ ಲಯನ್ಸ್ ಆಹಾರ ವ್ಯವಸ್ಥೆ

ಮೈಸೂರು, ಫೆ2(ಎಸ್‌ಪಿಎನ್)– ಹಸಿದವರಿಗೆ ಅನ್ನ ಹಾಕುವುದು ಸರ್ವಶ್ರೇಷ್ಠ. ಅದರಲ್ಲೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುವ ಪೋಷಕರು, ಅವರ ಮಕ್ಕಳಿಗೆ ಪ್ರತಿ ದಿನ ಅನ್ನ ವಿತರಣೆ ಮಾಡುವುದರಿಂದ ದೇವರ ಸೇವೆ ಮಾಡಿದಷ್ಟು ಪ್ರಿಯವಾಗುತ್ತದೆ ಎಂದು ಆಯಿಷ್ ನಿರ್ದೇಶಕಿ ಪ್ರೊ.ಎಂ. ಪುಷ್ಪಾವತಿ ಅಭಿಪ್ರಾಯಪಟ್ಟರು.



ಲಯನ್ಸ್ ಸಂಸ್ಥೆ ಹಾಗೂ ಆಯಿಷ್ ಸಹಯೋಗದೊಂದಿಗೆ ಆಯೋಜಿಸಿರುವ 'ಹಸಿವು ನೀಗಿಸುವ ಕಾರ್ಯಕ್ರಮ'ಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರು ಗದ್ದಿಗೆ ರಸ್ತೆಯ ಪಂಚವಟಿ ಆವರಣದಲ್ಲಿರುವ ಕುಟೀರದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಜಿಲ್ಲಾ–317ಜಿ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿರುವ 'ಹಸಿವು ನೀಗಿಸವ ಕಾರ್ಯಕ್ರಮ'ಕ್ಕೆ ಚಾಲನೆ ನೀಡಿ ಮಾತನಾಡಿದರು.

ಲಯನ್ಸ್ ಸಂಸ್ಥೆ ಹಾಗೂ ಆಯಿಷ್ ಸಹಯೋಗದೊಂದಿಗೆ ವಿವಿಧೆಡೆಯಿಂದ ಆಗಮಿಸಿ ದೀರ್ಘಕಾಲ ಚಿಕಿತ್ಸೆ ಪಡೆಯುವ ಪೋಷಕರು, ಅವರ ಮಕ್ಕಳಿಗೆ ಪ್ರತಿದಿನ ಊಟದ ವ್ಯವಸ್ಥೆ ಮಾಡಲಾಗಿದೆ. ಪ್ರತಿನಿತ್ಯ ಪೋಷಕರು ರಾತ್ರಿ ವೇಳೆ ತಮ್ಮ ಮಕ್ಕಳಿಗೆ ಊಟ ತರಲು ಸಂಸ್ಥೆಯಿಂದ ಹೊರಗಡೆ ಹೋಗಬೇಕಾಗುತ್ತದೆ. ಅವರಿಗೆ ಸಂಸ್ಥೆ ಆವರಣದಲ್ಲಿ ಉಚಿತ ಊಟದ ವ್ಯವಸ್ಥೆ ಮಾಡಿಕೊಟ್ಟರೆ ಅವರು ಮತ್ತಷ್ಟು ಕಾಲ ಮಕ್ಕಳೊಂದಿಗೆ ಕಾಲ ಕಳೆದರೆ ಅನುಕೂಲವಾಗುತ್ತದೆ ಎಂದರು.

ನಮ್ಮ ಸಂಸ್ಥೆಯಲ್ಲಿ ತೊದಲು ಸಮಸ್ಯೆಯಿಂದ ಬಳಲುತ್ತಿರುವವರು. ಮಾತು ಆಡದಿರುವ ಮಕ್ಕಳಿಗೆ ಚಿಕಿತ್ಸೆ ನೀಡಬೇಕಾಗಿದೆ. ಒಂದು ತಿಂಗಳ ಮಗುವಿನಿಂದ 100 ವರ್ಷ ಪೂರೈಸಿದವರಿಗೂ ಒಂದಿಲ್ಲೊಂದು ಹಂತದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅನೇಕ ಗಾಯಕರು, ಶ್ರೀಮಂತರು ಚಿಕಿತ್ಸೆ ಪಡೆದಿದ್ದಾರೆ. ಪ್ರಪಂಚದಲ್ಲಿ ಶ್ರವಣ ಮತ್ತು ವಾಕ್ ಸಮಸ್ಯೆಗಳಿಗೆ ಆಯಿಷ್ ಸಂಸ್ಥೆ ಚಿಕಿತ್ಸೆ ನೀಡುತ್ತಿರುವ ಏಕೈಕ ಅತೀ ದೊಡ್ಡ ಚಿಕಿತ್ಸಾ ಕೇಂದ್ರವಾಗಿದೆ.

ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುವ ಮಕ್ಕಳ ಪೋಷಕರು ನಿತ್ಯ ಚಿಕಿತ್ಸಾ ವೆಚ್ಚದ ಜೊತೆಗೆ ಊಟಕ್ಕೂ ಭರಿಸಬೇಕಾಗುತ್ತದೆ. ಇದು ಕೆಲವರಿಗೆ ದುಬಾರಿಯಾಗುತ್ತಿದೆ. ಅದರಲ್ಲೂ ರಾತ್ರಿ ವೇಳೆ ಒಂದು–ಎರಡು ಕಿ.ಮೀ ಕ್ರಮಿಸಿ ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಪೋಷಕರಿಗಿದೆ. ಇದನ್ನು ಸರಿದೂಗಿಸಲು ಲಯನ್ಸ್ ಸಂಸ್ಥೆ ನಮ್ಮೊಂದಿಗೆ ಕೈಜೋಡಿಸಿರುವುದು ಸಂತೋಷದ ಸಂಗತಿ ಎಂದರು.

ಲಯನ್ಸ್ ಸಂಸ್ಥೆಯ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ ಮಾತನಾಡಿ, ಇಂದಿನಿಂದ (ಫೆ.2ರಿಂದ) ಜೂನ್ ಅಂತ್ಯದವರೆಗೆ 'ಹಸಿವು ನೀಗಿಸುವ ಕಾರ್ಯಕ್ರಮ' ಮುಂದುವರೆಯಲಿದೆ. ಪ್ರತಿದಿನ ಸಂಜೆ ಊಟದ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಮೈಸೂರಿನ ಲಯನ್ಸ್ ಕ್ಲಬ್ ಗಳಾದ ಕ್ಯಾಪಿಟಲ್, ಗ್ರೀನ್ ಸಿಟಿ, ಶ್ರೀಗಂಧ, ಪ್ಲಾಟಿನಂ, ಸಂತೃಪ್ತಿ, ಪ್ಯಾರಡೈಸ್, ಸೌಹಾರ್ದ, ವಿವೇಕಾನಂದ ನಗರ, ಅಂಬಾಸಿಡರ್, ಪರಂಪರೆ, ಪ್ಯಾಲೇಸ್ ಸಿಟಿ, ಗಂಗೋತ್ರಿ ಸೇರಿದಂತೆ 25 ಕ್ಲಬ್‌ಗಳು ಕೈ ಜೋಡಿಸಿವೆ ಎಂದರು.

ವೇದಿಕೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಜಿಲ್ಲಾಧ್ಯಕ್ಷ ಕೆ.ಬಿ.ಲಿಂಗರಾಜು, ಲಯನ್ಸ್ ಎಸ್.ಮತಿದೇವ ಕುಮಾರ್, ಹಸಿವು ಕಾರ್ಯಕ್ರಮದ ಜಿಲ್ಲಾ ಛೇರ್ಮನ್ ಲಯನ್ ಜಯಕುಮಾರ, ವಿಶೇಷ ಕಾರ್ಯದರ್ಶಿ ಲಯನ್ ಎಂ.ಆರ್.ಧರ್ಮರಾಜ್, ಲಯನ್ ಸದಸ್ಯರಾದ ಎಂ.ಎನ್. ಜೈ ಪ್ರಕಾಶ್, ಜೆ.ಲೋಕೇಶ್, ಪಿ.ರಮೇಶ್, ಕೆ.ಡಿ. ಕಾರ್ಯಪ್ಪ .ಡಾ.ಎನ್.ಕೃಷ್ಣೇ ಗೌಡ, ಡಾ.ಬಿ.ಎ.ರಮೇಶ್ ಉಪಸ್ಥಿತರಿದ್ದರು.

ಬುಡಕಟ್ಟು ಜನರ ಬದುಕು ಹಸನಾಗಿಸಲು ಸರ್ಕಾರದ ಹತ್ತು ಹಲವು ಕಾರ್ಯಕ್ರಮ

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾಹಿತಿ



ಬುಡಕಟ್ಟು ಸಮುದಾಯ ಯುವಕ, ಯುವತಿಯರಿಗೆ ಆಯೋಜಿಸಿದ್ದ ಕಲೆ ಮತ್ತು ಕರಕುಶಲ ತರಬೇತಿ ಕಾರ್ಯಾಗಾರಕ್ಕೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕರಾದ ಹೆಚ್.ಎಸ್.ಗಿರಿಜಾಂಬ ಚಾಲನೆ ನೀಡಿದರು.

ಮೈಸೂರು,ಫೆ.2(ಎಂಟಿವೈ)– ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನರ ಬದುಕನ್ನು ಹಸನಾಗಿಸಲು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರೊಂದಿಗೆ ಬುಡಕಟ್ಟು ಸಮುದಾಯದವರಿಗೆ ಕಲೆ ಮತ್ತು ಕರಕುಶಲ ತರಬೇತಿ ನೀಡಿ ಸ್ವಾವಲಂಬಿಗಳಾಗಿಸಲು ಮುಂದಾಗಿದೆ ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ತಿಳಿಸಿದ್ದಾರೆ.

ನವದೆಹಲಿಯ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಹೆಚ್.ಡಿ. ಕೋಟೆ ತಾಲೂಕಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬುಡಕಟ್ಟು ಸಮುದಾಯ ಯುವಕ, ಯುವತಿಯರಿಗೆ ಆಯೋಜಿಸಿದ್ದ ಕಲೆ ಮತ್ತು ಕರಕುಶಲ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬುಡಕಟ್ಟು ಸಮುದಾಯ ಯುವ ಜನರನ್ನು ಸ್ವಾವಲಂಬಿಗಳಾಗಿ ರೂಪಿಸಿ, ಆರ್ಥಿಕವಾಗಿ ಸದೃಢಗೊಳಿಸುವ ಬುಡಕಟ್ಟು ಇಲಾಖೆ ವಿವಿಧ ಕಲೆಗಳ ತರಬೇತಿ ಕಾರ್ಯಾಗಾರವನ್ನು ನಡೆಸುತ್ತಾ ಬಂದಿದೆ. ಈಗಾಗಲೇ ಇಂತಹ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಬುಡಕಟ್ಟು ಸಮುದಾಯ ಯುವಜನರು ವಿವಿಧ ಕಲಾ ಪ್ರಕಾರಗಳಲ್ಲಿ ಪರಿಣಿತಿ ಹೊಂದಿದ್ದು, ಇದೀಗ ಸ್ವಾವಲಂಬಿ ಬದುಕು ಸಾಗಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದಿನ ಕಾರ್ಯಾಗಾರದ ಸದುಪಯೋಗ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ ತಾಲೂಕು ಕಲ್ಯಾಣಾಧಿಕಾರಿ ಜಿ.ಆರ್. ಮಹೇಶ್ ಮಾತನಾಡಿ, ಜನಸಾಮಾನ್ಯರಲ್ಲಿರುವ ಕಲೆಗಿಂತ ನಿಮ್ಮಲ್ಲಿರುವ ಕಲೆ ಚೆನ್ನಾಗಿದೆ. ಸಮಾಜ ಬದಲಾಗಿದೆ ನಿರ್ದೇಶಕರಾದ ಟಿ.ಯೋಗೀಶ್‌ರವರ ಇಚ್ಛಾಶಕ್ತಿಯಿಂದ ಬುಡಕಟ್ಟು ಯುವಜನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಈ ಕಾರ್ಯಾಗಾರದ ಸದುಪಯೋಗ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಸಂಪನ್ಮೂಲ ವ್ಯಕ್ತಿ ಚೇತನ್‌ರವರು ಸೋರೆ ಬುರುಡೆ ಮೇಲೆ ಚಿತ್ರ ಬಿಡಿಸುವ ಬಗ್ಗೆ ತರಬೇತಿ ನೀಡಿದರು. ಸಂಪನ್ಮೂಲ ವ್ಯಕ್ತಿ ಡಾ. ವಿಜಯ್‌ಕುಮಾರ್ ಅವರು ಉದ್ಯಮಶೀಲ ಕೌಶಲ್ಯದ ಬಗ್ಗೆ ಮಾರುಕಟ್ಟೆ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಬುಡಕಟ್ಟು ಸಂಶೋಧನಾ ಸಂಸ್ಥೆಯ ಲೆಕ್ಕಾಧಿಕಾರಿ ಬಿ.ಆರ್. ಭವ್ಯ, ಹೆಚ್.ಡಿ.ಕೋಟೆ ಲ್ಯಾಂಪ್ಸ್ ಅಧ್ಯಕ್ಷ ಶೈಲೇಂದ್ರ ಕುಮಾರ್, ಗೀತಾ ಅಯ್ಯಪ್ಪ, ಸಿದ್ದರಾಜು, ಮಹದೇವ ತ್ರಿಮೂರ್ತಿ, ಸಿಡಿಪಿಓ ಗಾಯಿತ್ರಿ, ಜಯಲಲಿತಾ, ನಾಗೇಂದ್ರ ಹೆಬ್ಬಾರ್, ಭರತ್ ಕುಮಾರ್, ಎಂ.ಸಿದ್ದರಾಜು, ನಾಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮನ್ರೇಗಾದ ಭ್ರಷ್ಟಾಚಾರ ತಡೆಗೆ ವಿಬಿ ಜಿ ರಾಮ್ ಜಿ ಜಾರಿಗೆ

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜಿಪಂ ಮಾಜಿ ಸದಸ್ಯ ಸದಾನಂದ ವಾಗ್ದಾಳಿ

ತಿ.ನರಸೀಪುರ, ಫೆ.2– ಮನ್ರೇಗಾ ಯೋಜನೆಯಡಿ ನಡೆಯುತ್ತಿದ್ದ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ವಿಬಿಜಿ ರಾಮ್ ಜಿ ಯೋಜನೆ ಜಾರಿಗೆ ತಂದಿದ್ದು ವಿರೋಧ ಪಕ್ಷ ಕಾಂಗ್ರೆಸ್ ಮಾಡುತ್ತಿರುವ ಟೀಕೆಯಲ್ಲಿ ಯಾವುದೇ ಹುರುಳಿಲ್ಲ ಎಂದು ಜಿ.ಪಂ. ಮಾಜಿ ಸದಸ್ಯ ಬಿ.ಎನ್.ಸದಾನಂದ್ ತಿಳಿಸಿದ್ದಾರೆ.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮನ್ರೇಗಾ ಯೋಜನೆಯಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಎಂದು ಬದಲಾಯಿಸಲಾಗಿದೆ ಎಂದರು.

ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ವಿಬಿ ಜಿ ರಾಮ್‌ಜೀ ಮಸೂದೆಯು ಯೋಜನೆ ನರೇಗಾ ಕಾಮಗಾರಿಯಡಿ ನಡೆಯುತ್ತಿದ್ದ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲಿದೆ. ಜತೆಗೆ 25 ಕೆಲಸದ ದಿನಗಳ ಹೆಚ್ಚಳ, ಆಧುನಿಕ ತಂತ್ರಜ್ಞಾನ, ಜಿಪಿಎಸ್, ಬಯೋಮೆಟ್ರಿಕ್ ಸ್ಪರ್ಶ ನೀಡಲಾಗಿದೆ. ಯೋಜನೆ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆ ಬೇಡ, ಕಾಂಗ್ರೆಸ್


ತಿ.ನರಸೀಪುರ ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ. ಮಾಜಿ ಸದಸ್ಯ ಬಿ.ಎನ್.ಸದಾನಂದ ಮಾತನಾಡಿದರು.

ಸರ್ಕಾರ ಯೋಜನೆ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆ ಮೂಡಿಸಲು ಮುಂದಾಗಿರುವುದು ಅವರ ಹುಳುಕುಗಳನ್ನು ಮುಚ್ಚಿಕೊಳ್ಳಲು ಮಾತ್ರವೇ ಎಂದು ಕಿಡಿ ಕಾರಿದರು.

ರಾಜಕೀಕರಣಗೊಳಿಸಲು ಯತ್ನ: ಯುಪಿಎ ಸರ್ಕಾರದ ಅವಧಿಯಲ್ಲಿ ರೂಪಿಸಿದ ಶಿಕ್ಷಣ ಮತ್ತು ಆಹಾರ ಹಕ್ಕು ಕಾಯ್ದೆಗಳನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದ್ದು ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ. ಕೇವಲ ಗುಂಡಿ ಅಗೆಯುವ ಮತ್ತು ಗುಂಡಿ ಮುಚ್ಚುವ ಕೆಲಸವಾಗಿದ್ದ 'ಮನ್ರೇಗಾ' ಸ್ವರೂಪವನ್ನು ಅಭಿವೃದ್ಧಿಗೆ ಪೂರಕವಾಗಿ ಬದಲಿಸಲಾಗಿದೆ. ಇದನ್ನು ರಾಜಕೀಕರಣಗೊಳಿಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ' ಎಂದು ದೂರಿದರು.

ವಿಕಸಿತ ಭಾರತ ನಿರ್ಮಾಣದ ಉದ್ದೇಶ: ಗ್ರಾಮೀಣ ಭಾಗದ ಜನರು ನಗರ, ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಹಾಗೂ ದುಡಿಯುವ ಕೂಲಿ ಕಾರ್ಮಿಕರಿಗೆ ಕೆಲಸ ಕೊಡುವ ಉದ್ದೇಶವನ್ನು ಪ್ರಧಾನಿ ನರೇಂದ್ರ ಮೋದಿ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಜಾರಿಗೆ ತಂದಿದ್ದ ಮನರೇಗಾ ಯೋಜನೆಗೆ ಕೆಲವು ವಿಷಯಗಳನ್ನು ಮಾರ್ಪಾಡು ಮಾಡುವ ಮೂಲಕ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಮುಂದಾಗಿದೆ. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಹೆಸರನ್ನು ವಿಬಿ ಜಿ ರಾಮ್‌ಜೀ (ವಿಕಸಿತ ಭಾರತ ಗ್ಯಾರಂಟಿ ರೋಜಗಾರ ಹಾಗೂ ಜೀವನೋಪಾಯ ಯೋಜನೆ) ಎಂದು ಹೆಸರನ್ನು ಬದಲಾಯಿಸಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ನರೇಗಾದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ನಿಯಂತ್ರಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಹೇಳಿದರು.

ನೈಜ ಗಾಂಧೀಜಿಯನ್ನು ಕಾಂಗ್ರೆಸ್ ಮರೆತಿದೆ

ರಾಜ್ಯದಲ್ಲಿ 25 ಯೋಜನೆಗಳು ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಲ್ಲಿವೆ. ಶೈಕ್ಷಣಿಕ ಸಂಸ್ಥೆಗಳು 55 ಕ್ಕೆ ರಾಜೀವ್ ಗಾಂಧಿ, 21 ಸಂಸ್ಥೆಗೆ ಇಂದಿರಾ ಗಾಂಧಿ ಮತ್ತು 22 ಸಂಸ್ಥೆಗಳು ನೆಹರು ಹೆಸರಿನಲ್ಲಿವೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ರಾಜೀವ್, ಇಂದಿರಾ ಗಾಂಧಿ ಹೆಸರಿಟ್ಟುಕೊಂಡು ಜನರಿಗೆ ಮೋಸ ಮಾಡಿ ನಿಜವಾದ ಗಾಂಧಿಯನ್ನು ಕಾಂಗ್ರೆಸ್ಸಿಗರು ಮರೆತಿದ್ದಾರೆ, ಜನಪರ ಕಲ್ಯಾಣಗಳ ಪರವಾಗಿ ಯೋಜನೆ ರೂಪಿಸುತ್ತಿರುವ ಕೇಂದ್ರ ಸರ್ಕಾರದ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಸರಿಯಾಗಿ ಅನುಷ್ಠಾನ ಮಾಡಬೇಕು

– ಜಿಲ್ಲಾ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ,

ಗ್ರಾಪಂ ವ್ಯವಸ್ಥೆ ಬಲಗೊಳ್ಳಲಿದೆ: ಮನ್ರೇಗಾ ಯೋಜನೆ ವಿಬಿ ಜಿ ರಾಮ್ ಜಿ ಯೋಜನೆಯಾಗಿ ಬದಲಾದ ಬಳಿಕ ಮಾನವ ಪುರುಷ ಹಾಗೂ ಮಹಿಳೆಯರಿಗೆ ಸಮಾನವಾಗಿ 370 ರೂ.ಗಳ ಕೂಲಿ ನಿಗದಿಪಡಿಸಲಾಗಿದೆ. ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಯೋಜನೆ ಪರಿಷ್ಕರಿಸಲಾಗಿದೆ.

ವಿಜಿ ಜಿ ರಾಮ್ ಜಿ ಕಾಯ್ದೆ ಜಾರಿಯಿಂದ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಪೆಟ್ಟು ಬಿದ್ದಿಲ್ಲ. ಬದಲಾಗಿ ಗ್ರಾಮ ಪಂಚಾಯಿತಿ ವ್ಯವಸ್ಥೆ ಬಲಗೊಳ್ಳಲಿದೆ. ಪಂಚಾಯಿತಿ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ದುಂದು ವೆಚ್ಚಗಳಿಗೆ ಕಡಿವಾಣ ಬೀಳಲಿದ್ದು ಪಾರದರ್ಶಕತೆಗೆ ಒತ್ತು ಸಿಗಲಿದೆ. ಆಡಳಿತಾತ್ಮಕ ವ್ಯವಸ್ಥೆ ಬಲಗೊಳ್ಳಲಿದೆ.

ಕಾಂಗ್ರೆಸ್ ಪಕ್ಷಕ್ಕೆ ತಲೆ ನೋವು: ವಿಕಸಿತ ಭಾರತ ವಿಬಿ ಜಿ ರಾಮ್ ಜಿ ಕಾಯ್ದೆಯ ದೃಷ್ಟಿಕೋನಗಳು ಹತ್ತಾರು ಜನಪರ ಕಲ್ಯಾಣವನ್ನು ಹೊಂದಿದೆ. ಈ ನಿಟ್ಟಿನಲ್ಲಿ ನರೇಂದ್ರ ಮೋದಿ ಸರ್ಕಾರ ಇದಕ್ಕೆ ಇನ್ನಷ್ಟು ಬಲ ತುಂಬಿದೆಯೆಂದು ತಿಳಿಸಿದರು. ವರ್ಧಿತ ಜೀವನೋಪಾಯದ ಭದ್ರತೆ ಖಚಿತಪಡಿಸುವುದು, ಬಾಳಿಕೆ ಬರುವ ಮತ್ತು ಉತ್ತಮ ಗುಣಮಟ್ಟದ ಗ್ರಾಮೀಣ ಸ್ವತ್ತುಗಳ ರಚನೆ, ತಂತ್ರಜ್ಞಾನ ಆಧಾರಿತ ಪಾರದರ್ಶಕತೆ ರಚನೆ, ಭ್ರಷ್ಟಾಚಾರ ನಿರ್ಮೂಲನೆ, ಸಹಕಾರಿ ಒಕ್ಕೂಟದ ವ್ಯವಸ್ಥೆ ಬಲಪಡಿಸುವುದು, ರಾಷ್ಟ್ರೀಯ ಮೂಲಸೌಕರ್ಯ ಆದ್ಯತೆಗಳೊಂದಿಗೆ ಗ್ರಾಮ ಮಟ್ಟದಯೋಜನೆ ಸಂಯೋಜಿಸುವುದು. ಗ್ರಾಮೀಣ ಉದ್ಯೋಗ ನೀತಿಯನ್ನು ವಿಕಸಿತ ಭಾರತ್ 2047 ಮಾರ್ಗಸೂಚಿಯೊಂದಿಗೆ ಜೋಡಿಸುವುದು, ವಿಸ್ತ್ರತ ಉದ್ಯೋಗ ಖಾತ್ರಿ, ಕೃಷಿ–ಸೂಕ್ಷ್ಮ ಉದ್ಯೋಗ ವೇಳಾಪಟ್ಟಿ ಬಿತ್ತನೆ ಮತ್ತು ಕೊಯ್ಲಿನ ಕೃಷಿ ಚಟುವಟಿಕೆಯಲ್ಲಿ 60 ದಿನಗಳ ವಿರಾಮ ಘೋಷಿಸಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ ಎಂದು ವಿವರ ನೀಡಿದ ಅವರು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ವಿಬಿ ಜಿ ರಾಮ್ ಜಿ. ಕಾಯ್ದೆ ವಿರೋಧ ಪಕ್ಷದವರಿಗೆ ತಲೆನೋವಾಗಿದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಕ್ಷೇತ್ರಾಧ್ಯಕ್ಷ ಶಿವಕುಮಾರ್, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ಜಿಲ್ಲಾ ಸಂಚಾಲಕ ವೆಂಕಟಸ್ವಾಮಿ, ಗ್ರಾ.ಪಂ. ಸದಸ್ಯ ಕಿರಗಸೂರು ಮಹಾದೇವ ಸ್ವಾಮಿ, ದಯಾನಂದ್ ಪಟೇಲ್, ಪುಟ್ಟಸ್ವಾಮಿ, ಕೆನಂಜುಂಡಸ್ವಾಮಿ, ಕರೋಹಟ್ಟಿ ರಾಜಶೇಖರ್ ಇದ್ದರು

ಆರೋಗ್ಯದ ಬಗ್ಗೆ ಉದಾಸೀನ ಮಾಡಬೇಡಿ



ತಿ.ನರಸೀಪುರ, ಫೆ.2– ಆಧುನಿಕ ಯುಗದಲ್ಲಿ ಪ್ರತಿಯೊಬ್ಬರಿಗೂ ಹುಟ್ಟಿನೊಂದಿಗೆ ಅನಾರೋಗ್ಯ ಜೊತೆಯಾಗಿ ಬರುವುದರಿಂದ ಆರೋಗ್ಯದ ಬಗ್ಗೆ ಉದಾಸೀನ ಮಾಡಬಾರದು ಎಂದು ದೊಡ್ಡಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಮರಿಸ್ವಾಮಿ ತಿಳಿಸಿದರು.

ತಾಲೂಕಿನ ದೊಡ್ಡ ಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಭೈರವೇಶ್ವರ ನೇತ್ರಾಲಯ ಹಾಗೂ ಸರ್ಕಾರಿ ವಿಮ ರೈತರ ಯಶಸ್ವಿನಿ ಯೋಜನೆಯಡಿ ಉಚಿತ ಕಣ್ಣಿನ ನೇತ್ರ ತಪಾಸಣಾ ಶಿಬಿರದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂತಹ ಶಿಬಿರಗಳನ್ನು ಗ್ರಾಮೀಣ ಪ್ರದೇಶದ ಎಲ್ಲಾ ಕಡೆ ನಡೆಸಿದರೆ ಗ್ರಾಮೀಣ ಜನರಿಗೂ ಉಪಯೋಗವಾಗುತ್ತದೆ. ಎಲ್ಲಾ ವರ್ಗದ ಜನರು ಇದರ ಸದುಪಯೋಗ ಪಡೆಯಬೇಕು ಎಂದರು.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಿನಿ ಮಹಾದೇವಸ್ವಾಮಿ ಮಾತನಾಡಿ ದೊಡ್ಡ ಮಟ್ಟದ ಚಿಕಿತ್ಸಾ ಶಿಬಿರಗಳು ಯಶಸ್ವಿಯಾಗಿ ನಡೆದ ಬಳಿಕ ಇದೇ ಮೊದಲ ಬಾರಿಗೆ ಬೃಹತ್ ಕಣ್ಣಿನ ನೇತ್ರ ತಪಾಸಣಾ ಶಿಬಿರವನ್ನು ಗ್ರಾಮದಲ್ಲಿ ಗ್ರಾಮೀಣ ಜನರಿಗೆ ಆರೋಗ್ಯ ಚಿಕಿತ್ಸಾ ಶಿಬಿರವನ್ನು ವಿದ್ಯುಕ್ತವಾಗಿ ಆರಂಭಿಸುತ್ತಿದ್ದೇವೆ ಎಂದರು. ಇದೇ ವೇಳೆ ಚಿಕಿತ್ಸಾ ಶಿಬಿರದಲ್ಲಿ ನೂರಾರು ಜನ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದರು.

ವೈದ್ಯಾಧಿಕಾರಿ ಚಂದನ್, ಸಂಘದ ನಿರ್ದೇಶಕ ಡಿ.ಪಿ.ನಾಗರಾಜು, ಸಂತೋಷ್ ಇದ್ದರು.

ಹುಲ್ಲಹಳ್ಳಿಯಲ್ಲಿ ಪತಿ ನಾಪತ್ತೆ: ಪತ್ನಿ ದೂರು

ಹುಲ್ಲಹಳ್ಳಿ: ಹುಲ್ಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಗೌಡರಹುಂಡಿ ಗ್ರಾಮದ ನಿವಾಸಿ ರಂಗನಾಥ(32) ಕಾಣೆಯಾಗಿದ್ದಾರೆ.



ಮೈಸೂರು ತಾಲೂಕಿನ ಯಡಕೊಳ ಗ್ರಾಮದ ರಂಗನಾಥ ಎಂಬುವರು ಗೌಡರಹುಂಡಿ ಗ್ರಾಮದ ಸುಮ ಅವರನ್ನು ಕಳೆದ 4 ವರ್ಷಗಳ ಹಿಂದೆ ಮದುವೆಯಾಗಿ ಗೌಡರಹುಂಡಿಯಲ್ಲಿ ವಾಸವಿದ್ದರು. ಮೈಸೂರಿನ ಖಾಸಗಿ ಕಂಪನಿಯಲ್ಲಿ ದಂಪತಿಗಳಿಬ್ಬರು ಕೆಲಸ ಮಾಡುತ್ತಿದ್ದು, ನಿತ್ಯ ಗೌಡರಹುಂಡಿ ಗ್ರಾಮದಿಂದ ದ್ವಿಚಕ್ರ ವಾಹನದಲ್ಲಿ ಓಡಾಟ ನಡೆಸುತ್ತಿದ್ದರು. ಜ.30ರಂದು ಪತಿ ಸುಮ ಅವರನ್ನು ಕೆಲಸಕ್ಕೆ ಬಿಟ್ಟವರು ಸಂಜೆಯ ವೇಳೆ ಊರಿಗೆ ಕರೆದೊಯ್ಯಲು ಬರದೆ ಇರುವ ಹಿನ್ನೆಲೆಯಲ್ಲಿ ಕಾಣೆಯಾಗಿರುವ ದೂರು ಸಲ್ಲಿಸಿದ್ದಾರೆ.

ಹಿಂದೂ ಸಮಾಜೋತ್ಸವ ಬೃಹತ್ ಶೋಭಾಯಾತ್ರೆ

ಸರಗೂರು: ಪಟ್ಟಣದಲ್ಲಿ ಹಿಂದೂ ಸಮಾಜೋತ್ಸವ ಹಾಗೂ ಬೃಹತ್ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಸ್ನೇಹಸ್ತ್ರೀ ಸಮಾಜದ ಸಂಸ್ಥಾಪಕ ಅಧ್ಯಕ್ಷೆ ಸುಧಾ ಮೃತ್ಯುಂಜಪ್ಪ ಮಾತನಾಡಿ ಈಗ ಎಲ್ಲರು ಹಿಂದೂ ಸಂಸ್ಕೃತಿ ಬಿಟ್ಟು ವಿದೇಶ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ. ವಿದೇಶಿಗರು ನಮ್ಮ ಭಾರತ ಸಂಸ್ಕೃತಿ ಬಗ್ಗೆ ಮಾರು ಹೋಗಿ ನಮ್ಮ ಸಂಸ್ಕೃತಿ ದೊಡ್ಡದು ಎಂದು ತಿಳಿದು ಬರುತ್ತಿದ್ದಾರೆ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ರಾಧಾಕೃಷ್ಣ ಹೊಳ್ಳ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಕ 100 ದಿನದ ಪಂಚ ಪರಿವರ್ತನೆ ಆಚರಣೆ ಅಂಗವಾಗಿ ಹಿಂದೂಗಳಾದ ನಮ್ಮಲ್ಲಿ ನಮ್ಮ ದೇಶದ, ನಮ್ಮಗಳ ಶಕ್ತಿ ಸಾಮರ್ಥ್ಯ ಏನು ಎಂಬುದನ್ನು ಪರಿಚಯಿಸಲು ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವದ ಹಿನ್ನಲೆಯಲ್ಲಿ ಎಲ್ಲೆಡೆ ಹಿಂದೂ ಸಮಾಜೋತ್ಸವ ಆಚರಿಲಾಗುತ್ತಿದೆ ಎಂದರು.


ಹಿಂದೂ ಸಮಾಜೋತ್ಸವದ ಬೃಹತ್ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಹಂಚಿಪುರ ಮಠದ ತೋಂಟದಾರ್ಯ ಸ್ವಾಮೀಜಿ ಮಾತನಾಡಿ ಹಿಂದುತ್ವವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು, ಹಿಂದು ಸಮಾಜೋತ್ಸವ ಕಾರ್ಯಕ್ರಮ ಒಂದು ಜಾತಿ, ವರ್ಗಕ್ಕೆ ಸೀಮಿತವಾಗಿಲ್ಲ, ಎಲ್ಲ ವರ್ಗದ ಸಮುದಾಯಕ್ಕೆ ಸೇರಿದ್ದು, ಮುಂದಿನ ಪೀಳಿಗೆಗೆ ಬದುಕು ಕಟ್ಟಿಕೊಳ್ಳಲು ಇದು ಮಾರ್ಗದರ್ಶನ ವಾಗುತ್ತದೆ ಎಂದು ತಿಳಿಸಿದರು.

ವಕೀಲ ಎಂ.ಎನ್.ರವಿಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಟ್ಟಣದ ಮಹಾವೀರ ವೃತ್ತದಲ್ಲಿ ಹಿಂದೂ ಸಮಾಜೋತ್ಸವದ ಶೋಭಾಯಾತ್ರೆಗೆ ಹಂಚೀಪುರ ಮಠದ ಕಿರಿಯ ಸ್ವಾಮಿಜಿ ತೋಂಟದಾರ್ಯ ಸ್ವಾಮಿ ಚಾಲನೆ ನೀಡಿದರು. ಶೋಭಾಯಾತ್ರೆಯು ಮಹಾವೀರ ವೃತ್ತದ ಗಣೇಶ ದೇವಸ್ಥಾನದ ಮೂಲಕ ಹೊರಟು ಎರಡನೇ ಮುಖ್ಯ ರಸ್ತೆ ಮೂಲಕ, ಚಿಕ್ಕದೇವಮ್ಮ ವೃತ್ತ ಬಸವೇಶ್ವರ ದೇವಸ್ಥಾನದ ಬಳಿ ಶೋಭಾಯಾತ್ರೆಯು ಆಗಮಿಸಿತು.

ಹಿಂದೂ ಸಮಾಜೋತ್ಸವದ ಆಚರಣಾ ಸಮಿತಿ ಸಂಚಾಲಕ ರಾಮು, ಸಹ ಸಂಚಾಲಕ ಭರತ್, ರವಿಕುಮಾರ್, ಚನ್ನಪ್ಪ, ಮಹೇಶ್ ಪಟೇಲ್, ಚನ್ನಪ್ಪ ಬಜರಂಗಿ, ಶ್ರೀವತ್ಸ, ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳ ಸ್ವಾಮಿ, ನವೀನ್ ಕುಮಾರ್, ರಾಧಿಕಾ ಶ್ರೀನಾಥ್, ಉಮಾ ರಾಮು, ವಿನಾಯಕ ಪ್ರಸಾದ್ ಹಾಗೂ ಎಂ.ನಾಗರಾಜು, ಗೋಬಿ ರಂಗಸ್ವಾಮಿ, ತಾಲೂಕು ಬಿಜೆಪಿ ಘಟಕ ಅಧ್ಯಕ್ಷ ಗುರು ಸ್ವಾಮಿ, ಸಿ.ಕೆ.ಗಿರೀಶ್, ಹೆಚ್.ಹನು, ವರ್ತಕ ಮಂಡಳಿ ಅಧ್ಯಕ್ಷ ಎಸ್.ಪಿ.ಪ್ರಸಾದ್, ಎಸ್.ಹರೀಶ್, ಎಸ್.ಬಿ.ನಂಜುಂಡಸ್ವಾಮಿ, ಯಶವಂತ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಾಟವಾಳು ವೀರಭದ್ರಪ್ಪ, ಕೆ.ಸುರೇಶ್ ಜೈನ್, ಸುನಂದರಾಜು, ಎಸ್.ಹೆಚ್.ರಮೇಶ್ ಹಾಜರಿದ್ದರು. ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ಎಲ್ಲಾ ಸಮಾಜದ ಮುಖ್ಯಸ್ಥರು ತಾಯಂದಿರು, ಮಕ್ಕಳು ಭಾಗಿಯಾಗಿದ್ದರು.

ಗಮನ ಸೆಳೆಯುತ್ತಿದೆ ಹಳ್ಳಿಕಾರ್ ತಳಿ ರಾಸುಗಳು

ಬನ್ನೂರು: ಪಟ್ಟಣದಲ್ಲಿ ಹೇಮಾದ್ರಂಭ ಜಾತ್ರಾ ಮಹೋತ್ಸವದ ಅಂಗವಾಗಿ ದನಗಳ ಜಾತ್ರೆ ಆರಂಭವಾಗಿದ್ದು, ಹಳ್ಳಿಕಾರ್ ತಳಿಯ ಎತ್ತುಗಳು ಬಹಳಷ್ಟು ಆಕರ್ಷಣೀಯವಾಗಿದೆ. ಹಳ್ಳಿಕಾರ್ ತಳಿಯ ರಾಸುಗಳು ಹೆಚ್ಚಾಗಿ ಆಗಮಿಸಿರುವ ಹಿನ್ನೆಲೆಯಲ್ಲಿ ಹಳ್ಳಿಕಾರ್ ತಳಿಯ ರಾಸುಗಳನ್ನು ಸಾಕುವವರಿಗೆ ಮಾಹಿತಿಯು ಸಿಗುತ್ತಿದೆ.

ಯಾಚೇನಹಳ್ಳಿ ಗ್ರಾಮದ ಹಳ್ಳಿಕಾರ್ ತಳಿಯ ಸಂರಕ್ಷಕ ಎಂದೇ ಖ್ಯಾತರಾದ ಸಿದ್ದರಾಮು ಮಾತನಾಡಿ, ಇಂದು ಹೇಮಾದ್ರಂಭ ಜಾತ್ರೆಯು ವಿದ್ಯುಕ್ತವಾಗಿ ಆರಂಭವಾಗಿದೆ. ಇಲ್ಲಿ ಹಳ್ಳಿಕಾರ್ ತಳಿಯ ರಾಸುಗಳೇ ಹೆಚ್ಚಾಗಿ ಕಟ್ಟುತ್ತಿರುವುದರಿಂದ ರೈತರಿಗೆ ಬಹಳಷ್ಟು ಅನುಕೂಲವಾದಂತೆ ಆಗಿದೆ. ಮುಂದಿನ ದಿನಗಳಲ್ಲಿ ಪ್ರತಿ ಮನೆ ಮನೆಗಳಲ್ಲಿ ಹಳ್ಳಿಕಾರ್ ತಳಿಯ ರಾಸುಗಳನ್ನು ಯುವಕರು ಸಾಕಲಿ ಎಂದು ಆಶಿಸಿದರು. ಜಾತ್ರಾ ಮಹೋತ್ಸವದಲ್ಲಿ ರಾಮನಗರ, ಕೊಳ್ಳೇಗಾಲ, ಸಾತನೂರು ಸೇರಿದಂತೆ ಅನೇಕ ಕಡೆಗಳಿಂದ ಹಳ್ಳಿಕಾರ್ ತಳಿಯ ರಾಸುಗಳು ಬಂದಿದ್ದು, ರೈತರಿಂದ ರಾಸುಗಳು ನೇರವಾಗಿ ಮಾರಾಟವು ನಡೆಯುತ್ತಿದೆ. ಉತ್ತಮ ಹಳ್ಳಿಕಾರ್ ತಳಿಯ ರಾಸುಗಳಿಗೆ ಬಹುಮಾನದ ವ್ಯವಸ್ಥೆಯು ಇದೆ.



ತಿ.ನರಸೀಪುರದಲ್ಲಿ ಕ್ಲಬ್ ಮೇಲೆ ಪೊಲೀಸರ ದಾಳಿ

36 ಮಂದಿ ಸೆರೆ, 1,07,048 ರೂ. ವಶಕ್ಕೆ

ತಿ.ನರಸೀಪುರ, ಫೆ.2– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಸ್ವ ಕ್ಷೇತ್ರ ತಿ.ನರಸೀಪುರ ಪಟ್ಟಣದ ಹೃದಯ ಭಾಗದಲ್ಲಿ ನಡೆಯುತ್ತಿದ್ದ ಜೂಜು ದಂಧೆಗೆ ಕಡಿವಾಣ ಹಾಕಲು ಇಸ್ಪೀಟಾಡುತ್ತಿದ್ದ ಸ್ಪೋರ್ಟ್ ಕ್ಲಬ್ ವೊಂದರ ಮೇಲೆ ದಾಳಿ ನಡೆಸಿ ಪಣಕ್ಕಿಟ್ಟಿದ್ದ 1,07,048 ರೂ.ಗಳ ನಗದು ಹಾಗೂ 36 ಮಂದಿ ಜೂಜುಕೋರರನ್ನು ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಎನ್‌ಆರ್‌ಎಫ್ ರಾಯಲ್ ವರ್ಲ್ಡ್ ಹಿಂಭಾಗದಲ್ಲಿರುವ ತ್ರಿವೇಣಿ ಸ್ಪೋರ್ಟ್ಸ್ ರಿಕ್ರಿಯೇಶನ್ ಕ್ಲಬ್‌ನಲ್ಲಿ ನಿಯಮ ಉಲ್ಲಂಘಿಸಿ ಜೂಜಾಟ ನಡೆಸಲಾಗುತ್ತಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಸಿಪಿಐ ಧನಂಜಯ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು ನಿಯಮ ಉಲ್ಲಂಘನೆ ಮಾಡಿ ಪಾಯಿಂಟ್ ರಮ್ಮಿ ಆಟದಲ್ಲಿ ನಿರತರಾಗಿದ್ದ 36 ಮಂದಿಯನ್ನು ವಶಕ್ಕೆ ಪಡೆದು ಜೂಜಿಗೆ ಪಣವಾಗಿಟ್ಟಿದ್ದ 1,07,048 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. 36 ಮಂದಿ ಜೂಜುಕೋರರು, ಕ್ಲಬ್ ಅಧ್ಯಕ್ಷರು, ಕಾರ್ಯದರ್ಶಿ ಸದಸ್ಯರು ಹಾಗು ಸಿಬ್ಬಂದಿ ವರ್ಗ ಸೇರಿದಂತೆ ಒಟ್ಟು 42 ಮಂದಿ ಮೇಲೆ ಪೊಲೀಸರು ಕೇಸು ದಾಖಲಿಸಿದ್ದಾರೆ. ಸ್ಪೋರ್ಟ್ಸ್ ಕ್ಲಬ್ ಮೇಲೆ ಪೊಲೀಸರು ದಾಳಿ ಮಾಡುತ್ತಿದ್ದಂತೆ ಜೂಜಾಟಗಾರೊಬ್ಬರು 16,340ರೂ.ಗಳನ್ನು ಕಿಟಕಿಯಿಂದ ಹೊರಗೆಸೆದರೆ, ಮತ್ತೊಬ್ಬ ಜೂಜುಕೋರ 39,500 ರೂ.ಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಿ ಕಸದ ಡಬ್ಬಕ್ಕೆ ಹಾಕಿದ್ದು ಪೊಲೀಸರು ಹಣವನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಸಿದ್ದರಾಮಯ್ಯ ಹಾಗೂ ಹೆಚ್.ಸಿ.ಮಹದೇವಪ್ಪ ಅವರು ಪ್ರತಿನಿಧಿಸುವ ತಿ.ನರಸೀಪುರ ಹಾಗು ವರುಣ ಕ್ಷೇತ್ರದಲ್ಲಿ ನಿರಂತರವಾಗಿ ಜೂಜಾಟ ನಡೆಯುತ್ತಿದ್ದು,ಈ ಹಿಂದೆ ಸಹ ಜಿಲ್ಲಾ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ದಾಳಿ ಮಾಡಿ 25 ಮಂದಿ ಜೂಜುಕೋರರನ್ನು ಬಂಧಿಸಿ 71470 ರೂ.ಗಳನ್ನು ವಶ ಪಡಿಸಿಕೊಂಡಿದ್ದರು. ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಇಸ್ಪೀಟಾಡಲು ಕನಕಪುರ, ನಂಜನಗೂಡು, ಮೈಸೂರು, ಚಾಮರಾಜನಗರ, ಮಳವಳ್ಳಿ, ಯಳಂದೂರು, ಕೊಳ್ಳೇಗಾಲ ಹಾಗು ಗುಂಡ್ಲುಪೇಟೆ ತಾಲೂಕಿನಿಂದ ಜೂಜುಕೋರರು ಬರುತ್ತಿದ್ದು, ಪೊಲೀಸರ ದಾಳಿ ವೇಳೆ ಈ ತಾಲೂಕಿನ ಜೂಜುಕೋರರು ಬಂಧನಕ್ಕೊಳಗಾಗಿ ಜಾಮೀನು ಪಡೆದಿದ್ದಾರೆ.



ದಾಳಿ ವೇಳೆ 1,07,048 ರೂ. ನಗದು, 500 ರೂ.ನ 5 ಟೋಕನ್‌ಗಳು, 200 ರೂ.ನ 21,100 ರೂ.ನ 29 ಹಾಗು 20 ರೂ.ನ 13 ಟೋಕನ್‌ಗಳು, ಜೂಜಾಟಕ್ಕೆ ಬಳಸಿಕೊಂಡಿದ್ದ 5 ರೌಂಡ್ ಟೇಬಲ್, 70 ಚೇರ್, ಇಸ್ಪೀಟನ್ನು ತುಂಬಿಟ್ಟಿದ್ದ 96 ಇಸ್ಪೀಟ್ ಬಾಕ್ಸ್‌ಗಳು ಹಾಗು ಸಿಸಿಟಿವಿ ಕ್ಯಾಮರಾಗಳಿಗೆ ಅಳವಡಿಸಿದ್ದ ಡಿವಿಆರ್ ಅನ್ನು ವಶಕ್ಕೆ ಪಡೆಯಲಾಗಿದೆ ದಾಳಿಯಲ್ಲಿ ಸಿಪಿಐ ಧನಂಜಯ್, ಪಿಎಸ್‌ಐ ಜಗದೀಶ್ ದೂಳ್ ಶೆಟ್ಟಿ,ಎ ಎಸ್‌ಐ ಚೆಲುವರಾಜು ಹಾಗು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಬಾರ್‌ಗೆ ಅನುಮತಿ ನೀಡದಂತೆ ಗ್ರಾಮಸ್ಥರ ಆಗ್ರಹ

ಹುಣಸೂರು, ಫೆ.2– ತಾಲೂಕಿನ ಹನಗೋಡು ಹೋಬಳಿ ಹುಣಸೆಗಾಲ ಗ್ರಾಮದ ಗೇಟ್ ಬಳಿ ಬಾರ್‌ಗೆ ಪರವಾನಗಿ ನೀಡದಂತೆ ನೂರಾರು ಮಂದಿ ಗ್ರಾಮಸ್ಥರು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ತಾಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ, ಅಬಕಾರಿ ನಿರೀಕ್ಷಕರು, ಹುಣಸೂರು ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಮನವಿ ಮಾಡಿದ್ದಾರೆ.

ತಾಲೂಕಿನ ಹುಣಸೆಗಾಲ ಗ್ರಾಮದ ಗೇಟ್ ಬಳಿ ಬಾರ್ ತೆರೆಯಲು ಕಟ್ಟಡ ಕಾಮಗಾರಿ ನಡೆಯುತ್ತಿದೆ. ಬಾರ್ ನಡೆಸಲು ನಿರಾಪೇಕ್ಷಣಾ ಪತ್ರ ಕೋರಿ ಪಂಚಾಯ್ತಿಗೆ ಅರ್ಜಿ ಸಲ್ಲಿಸಲಾಗಿದೆ. ಸದರಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡದೆ ಗ್ರಾಮಸ್ಥರ ಅಭಿಪ್ರಾಯಗಳನ್ನು ಸಂಗ್ರಹಿಸದೇ ಏಕಾಏಕಿ ನಿರಾಪೇಕ್ಷಣ ಪತ್ರವನ್ನು ನೀಡಲು ಮುಂದಾಗಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಷ ವ್ಯಕ್ತಪಡಿಸಿದ್ದಾರೆ.



ನಂತರ ಮಾತನಾಡಿದ ಗ್ರಾಮದ ಯಜಮಾನರಾದ ಪುಟ್ಟಸ್ವಾಮಿಗೌಡ ನಮ್ಮ ಹುಣಸೆಗಾಲ ಗ್ರಾಮದಲ್ಲಿ ಸುಮಾರು 300 ಮನೆಗಳಿದ್ದು, ಎಲ್ಲರೂ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ನಮ್ಮ ಗ್ರಾಮದಿಂದ ಸುಮಾರು 100 ರಿಂದ 150 ಮಕ್ಕಳು ಪ್ರತಿದಿನ ಶಾಲಾ ಕಾಲೇಜಿಗೆ ಹೋಗಲು ಹುಣಸೇಗಾಲ ಗ್ರಾಮದ ಗೇಟ್ ಬಳಿ ಬಸ್ಸಿಗಾಗಿ ಕಾಯುತ್ತಾರೆ. ಇದರಿಂದ ಕೆಟ್ಟ ಪರಿಣಾಮ ಉಂಟಾಗುತ್ತದೆ. ಹಾಗಾಗಿ ಗ್ರಾಮದ ಬಳಿ ಬಾರ್ ತೆರೆಯಲು ಪರವಾನಗಿ ನೀಡಬಾರದೆಂದು ಮನವಿ ಮಾಡಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ತಮ್ಮೇಗೌಡ, ವೆಂಕಟೇಶ್‌ಗೌಡ, ಮಂಜುನಾಥ್, ಪಾಂಡು, ಚಂದ್ರಶೇಖರ, ದಯಾನಂದ, ನಂಜುಂಡ, ಪರಮೇಶ್, ರವಿ, ಶ್ರೀನಿವಾಸ್, ರಘು, ರುದ್ರೇಗೌಡ, ಗ್ರಾಮದ ಯಜಮಾನರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಜಾನಪದ ಕಲಾವಿದನಿಗೆ ಗೌರವ ಡಾಕ್ಟರೇಟ್

ಮಲ್ಕುಂಡಿ: ಬೆಂಗಳೂರಿನ ಏಷ್ಯಾ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಅಕಾಡೆಮಿಯು ಗ್ರಾಮೀಣ ಭಾಗದಲ್ಲಿ ಜಾನಪದ ಕಲೆಯಲ್ಲಿ ಸಾಧನೆ ಮಾಡಿರುವ ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷರು ಮತ್ತು ಜಾನಪದ ಕಲಾವಿದರೂ ಆದ ಬಿ.ಶಂಕರ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.



ಎಂ.ಕೊಂಗಳ್ಳಿ ಮತ್ತು ಚಿಕ್ಕತಾಯಮ್ಮ ಅವರ ಪುತ್ರರಾದ ಶಂಕರ್ 1993ರಲ್ಲಿ ಕಲಾರಂಗಕ್ಕೆ ಕಾಲಿಟ್ಟು 13 ವರ್ಷಗಳ ಕಾಲ ಕನ್ನಡ ಜಾನಪದ ಗೀತೆ, ಕಾವೇರಿ ನದಿಯ ಹಾಡುಗಳು ಹಾಗೂ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕುರಿತು ಗೀತೆಗಳನ್ನು ಹಾಡಿ ಜನಪ್ರಿಯತೆ ಗಳಿಸಿದ್ದಾರೆ. ಶನಿವಾರ ಬೆಂಗಳೂರಿನಲ್ಲಿ ನಡೆದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಶಂಕರ್ ಅವರಿಗೆ ಈ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ. ಅವರು 80ಕ್ಕೂ ಹೆಚ್ಚು ಜಾನಪದ ಗೀತೆಗಳನ್ನು ರಚಿಸಿದ್ದಾರೆ. ಬಿ.ಶಂಕರ್ 2020ರಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದು ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ದುಗ್ಗಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಕಾರ್ಯಾಗಾರ

ಹುಣಸೂರು: ಹುಣಸೂರು ತಾಲೂಕಿನ ತಾಪಂ ಆವರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಪ್ರಾತಿಪರ ಸಂಘಟನೆ ಒಕ್ಕೂಟ ನಜೀರ್ ಸಾಬ್ ಫೌಂಡೇಶನ್ ವತಿಯಿಂದ ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ಕಾರ್ಯಾಗಾರವನ್ನು ರೈತ ಸಂಘ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಮುಂಬರುವ ಗ್ರಾಪಂ ಚುನಾವಣೆಗಳ ಬಗ್ಗೆ ಹಲವಾರು ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಹೆಳವರಹುಂಡಿಯಲ್ಲಿ ಡಾ.ಶಿವಕುಮಾರ ಸ್ವಾಮಿಗಳ ಏಳನೇ ವರ್ಷದ ಪುಣ್ಯಸ್ಮರಣೆ ಆಚರಣೆ

ತಿ.ನರಸೀಪುರ, ಫೆ.2– ಸಿದ್ದಗಂಗಾ ಶ್ರೀಗಳು ರಾಜ್ಯದಲ್ಲಿ ಬಹುದೊಡ್ಡ ಶಿಕ್ಷಣ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ಕೆಲಸ ಮಾಡಿದ್ದಾರೆ ಎಂದು ಗುರು ಮಲ್ಲೇಶ್ವರ ಮಠದ ಗುರುಸ್ವಾಮಿಜಿ ತಿಳಿಸಿದರು.

ಪಟ್ಟಣದ ಹೆಳವರಹುಂಡಿ ಗ್ರಾಮದ ಆವರಣದಲ್ಲಿ ಡಾ.ಶಿವಕುಮಾರಸ್ವಾಮಿಗಳ ಏಳನೇ ವರ್ಷದ ಪುಣ್ಯ ಸ್ಮರಣೆಯಲ್ಲಿ ಹಾಗೂ ರಕ್ತದಾನ ಶಿಬಿರ ಮತ್ತು ಕಣ್ಣಿನ ತಪಾಸಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿವಕುಮಾರ ಸ್ವಾಮಿಗಳು ನಾಡು ಕಂಡ ಮಹಾನ್ ಶಿವಯೋಗಿಗಳು, ಅವರ ಬದುಕು, ಸೇವೆ ಮತ್ತು ತ್ಯಾಗದ ಸಂಗಮವಾಗಿತ್ತು. ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿ ಕೊಟ್ಟರು. ಇದರಿಂದ ಅನೇಕ ಮಹಿಳೆಯರ ಸ್ವಾವಲಂಬನೆ ಬದುಕಿಗೆ ಸಹಕಾರಿಯಾಯಿತು ಎಂದರು.

ಸಿದ್ಧಗಂಗಾ ಮಠ ಎಂಬ ಕಮ್ಮಟದಲ್ಲಿ


ತಿ.ನರಸೀಪುರ ಪಟ್ಟಣದ ಹೆಳವರಹುಂಡಿ ಗ್ರಾಮದಲ್ಲಿ ಡಾ.ಶಿವಕುಮಾರಸ್ವಾಮಿಗಳ ಏಳನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ಅನೇಕರು ತಮ್ಮ ಬದುಕು ರೂಪಿಸಿಕೊಂಡಿದ್ದಾರೆ. ಪರಮಪೂಜ್ಯರಿಗೆ ಹಳ್ಳಿ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಬಹು ದೊಡ್ಡ ಕನಸಿತ್ತು. ಅದಕ್ಕಾಗಿ ಅವರು ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳನ್ನು ಸ್ಥಾಪಿಸಿ ಅನೇಕ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡಿದರು. ಮಠಕ್ಕೆ ಎಷ್ಟೇ ಮಕ್ಕಳು ಬಂದರೂ ಆಶ್ರಯ ಕೊಡುವಂತಹ ಜಾತ್ಯಾತೀತ, ವಿಶಾಲ ಮನೋಭಾವ ಇಟ್ಟುಕೊಂಡು ಯಾವುದೇ ಭೇದ ಭಾವ ಮಾಡದೇ ಎಲ್ಲರಿಗೂ ಅವಕಾಶ ಕೊಡುವ ಕೆಲಸ ಮಾಡಿದ ಶಿವಕುಮಾರ ಸ್ವಾಮೀಜಿಗಳ ಸೇವೆ ಅನನ್ಯ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಸದಸ್ಯರಾದ ಎಸ್. ಕೆ.ಕಿರಣ್, ಮೆಡಿಕಲ್ ನಾಗರಾಜು, ಗೌಡರ ಬಸಪ್ಪ, ಕೇಬಲ್ ರಾಜಶೇಖರ್, ಪೊನ್ನಪ್ಪ ಮಂಜು, ಪ್ಯೂರ್ ಕೇರ್ ರಕ್ತ ನಿಧಿಯ ಜನರಲ್ ಮ್ಯಾನೇಜರ್ ರಶ್ಮಿ, ಗಿರೀಶ್, ತೇಜಸ್ವಿನಿ, ಜಮೀಲಾ ಬಾನು, ನಾಯಕ್, ನಿಸಾರ್ ಅಹಮದ್, ಅಡುಗೆ ಕಂಟ್ರಾಕ್ಟರ್ ಪ್ರಭು, ರೇವಣ್ಣಗೌಡ್ರು, ಕುಮಾರ್ ಇನ್ನಿತರರಿದ್ದರು.

ತಮ್ಮ ಮಾರ್ಗದರ್ಶನದ ಮೂಲಕ ಸಾವಿತ್ರಿ ಬಾಯಿ ಫುಲೆ ನಮ್ಮ ನಡುವೆ ಈಗಲೂ ಬದುಕಿದ್ದಾರೆ

ಹೆಚ್.ಡಿ.ಕೋಟೆ: ಪಟ್ಟಣದ ಹ್ಯಾಂಡ್ ಪೋಸ್ಟ್‌ನಲ್ಲಿರುವ ತಾರಕ ಫಂಕ್ಷನ್ ಹಾಲ್‌ನಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕರ ಫೆಡರೇಷನ್, ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ, ರಾಜ್ಯ, ಜಿಲ್ಲಾ ಮತ್ತು ತಾಲೂಕು ಘಟಕದ ವತಿಯಿಂದ ಸಾವಿತ್ರಿ ಬಾಯಿ ಫುಲೆರವರ ಜನ್ಮ ದಿನಾಚರಣೆ ಮತ್ತು 2026ರ ಅಕ್ಷರ ದವ್ವ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶಿಕ್ಷಕಿ ಸುಮಾ ಮಾತನಾಡಿ, ಮಹಾರಾಷ್ಟ್ರದಲ್ಲಿ ಮಹಿಳಾ ಕೇಶಮುಂಡನಕ್ಕೆ ಅಂತ್ಯ ಹಾಡಿದ ಧೀರ ಮಹಿಳೆ ಫುಲೆಯವರು, ಪ್ಲೇಗ್ ಮಹಾಮಾರಿ ವಿರುದ್ಧ ಹೋರಾಡುವುದರ ಜೊತೆಗೆ ಅದೇ ಪ್ಲೇಗ್‌ಗೆ ಸಾವನ್ನಪ್ಪಿದ್ದಾರೆಯೇ ಹೊರತು, ಅವರಿನ್ನು ನಮ್ಮ ನಿಮ್ಮ ನಡುವೆ ಹಾಕಿಕೊಟ್ಟ ಮಾರ್ಗದರ್ಶನದ ಮೂಲಕ ಜೀವಂತವಾಗಿದ್ದಾರೆ ಎಂದರು.

ಜನಪರ ಸಾಹಿತ್ಯ ಸಂಘದ ಮಹೇಶ್ ಚಿಕ್ಕಲ್ಲೂರು ಮಾತನಾಡಿ ಇಂದಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ, ಶಿಕ್ಷಕರು ವಿದ್ಯಾರ್ಥಿಗಳನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ತಿದ್ದಬೇಕು, ಆದರೀಗ ತಂದೆ ಮಕ್ಕಳ ನಡುವೆ ವೈಷಮ್ಯಗಳು, ಗಂಡ ಹೆಂಡತಿ ನಡುವೆ ವೈಷಮ್ಯಗಳು ಯಥೇಚ್ಛವಾಗಿ ನಡೆಯುತ್ತಿದ್ದು ವಿದ್ಯಾರ್ಥಿಗಳು ಅಂತಹ ಘಟನೆಗಳನ್ನೇ ಮಾದರಿಯನ್ನಾಗಿಟ್ಟುಕೊಳ್ಳುವ ಸ್ಥಿತಿಗೆ ಬಂದಿದೆ ಎಂದು ಬೇಸರಿಸಿದರು.


ಹ್ಯಾಂಡ್‌ಪೋಸ್ಟ್‌ನ ತಾರಕ ಫಂಕ್ಷನ್ ಹಾಲ್‌ನಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕರ ಫೆಡರೇಷನ್, ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ, ಜಿಲ್ಲಾ ಮತ್ತು ತಾಲೂಕು ಘಟಕದ ವತಿಯಿಂದ ಸಾವಿತ್ರಿ ಬಾಯಿ ಫುಲೆರವರ ಜನ್ಮ ದಿನಾಚರಣೆ ಮತ್ತು 2026ರ ಅಕ್ಷರದವ್ವ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಇದೇ ಸಂದರ್ಭದಲ್ಲಿ ಅಕ್ಷರದವ್ವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಸಂಪನ್ಮೂಲ ಸಮನ್ವಯಾಧಿಕಾರಿ ಕೃಷ್ಣಯ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಜಗದೀಶ್, ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾಧ್ಯಕ್ಷೆ ಸರಸ್ವತಿ, ಕಾರ್ಯದರ್ಶಿ ಸಿಲಿವಿಯಾ, ತಾಲೂಕು ಅಧ್ಯಕ್ಷೆ ಪಿ.ಪ್ರತಿಭಾ, ಬಬಿತಾ ರಾಣಿ, ಸುಮಾ, ಯಶ್ವಂತ್ ಕುಮಾರ್, ವೀಣಾ, ದೊರೆಸ್ವಾಮಿ, ರೇಖಾ, ಪುಟ್ಟಾಚಾರಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಿ. ಪ್ರಮೋದ್‌ಕುಮಾರ್ ಇದ್ದರು.


ಮೈಸೂರು ಮಿತ್ರ

ಮನರೇಗಾ ಮರು ಜಾರಿಗೆ ಆಗ್ರಹಿಸಿ

ಅಹೋರಾತ್ರಿ ಧರಣಿ ಬಳಿಕ ಡಿಸಿಗೆ ಕಾಂಗ್ರೆಸ್ ಮುಖಂಡರ ಮನವಿ

ಮೈಸೂರು,ಫೆ.2(ಎಂಟಿವೈ)– ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಮರು ಸ್ಥಾಪಿಸುವಂತೆ ಆಗ್ರಹಿಸಿ ಮೈಸೂರಿನ ಪುರಭವನದ ಆವರಣದಲ್ಲಿ ಅಹೋರಾತ್ರಿ ಸತ್ಯಾಗ್ರಹ ನಡೆಸಿದ್ದ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಧರಣಿ ಅಂತ್ಯಗೊಳಿಸಿದರು.

ಮೈಸೂರಿನ ಪುರಭವನದ ಆವರಣದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ ಸೇರಿದಂತೆ ಜನಪ್ರತಿನಿಧಿಗಳು, ಪಕ್ಷದ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು. ರಾತ್ರಿಯಿಡೀ ಧರಣಿ ನಡೆಸಿದ್ದ ಕಾಂಗ್ರೆಸ್ ಮುಖಂಡರಿಂದ ಮನವಿ ಸ್ವೀಕರಿಸಲು ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಜಿಪಂ ಸಿಇಓ ಯುಕೇಶ್ ಹಾಗೂ ಇನ್ನಿತರರು ಬಂದು ಮನವಿ ಸ್ವೀಕರಿಸಿದರು.



ಮೈಸೂರಿನ ಪುರಭವನದ ಆವರಣದಲ್ಲಿ ಮನರೇಗಾ ಯೋಜನೆ ಮರು ಜಾರಿಗೆ ಒತ್ತಾಯಿಸಿ ಅಹೋರಾತ್ರಿ ಧರಣಿ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ ವಿ.ಎಸ್.ಉಗ್ರಪ್ಪ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಈ ಹಿಂದೆ ಪ್ರಧಾನಿ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿದ್ದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಜನರ ಜೀವನಾಡಿಯಾಗಿತ್ತು. ಮನರೇಗಾ ಯೋಜನೆಯಿಂದ ದೇಶದಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ಹಲವು ಅಭಿವೃದ್ಧಿ ಕಾರ್ಯ ನಡೆದಿವೆ. ಕೆರೆ ಅಭಿವೃದ್ಧಿ, ರಸ್ತೆ ಅಭಿವೃದ್ಧಿ, ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಅಭಿವೃದ್ಧಿ ಕಾರ್ಯ ನಡೆಸಲಾಗಿದ್ದು, ಇದರಿಂದ ಗ್ರಾಮೀಣ ಪ್ರದೇಶದ ಸ್ಥಿತಿಗತಿ ಸುಧಾರಣೆಯಾಗಿವೆ. ಆದರೆ ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿ ಮನರೇಗಾ ಯೋಜನೆಯನ್ನು ವಿಬಿ ಜಿ ರಾಮ್ ಜೀ ಎಂದು ಬದಲಾಯಿಸುವ ಮೂಲಕ ಗ್ರಾ.ಪಂ.ಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಂಚು ನಡೆಸಿದೆ. ಅಲ್ಲದೆ, ಗ್ರಾಮೀಣಾಭಿವೃದ್ಧಿಗೆ ನೀಡುವ ಅನುದಾನದ ಮೊತ್ತವನ್ನು ಕಡಿತಗೊಳಿಸಿದೆ ಎಂದು ಕಿಡಿಕಾರಿದರು.

ಮನರೇಗಾ ಯೋಜನೆ ಮರು ಸ್ಥಾಪನೆಗೆ ಆಗ್ರಹಿಸಿ ಮೈಸೂರಲ್ಲಿ ಸಾಂಕೇತಿಕವಾಗಿ ಅಹೋರಾತ್ರಿ ಧರಣಿ ನಡೆಸಲಾಗಿದೆ. ಇಂದು ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಮನವಿ ಸಲ್ಲಿಸಲಾಗಿದೆ. ನಮ್ಮ ಒತ್ತಾಯ ಮನರೇಗಾ ಯೋಜನೆ ಮರು ಜಾರಿಗೊಳಿಸಬೇಕು. ಯುಪಿಎ ಸರ್ಕಾರ ಜಾರಿಗೆ ತಂದ ನಿಯಮಗಳನ್ನೇ ಮುಂದುವರೆಸಿ, ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿ ಪಡಿಸಿ, ಅಲ್ಲಿನ ಜನ ಹಾಗೂ ರೈತರ ಬದುಕನ್ನು ಹಸನುಗೊಳಿಸಲು ಮನರೇಗಾ ಯೋಜನೆ ಅವಶ್ಯಕತೆಯ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಮನರೇಗಾ ಯೋಜನೆ ಮರುಜಾರಿಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮುಂದುವರೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮುಖಂಡರಾದ ಎಂ.ಶಿವಣ್ಣ, ಜೆ.ಗೋಪಿ, ಜೆ.ಜೆ.ಆನಂದ್, ಲೋಕೇಶ್, ಡೈರಿ ವೆಂಕಟೇಶ್, ನಾಗೇಶ್, ಭಾಸ್ಕರ್ ಈಶ್ವರ್ ಚಕ್ಕಡಿ, ಮಂಜುಳಾ ಮಂಜುನಾಥ್, ಕಮಲಾ ಅನಂತರಾಮು, ಮಂಜುಳಾ, ಭವ್ಯ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಂಗಾತ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ದ್ರೌಪದಿ–2 (ತ)	4 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ರಕ್ತ ಕಾಶ್ಮೀರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಬಿಜೆಪಿ ಏಜೆಂಟಂತೆ ವರ್ತಿಸುತ್ತಿರುವ ಎನ್‌ಸಿಬಿ: ಡ್ರಗ್ಸ್ ಬಗ್ಗೆ ಸುಳ್ಳು ಮಾಹಿತಿ

ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಆರೋಪ



ಎಂ.ಲಕ್ಷ್ಮಣ್

ಮೈಸೂರು,ಫೆ.2(ಜಿಎ)–ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ (ಎನ್‌ಸಿಬಿ) ಬಿಜೆಪಿಯ ಏಜೆಂಟ್ ರೀತಿ ವರ್ತಿಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಟ್ಟ ಹೆಸರು ತರುವ ದುರುದ್ದೇಶದಿಂದ ಮೈಸೂರನ್ನೇ ಗುರಿಯಾಗಿಟ್ಟುಕೊಂಡು ಡ್ರಗ್ಸ್ ತಯಾರಿಕಾ ಘಟಕ ನಡೆಯುತ್ತಿದೆ ಎಂದು ಷಡ್ಯಂತ್ರ ಮಾಡುತ್ತಿದೆ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.28ರಂದು ಎನ್‌ಸಿಬಿ ಅಧಿಕಾರಿಗಳು ರಾಜಸ್ಥಾನದ ಜೆಲೋರ್ ಜಿಲ್ಲೆಯಲ್ಲಿ ಕರ್ನಾಟಕದ ನೋಂದಣಿಯ ವಾಹನ (ಕೆಎ20, ಪಿ–6767) ಟೊಯೋಟಾ ಫಾರ್ಚೂನರ್ ಕಾರನ್ನು ತಪಾಸಣೆ ಮಾಡಿ ಒರ್ವನನ್ನು ವಶಪಡಿಸಿಕೊಂಡರು. ಈ ವೇಳೆ ಅದರಲ್ಲಿ ಕೆಲವು ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಅದರಲ್ಲಿ ಮಾದಕ ವಸ್ತು ಎನ್ನುವ ಯಾವುದೇ ವಸ್ತುಗಳು ಸಿಕ್ಕಿಲ್ಲ. ಆದರೆ, 29ರಂದು ರಾಜಸ್ಥಾನ ಮತ್ತು ಗುಜರಾತ್ ಎನ್‌ಸಿಬಿ ಅಧಿಕಾರಿಗಳು ಬೆಂಗಳೂರಿನ ಎನ್‌ಸಿಬಿ ಅಧಿಕಾರಿಗಳ ಜೊತೆಗೂಡಿ ಮೈಸೂರಿಗೆ ಬಂದು ಆತನ ಸಂಬಂಧಿ ಗಣಪತಿಲಾಲ್ ಅನ್ನು ಬಂಧಿಸಿ, ಮೈಸೂರಿನ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಆರೋಪಿಯನ್ನು ಒಪ್ಪಿಸುವಂತೆ ಸಲ್ಲಿಸಿರುವ ರಿಮ್ಯಾಂಡ್ ಕಾಪಿಯಲ್ಲಿ ಸುಳ್ಳು ಸ್ಪಷ್ಟವಾಗಿ ತಿಳಿಯುತ್ತದೆ ಎಂದರು.

ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಮ್ಯಾಂಡ್ ಕಾಪಿಯಲ್ಲಿ ರಾಜಸ್ಥಾನದ ಜೆಲೋರ್ ಜಿಲ್ಲೆಯಲ್ಲಿ ಗಣಪತಿ ಲಾಲ್ ಸೆರೆ ಸಿಕ್ಕಾಗ ಆತನ ವಾಹನದಲ್ಲಿ 41.21 ಕೆಜಿ ಕ್ರಿಸ್ಟಲೈನ್ ಹಾಗೂ 1.78 ಕೆಜಿ ಮೆಫೆಡ್ರೋನ್ (ಎಂಡಿ) ರೀತಿಯ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾತ್ರ ತಿಳಿಸಿದ್ದಾರೆ. ಕ್ರಿಸ್ಟಲೈನ್ ಎಂಬುದು ಸೆಮಿಕಂಡಕ್ಟರ್, ಮೈಕ್ರೋಚಿಪ್ ತಯಾರಿಸಲು ಬಳಸುವ ವಸ್ತು ಅಷ್ಟೆ. ಆದರೆ, ಅಲ್ಲಿ ಎಲ್ಲಿಯೂ ಮೈಸೂರಿನಲ್ಲಿ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿಲ್ಲ. ಆದರೆ, ಪತ್ರಿಕಾ ಪ್ರಕಟಣೆಯಲ್ಲಿ ಮಾತ್ರ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಉತ್ಪಾದನಾ ಘಟಕ ನಡೆಸುತ್ತಿರುವ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಎನ್‌ಸಿಬಿ ಅಧಿಕಾರಿಗಳು ಇಲ್ಲಿನ ರಾಸಾಯನಿಕ ಉತ್ಪಾದನಾ ಕೈಗಾರಿಕೆ ಮೇಲೆ ದಾಳಿ ನಡೆಸಿ, ಅತ್ಯಾಧುನಿಕ ಉಪಕರಣಗಳನ್ನು ಒಳಗೊಂಡ ರಾಸಾಯನಿಕಗಳನ್ನು ತಯಾರಿಸುವ ಸೋಗಿನಲ್ಲಿ ಮಾದಕ ದ್ರವ್ಯ ತಯಾರಿಸುತ್ತಿದ್ದ ಶಂಕೆ ಮೇಲೆ ಸುಮಾರು 500 ಕೆಜಿ ರಾಸಾಯನಿಕವನ್ನು ವಶಕ್ಕೆ ಪಡಿಸಿಕೊಳ್ಳಲಾಗಿದೆ ಎಂದು ಸುಳ್ಳು ಮಾಹಿತಿ ನೀಡಿ ಎನ್‌ಸಿಬಿ ಮೈಸೂರಿಗೆ ಕೆಟ್ಟ ಹೆಸರು ತರುತ್ತಿದೆ ಎಂದು ಆರೋಪಿಸಿದರು.

ಈ ಪ್ರತಿಕಾ ಪಕ್ರಟಣೆಯನ್ನು ಇಟ್ಟುಕೊಂಡು ಬಿಜೆಪಿ ಅವರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಮೈಸೂರು ಸಂಸದರಿಗೆ ತಲೆಬುಡ ಗೊತ್ತಿಲ್ಲದೇ ಸುಳ್ಳು ಮಾಹಿತಿ ನೀಡುತ್ತಾರೆ. ಅವರ ಹಿರಿಯರು ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅವರ ಮರ್ಯಾದೆಯನ್ನು ಇವರು ಕಳೆಯುತ್ತಾರೆ. ಇವರು ಬಂದ ನಂತರ ಮೈಸೂರು–ಕೊಡಗಿಗೆ ಬಂದ ಕುಶಾಲನಗರ ರೈಲ್ವೆ ಯೋಜನೆ, ಪ್ರಸಾದ್ ಯೋಜನೆ, ಯೂನಿಟಿ ಮಾಲ್ ಸೇರಿದಂತೆ ಅನೇಕ ಯೋಜನೆಗಳು ಸ್ಥಗಿತಗೊಂಡಿವೆ. ಡ್ರಗ್ ಹಬ್ ಇರುವುದು ಉತ್ತರ ಭಾರತದಲ್ಲಿ. ಆದರೆ ಮೈಸೂರು ಎಂದು ಸುಳ್ಳು ಹೇಳುತ್ತಿದ್ದಾರೆ. ಈ ಹಿಂದಿನ ಎಂಪಿಗಿಂತ ಇವರು ಸುಳ್ಳು ಹೇಳುವುದರಲ್ಲಿ ಮುಂದೆ ಸಾಗುತ್ತಿದ್ದಾರೆ ಎಂದು ಕಿಡಿಕಾರಿದರು.

ಸುದರ್ಶನ ವಿದ್ಯಾಸಂಸ್ಥೆಯಲ್ಲಿ ಪ್ರತಿಭಾ ಪುರಸ್ಕಾರ



ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು

ಮೈಸೂರು, ಫೆ.2(ಎಂಕೆ)– ಮೈಸೂರು ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿರುವ ಸುದರ್ಶನ್ ವಿದ್ಯಾ ಸಂಸ್ಥೆಯಲ್ಲಿ 2024–25ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು.

ವಿದ್ಯಾರ್ಥಿಗಳನ್ನು ಅಭಿನಂದಿಸಿದ ಸಂಸ್ಥೆಯ ಮುಖ್ಯಸ್ಥ ಎನ್.ಶ್ರೀನಿವಾಸನ್ ಮಾತನಾಡಿ, ಶಿಕ್ಷಣವೆಂಬುದು ಪ್ರತಿ ವಿದ್ಯಾರ್ಥಿಗೂ ಅತಿ ಮುಖ್ಯವಾಗಿದ್ದು, ಉತ್ತಮ ವಿದ್ಯಾಭ್ಯಾಸದೊಂದಿಗೆ ಸಾಧನೆಗೈದು ಉತ್ತಮ ಫಲಿತಾಂಶ ಪಡೆದು ಸಮಾಜದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸುವ ಮೂಲಕ ಹೆತ್ತವರು ಹಾಗೂ ಶಾಲಾ–ಕಾಲೇಜಿನವರಿಗೂ ಕೀರ್ತಿ ತರುವಂತೆ ಕಿವಿಮಾತು ಹೇಳಿದರು.

ವಿದ್ಯಾಭ್ಯಾಸದ ಅವಧಿಯಲ್ಲಿ ಓದಿನತ್ತ ತೋರಿಸುವ ಉದಾಸೀನತೆ ಭವಿಷ್ಯದಲ್ಲಿ ಭಾರೀ ತೊಂದರೆಗಳಿಗೆ ಕಾರಣವಾಗಲಿದೆ. ಆದ್ದರಿಂದ ಓದಿನತ್ತ ಗಮನಹರಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದರಿಂದ ವಿದ್ಯಾರ್ಥಿಗಳು ಇನ್ನಷ್ಟು ಕಷ್ಟಪಟ್ಟು ಓದಬೇಕು. ಹಾಗೆಯೇ ಜನ್ಮ ನೀಡಿದ ತಂದೆ–ತಾಯಿ, ವಿದ್ಯೆ ಕಲಿಸಿದ ಗುರುಗಳು ಹಾಗೂ ಕಷ್ಟಕಾಲದಲ್ಲಿ ನೆರವಾದ ಸ್ನೇಹಿತರನ್ನು ಎಂದಿಗೂ ಮರೆಯಬಾರದು ಎಂದರು. ಶಾಲೆಯ ಮುಖ್ಯ ಶಿಕ್ಷಕ ಸುರೇಶ್‌ಕುಮಾರ್, ಶಿಕ್ಷಣ ಸಂಘದ ನೇಹಾ ಪ್ರಕಾಶ್, ಮುಖ್ಯೋಪಾಧ್ಯಾಯಿನಿ ವಿನುತ, ಮುಖ್ಯ ಶಿಕ್ಷಿ ಉಮಾ, ಎಫ್‌ಡಿಎ ಪ್ರವೀಣ್ ಮತ್ತಿತರರಿದ್ದರು.

ಕಸ್ತೂರ್‌ಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯದಲ್ಲಿ ಶಾಲೆಗಳೆಡೆಗೆ ವಚನಗಳ ನಡಿಗೆ

ಮೈಸೂರು, ಫೆ. 2– ವಚನಗಳ ಬೆಳಕಿನಲ್ಲಿ ಮೌಲ್ಯ ಶಿಕ್ಷಣದ ಹೊಸ ದಾರಿ ಇದೆ ಎಂದು ಸಾಹಿತಿ ಎಂ.ಎ ನೀಲಾಂಬಿಕಾ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್‌ನ ವತಿಯಿಂದ ಎಚ್.ಎಸ್. ಮಹೇಶ್ವರಿ, ಎಚ್.ಎಸ್. ರಾಜು ಹಾಗೂ ಸಾಹಿತಿ ಎಂ.ಎ. ನೀಲಾಂಬಿಕಾ ಅವರ ದತ್ತಿ ಅಂಗವಾಗಿ ಮೈಸೂರು ತಾಲೂಕು ಕೇರ್ಗಳ್ಳಿ ಕಸ್ತೂರ್‌ಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ 124 ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮದಲ್ಲಿ ಮಾತನಾಡಿ, ಸತ್ಯ, ಪ್ರಾಮಾಣಿಕತೆ, ಶ್ರಮ ಹಾಗೂ ಸಮಾನತೆಯ ಮೌಲ್ಯಗಳನ್ನು ಬದುಕಿನ ಮೂಲಸಿದ್ಧಾಂತವಾಗಿ ಸಾರುವ ವಚನ ಸಾಹಿತ್ಯವನ್ನು ಮಕ್ಕಳು ಹೃದಯದಲ್ಲಿ ಇಟ್ಟುಕೊಂಡು ಜೀವನ ನಿರ್ವಹಣೆಗೆ ಬಳಸಿಕೊಳ್ಳಬೇಕು. ವಚನ ಸಾಹಿತ್ಯವು ಮಕ್ಕಳಲ್ಲಿ ಸಂಸ್ಕಾರವನ್ನು ರೂಡಿಸಿ, ಬದುಕಿಗೆ ದಿಕ್ಕು ನೀಡುವ ಶಕ್ತಿಯಾಗಿದೆ. ಪಠ್ಯ ವಿಷಯಗಳಿಗಿಂತಲೂ ಜೀವನ ಮೌಲ್ಯಗಳನ್ನು ಕಲಿಸುವಲ್ಲಿ ವಚನಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ತಿಳಿಸಿದರು.



ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

ನಿವೃತ್ತ ಅಭಿಯಂತರ ಎಚ್.ಎಸ್. ರಾಜು ಮಾತನಾಡಿ, ಶಿಕ್ಷಣವೆಂದರೆ ಅಂಕಗಳ ಸೀಮಿತವಲ್ಲ; ಮೌಲ್ಯ ಶಿಕ್ಷಣವಿಲ್ಲದೆ ಶಿಕ್ಷಣ ಅಪೂರ್ಣ. ವಚನ ಸಾಹಿತ್ಯವು ಶಿಸ್ತು, ನೈತಿಕತೆ ಮತ್ತು ಮಾನವೀಯತೆಯನ್ನು ಮಕ್ಕಳಲ್ಲಿ ಬೆಳೆಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ವಚನ ಸಾಹಿತ್ಯವು ಸತ್ಯ ಮತ್ತು ಪ್ರಾಮಾಣಿಕತೆಯನ್ನೇ ಜೀವನದ ಉಸಿರಾಗಿ ಸಾರುತ್ತದೆ. ಮಹಾತ್ಮ ಗಾಂಧೀಜಿಯವರು ತಾವು ಮಾಡಿದ ತಪ್ಪನ್ನು ಅರಿತು ತಂದೆಗೆ ಕ್ಷಮೆಯಾಚಿಸಿ ಮತ್ತೆ ತಪ್ಪು ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ ಘಟನೆಯೇ ಅವರನ್ನು ಮಹಾತ್ಮರನ್ನಾಗಿಸಿತು. ಇದೇ ಆತ್ಮತತ್ವ ವಚನಗಳಲ್ಲೂ ಅಡಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಚನ ವಾಚನ ಮತ್ತು ಗಾಯನ ಮಾಡಿದ 20 ಹೆಣ್ಣು ಮಕ್ಕಳಿಗೆ ವಚನಗ್ರಾಮ ಪುಸ್ತಕ ಹಾಗೂ ವಚನ ದೀವಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಮೈಸೂರು ಜಿಲ್ಲಾ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ದತ್ತಿ ದಾಸೋಹಿ ಎಚ್.ಎಸ್ ಮಹೇಶ್ವರಿ, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಕೇಂದ್ರೀಯ ಸಂಚಾಲಕ ವಿ. ಲಿಂಗಣ್ಣ ಉಪಾಧ್ಯಕ್ಷ ಶಿವಪುರ ಉಮಾಪತಿ, ಸಿದ್ದೇಶ್ವರಿ, ಮುಖ್ಯಶಿಕ್ಷಕಿ ಎ.ಆರ್ ಅಂಬಿಕ ಸಹಶಿಕ್ಷಕರುಗಳಾದ ಎಂ. ಸುಚಿತ್ರ, ಎಚ್.ಕೆ ಸೌಮ್ಯ, ಕೆ.ಬಿ ಗೀತಾ, ಎಂ. ಅರ್ಪರ್ಣ, ಸುನಂದ, ದೇವಿಕ, ವಿ. ಸುಮ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.2– ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.4 ರಂದು ಬುಧವಾರ ಬೆಳಿಗ್ಗೆ 10 ಘಂಟೆಯಿಂದ ಸಂಜೆ 6 ಘಂಟೆಯವರೆಗೆ ದೇವಲಾಪುರ, ಕಿರಾಳು, ಚಿಕ್ಕೇಗೌಡನಹುಂಡಿ, ಜಂತಗಳ್ಳಿ, ಸಜ್ಜೆಹುಂಡಿ, ಮರಿಗೌಡನಹುಂಡಿ, ಟಿ.ಎಂ ಹುಂಡಿ, ರಾಯನಹುಂಡಿ, ಸೋಮೇಶ್ವರಪುರ, ಆಯರಹಳ್ಳಿ, ಕುಂಬರಹಳ್ಳಿ, ಕುಂಬ್ರಳ್ಳಿ ಮಠ, ಬಸಳ್ಳಿ ಹುಂಡಿ, ಹಡಜನ, ಮಾರಶೆಟ್ಟಿಹಳ್ಳಿ, ಪ್ರಶಾಂತ್ ಛಾಯಾ ಬಡಾವಣೆ, ಶ್ರೀಷಾ ಹಿಲ್ ವ್ಯೂ ಬಡಾವಣೆ, ಮಲ್ಲರಾಜನಹುಂಡಿ, ಹದಿನಾರು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಪಿಲ್ಲಹಳ್ಳಿ, ದಂಡಿಕೆರೆ, ಮೋಸಂಬಾಯನಹಳ್ಳಿ, ವರುಣ ಲೇಔಟ್, ವರಕೋಡು ಗೇಟ್, ವರಕೋಡು ಪೇಪರ್ ಫ್ಯಾಕ್ಟರಿ, ವರಕೋಡು, ಹೊಸಕೋಟೆ, ಮೊರಾರ್ಜಿ ದೇಸಾಯಿ ಶಾಲೆ ಸುತ್ತ–ಮುತ್ತಲಿನ ಪ್ರದೇಶಗಳು.

ಎಸ್.ಎಸ್ ನಗರ ಫೀಡರ್ ವ್ಯಾಪ್ತಿಯಲ್ಲಿ ಮಣಿಪಾಲ್ ಆಸ್ಪತ್ರೆ ಬಳಿ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಕಾಮಗಾರಿ ನಿಮಿತ್ತ ಕೆ.ಆರ್ ಮಿಲ್ ಕಾಲೋನಿ, ಸಿದ್ದಲಿಂಗಪುರ, ನಾಗನಹಳ್ಳಿ, ಲಕ್ಷ್ಮಿಪುರಂ, ಕಳಸ್ತವಾಡಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ವಾಣಿಜ್ಯ ಪರೀಕ್ಷೆ ಉತ್ತರ ಪತ್ರಿಕೆ ಮೌಲ್ಯಮಾಪಕರ ನೋಂದಣಿ

ಮೈಸೂರು,ಫೆ.2– 2025–2026 ನೇ ಶೈಕ್ಷಣಿಕ ಸಾಲಿನಲ್ಲಿ ವಾಣಿಜ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪಕರ ನೋಂದಣಿಗಾಗಿ ಫೆ.4 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ನೋಂದಣಿಯಾದವರು ಹಾಗೂ ನೇರವಾಗಿ ಈಗಾಗಲೇ ನೋಂದಣಿಯಾದ ಸರ್ಕಾರಿ ನೌಕರರು ತಮ್ಮ ವೈಯಕ್ತಿಕ ಮಾಹಿತಿಯನ್ನು ಕಡ್ಡಾಯವಾಗಿ ಲಾಗಿನ್‌ನಲ್ಲಿ ಅಪ್‌ಡೇಟ್ ಮಾಡುವುದು. ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು, ಬೋಧಕರು ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಆನ್‌ಲೈನ್ ಮೂಲಕ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣದಲ್ಲಿ (https:/kseab.karnataka.gov.in) ರಲ್ಲಿ ಕಡ್ಡಾಯವಾಗಿ ಸಂಸ್ಥೆಯ ಲಾಗಿನ್ ಮೂಲಕ ಪ್ರಾಂಶುಪಾಲರು/ಬೋಧಕರು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಮೌಲ್ಯಮಾಪನ ಕಾರ್ಯಕ್ಕೆ ಆದೇಶ ನೀಡಲ್ಪಟ್ಟ ಮೌಲ್ಯಮಾಪಕರಿಗೆ ನಿಗದಿತ ಸಮಯಕ್ಕೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ ಸಂಸ್ಥೆಯ ಮುಖ್ಯಸ್ಥರು ಬಿಡುಗಡೆಗೊಳಿಸುವುದು. ಒಂದು ವೇಳೆ ಮೌಲ್ಯಮಾಪಕರನ್ನು ಬಿಡುಗಡೆಗೊಳಿಸದಿದ್ದಲ್ಲಿ ಅಂತಹ ಸಂಸ್ಥೆಯ ಮುಖ್ಯಸ್ಥರ ಮೇಲೆ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮಂಡಲಿಯ ಸಹಾಯವಾಣಿ ಸಂಖ್ಯೆ:080–23310075/76 ಮತ್ತು ಇಮೇಲ್ id:adpisvsection@gmail.com ಅನ್ನು ಸಂಪರ್ಕಿಸಬಹುದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.2– ವಿ.ವಿ.ಮೊಹಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ಭೂಗತಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಫೆ.3 ರಂದು ಬೆಳಗ್ಗೆ 10 ಘಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆ.ಐ.ಎ.ಡಿ.ಬಿ ಲೇಔಟ್, ಶೇಷಾದ್ರಿಪುರಂ ಕಾಲೇಜು, ಚನ್ನಮ್ಮ ಸರ್ಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರಿನ ಸರ್ಕಾರಿ ಕಚೇರಿಗಳ ಕಾಂಪೌಂಡ್ ಮೇಲೆ ರಾರಾಜಿಸುತ್ತಿವೆ ಸ್ವಚ್ಛತೆಯ ಸಂದೇಶಗಳು!





ಕಾಂಪೌಂಡ್ ಮೇಲೆ ಚಿತ್ರಿಸಲಾಗಿರುವ ಸ್ವಚ್ಛತೆಯ ಸಂದೇಶಗಳು

ಮೈಸೂರು, ಫೆ.2(ಎಂಕೆ)– ಮೈಸೂರಿನಲ್ಲಿರುವ ಸರ್ಕಾರಿ ಕಚೇರಿಗಳ ಕಾಂಪೌಂಡ್ ಗೋಡೆಗಳು ಚಿತ್ರಕಲೆಯಿಂದ ಕಂಗೊಳಿಸುತ್ತಿದ್ದು, 'ಸ್ವಚ್ಛ–ಮೈಸೂರು... ಸಮರ್ಥ–ಮೈಸೂರು' ಸಂದೇಶ ಎಲ್ಲೆಡೆ ಶೋಭಿಸುತ್ತಿದೆ.

ಸ್ವಚ್ಛ ಸರ್ವೇಕ್ಷಣ್ 2025–2026ರ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 32 ಲಕ್ಷ ರೂ.ವೆಚ್ಚದಲ್ಲಿ ಗೋಡೆ ಚಿತ್ರಕಲೆಯ ಮೂಲಕ ಪರಿಸರ ಜಾಗೃತಿ ದೃಶ್ಯಗಳು ಹಾಗೂ ಸ್ವಚ್ಛತಾ ಸಂದೇಶಗಳನ್ನು ಸಾರಲಾಗುತ್ತಿದೆ.

27 ಸಾವಿರ ಅಡಿ ವಿಸ್ತೀರ್ಣದ ಸರ್ಕಾರಿ ಕಚೇರಿಗಳ ಕಾಂಪೌಂಡ್‌ಗಳಲ್ಲಿ ಜಾಗೃತಿ ಸಂದೇಶಗಳನ್ನು ಬಿಂಬಿಸಲಾಗುತ್ತಿದ್ದು, ಕಲಾವಿದರ ಕುಂಚದಲ್ಲಿ ಮೂಡಿಬಂದಿರುವ ಚಿತ್ರಕಲೆ ಸಂದೇಶದ ಜೊತೆಗೆ ಮೈಸೂರಿಗೆ ಹೊಸ ಮೆರಗು ನೀಡಿರುವಂತೆ ಕಾಣುತ್ತಿದೆ.

ನಗರಪಾಲಿಕೆ ಕೇಂದ್ರ ಕಚೇರಿ ಸುತ್ತಲಿನ ಕಾಂಪೌಂಡ್, ಸಂಸ್ಕೃತ ಪಾಠಶಾಲೆ, ಕಾಡಾ ಕಚೇರಿ, ಅರಮನೆ ಸುತ್ತಮುತ್ತ, ಕುವೆಂಪುನಗರ, ರಾಮಕೃಷ್ಣನಗರ ಸೇರಿದಂತೆ ನಗರದ ಕೇಂದ್ರ ಭಾಗದಲ್ಲಿರುವ ಸರ್ಕಾರಿ ಕಚೇರಿಗಳ ಕಾಂಪೌಂಡ್‌ಗಳನ್ನು ಆಯ್ಕೆ ಮಾಡಿಕೊಂಡು ಚಿತ್ರಕಲೆಯ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತಾ ಅರಿವು ಮೂಡಿಸಲಾಗುತ್ತಿದೆ.

20ಕ್ಕೂ ಹೆಚ್ಚು ನುರಿತ ಕಲಾವಿದರು ಕಾಂಪೌಂಡ್ ಗೋಡೆಗಳ ಚಿತ್ರಕಲೆ ಬಿಡಿಸುತ್ತಿದ್ದು, ಸ್ವಚ್ಛ ಪರಿಸರ, ನೀರಿನ ಮಿತ ಬಳಕೆ, ಹಸಿಕಸ ಮತ್ತು ಒಣಕಸ ಬೇರ್ಪಡಿಸುವುದು ಸೇರಿದಂತೆ ಹತ್ತಾರು ಬಗೆಯ ಚಿತ್ರಗಳು ನೋಡುಗರ ಆಕರ್ಷಣೆಯಾಗಿವೆ.

ಸ್ವಚ್ಛ ಸರ್ವೇಕ್ಷಣ್ ಹವಾ: ಕಳೆದ 10 ದಿನಗಳಿಂದ ಮೈಸೂರಿನ ವಾತಾವರಣ ಬದಲಾಗುತ್ತಿದ್ದು, ಮೈಸೂರಲ್ಲಿ ಸ್ವಚ್ಛ ಸರ್ವೇಕ್ಷಣೆ ಹವಾ ಕಾಣುತ್ತಿದೆ. ಪ್ರಮುಖ ರಸ್ತೆಗಳು ಸ್ವಚ್ಛತೆಯಿಂದ ಕೂಡಿದ್ದರೆ, ಸರ್ಕಾರಿ ಕಚೇರಿ ಕಾಂಪೌಂಡ್‌ಗಳು ಹೊಸ ಆಕರ್ಷಣೆಯಾಗಿ ಕಾಣುತ್ತಿವೆ. ಇದೇ ರೀತಿಯ ಖಾಸಗಿ ಸಂಸ್ಥೆಗಳ ಕಾಂಪೌಂಡ್‌ಗಳ ಮೇಲೂ ಸ್ವಚ್ಛತಾ ಜಾಗೃತಿಯ ಚಿತ್ರಕಲೆಗಳಿದ್ದರೆ, ಸಾರ್ವಜನಿಕರಲ್ಲಿ ಇನ್ನಷ್ಟು ಅರಿವು ಮೂಡಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಗರ ಪಾಲಿಕೆ ಅಧಿಕಾರಿಗಳು ಚಿಂತಿಸಬೇಕು ಎಂದು ಕೆಲ ಮೈಸೂರಿಗರು ಅಭಿಪ್ರಾಯಪಟ್ಟಿದ್ದಾರೆ.

ಸ್ವಚ್ಛತಾ ಪ್ರಯತ್ನ: ಮೈಸೂರನ್ನು ಮತ್ತೆ ದೇಶದ ನಂಬರ್ ಓನ್ ಸ್ವಚ್ಛ ನಗರವನ್ನಾಗಿಸುವ ನಿಟ್ಟಿನಲ್ಲಿ ಹತ್ತು–ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅವುಗಳಲ್ಲಿ ಗೋಡೆ ಚಿತ್ರಕಲೆಯೂ ಒಂದಾಗಿದೆ. ಸ್ವಚ್ಛಾ ಭಾರತ್ ಮಿಷನ್ ಅಡಿಯಲ್ಲಿ 32 ಲಕ್ಷ ರೂ.ವೆಚ್ಚದಲ್ಲಿ ಚಿತ್ರಕಲೆ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಸ್ವಚ್ಛ ಸರ್ವೇಕ್ಷಣೆ ನೋಡಲ್ ಅಧಿಕಾರಿ ಮೃತ್ಯಂಜಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಶ್ರೀಗಂಧ ಬೆಳೆಗಾರರ ಸಮಸ್ಯೆ ನಿವಾರಣೆಗೆ ಶ್ರೀಗಂಧ ಅಭಿವೃದ್ಧಿ ಮಂಡಳಿ ಸ್ಥಾಪನೆ

ಮೈಸೂರು, ಫೆ.2(ಜಿಎ)–ಕರ್ನಾಟಕ ರಾಜ್ಯದ ಶ್ರೀಗಂಧ ಬೆಳೆಗಾರರು ವರ್ಷಗಳಿಂದ ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಶ್ರೀಗಂಧ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿರುವುದು ಸ್ವಾಗತಾರ್ಹ ಹಾಗೂ ಐತಿಹಾಸಿಕ ನಿರ್ಧಾರವಾಗಿದೆ ಎಂದು ಮೈಸೂರು ಮತ್ತು ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಮೈರಾ ಸ್ಕೂಲ್ ಆಫ್ ಬಿಸಿನೆಸ್ ಆವರಣದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘದೊಂದಿಗೆ ಸಭೆ ನಡೆಸಿದರು.

ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಮೈರಾ ಸ್ಕೂಲ್ ಆಫ್ ಬಿಸಿನೆಸ್ ಆವರಣದಲ್ಲಿ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನ ಕೃಷಿ ಬೆಳೆಗಾರರ ಸಂಘದ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಶ್ರೀಗಂಧ ಬೆಳೆಗಾರರು ಬೆಳೆ ನೋಂದಣಿ, ಕಾನೂನು ಜಟಿಲತೆ, ಭದ್ರತೆ ಕೊರತೆ, ನ್ಯಾಯಸಮ್ಮತ ಬೆಲೆ ಮತ್ತು ಮಾರುಕಟ್ಟೆ ವ್ಯವಸ್ಥೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಶ್ರೀಗಂಧ ಅಭಿವೃದ್ಧಿ ಸಮಿತಿ ಶಿಫಾರಸ್ಸುಗಳನ್ನು ಜಾರಿಗೆ ತರಲಾಗುವುದು ಎಂದರು.

ಬ್ರಿಟಿಷ್ ಕಾಲದ ಅರಣ್ಯ ಕಾಯಿದೆ ಮತ್ತು ನಿಯಮಗಳಿಗೆ ತಿದ್ದುಪಡಿಗಳನ್ನು ತ್ವರಿತವಾಗಿ ಮಾಡಿ, ಮಂಡಳಿಯ ಮೂಲಕ ಶ್ರೀಗಂಧ ಬೆಳೆಗಾರರಿಗೆ ತಾಂತ್ರಿಕ ಮಾರ್ಗದರ್ಶನ, ಗುಣಮಟ್ಟದ ಸಸಿಗಳ ಪೂರೈಕೆ, ವೈಜ್ಞಾನಿಕ ಕೃಷಿ ವಿಧಾನಗಳ ಅಳವಡಿಕೆ, ಬೆಳೆ ರಕ್ಷಣೆ ಹಾಗೂ ಆರ್ಥಿಕ ನೆರವು, ವಿಮೆ ಸೌಲಭ್ಯ, ಮಾರುಕಟ್ಟೆ ಸೌಲಭ್ಯ ಒದಗಿಸಲಾಗುವುದು. ಜೊತೆಗೆ, ಶ್ರೀಗಂಧದ ಅಕ್ರಮ ಕಟಾವು ಮತ್ತು ಕಳ್ಳತನ ತಡೆಯಲು ಸಮನ್ವಿತ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಶ್ರೀಗಂಧ ಅಭಿವೃದ್ಧಿ ಮಂಡಳಿಯ ಸಂಪೂರ್ಣ ರಚನೆ ಶೀಘ್ರವಾಗಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಬೆಳೆಗಾರರ ವಿವಿಧ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಕಾರ್ಯ ಯೋಜನೆ ರೂಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಬೆಳೆಗಾರರೊಂದಿಗೆ ನೇರ ಸಂವಾದ ನಡೆಸಲು ಕೇಂದ್ರ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳೊಡನೆ ಸಮನ್ವಯ ಮಾಡುವುದಾಗಿ ತಿಳಿಸಿದರು.

ರಾಜ್ಯದ ಶ್ರೀಗಂಧ ಸಂಪತ್ತಿನ ಸಂರಕ್ಷಣೆ ಮತ್ತು ಶ್ರೀಗಂಧ ಬೆಳೆಗಾರರ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಸರ್ಕಾರ ಬದ್ಧವಾಗಿದ್ದು, ಶ್ರೀಗಂಧ ಅಭಿವೃದ್ಧಿ ಮಂಡಳಿಯ ಮೂಲಕ ಈ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡುವ ವಿಶ್ವಾಸವನ್ನು ಸರ್ಕಾರ ವ್ಯಕ್ತಪಡಿಸಿದೆ ಎಂದರು.

ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಅಮರ ನಾರಾಯಣ, ಯು.ಶರಣಪ್ಪ, ನಿವೃತ್ತ ಎಸ್‌ಪಿ ಬಸವರಾಜಪ್ಪ, ಪಿ.ಭೈರಪ್ಪ, ನಾಗರಾಜ್ ಮಲ್ಲಾಡಿ, ವಿನಾಯಕ್ ಭಟ್, ನಾಗಣ್ಣ, ಅಂಬರೀಷ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮಹಿಳೆಯರ ರಕ್ಷಣೆಗೆ ಅಕ್ಕಪಡೆ ರೆಡಿ

• ಸಂಪೂರ್ಣ ಮಹಿಳಾ ಸಿಬ್ಬಂದಿಯುಳ್ಳ ಪಡೆ • ಪಿಂಕ್, ಬಿಳಿ ಬಣ್ಣದ ಜೀಪ್‌ನಲ್ಲಿ ಎಲ್ಲೆಡೆ ಗಸ್ತು • ಮಹಿಳಾ ಕಾಲೇಜು, ಜನನಿಬಿಡ ಪ್ರದೇಶದಲ್ಲಿ ಮಹಿಳಾ ಸುರಕ್ಷತೆ ಅರಿವು

ಮೈಸೂರು,ಫೆ.2(ಎಂಟಿವೈ)– ಮಹಿಳೆಯರ ಸುರಕ್ಷತೆಗೆ ಮೈಸೂರಲ್ಲಿ ಬರೀ ಮಹಿಳಾ ಸಿಬ್ಬಂದಿ ಒಳಗೊಂಡ 'ಅಕ್ಕಪಡೆ' ಸದ್ದಿಲ್ಲದೆ ಕಾರ್ಯಾರಂಭ ಮಾಡಿದ್ದು, ಈಗಾಗಲೇ ಮೈಸೂರು ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಶಾಲಾ–ಕಾಲೇಜು ಹಾಗೂ ಜನ ದಟ್ಟಣೆಯ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವ ಕಾಯಕದಲ್ಲಿ ತೊಡಗಿದೆ.

ಈಗಾಗಲೇ ರಾಜ್ಯಮಟ್ಟದಲ್ಲಿ ಅಕ್ಕಪಡೆಯನ್ನು ಸರ್ಕಾರ ಉದ್ಘಾಟಿಸಿದ್ದು, ಬೆಂಗಳೂರಲ್ಲಿ ಕಾರ್ಯೋನ್ಮುಖವಾಗಿದೆ. ಇದೀಗ ಸಾಂಸ್ಕೃತಿಕ ನಗರಿ ಮೈಸೂರಲ್ಲೂ ಅಕ್ಕಪಡೆ ಫೀಲ್ಡ್‌ಗೆ ಇಳಿದಿದ್ದು, ಹೆಣ್ಣು ಮಕ್ಕಳು, ಮಹಿಳೆಯರ ಸುರಕ್ಷತೆಗೆ ಪಣತೊಟ್ಟು ಕಾರ್ಯಾಚರಣೆ ಆರಂಭಿಸಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಕಾರದಿಂದ ಪೊಲೀಸ್ ಇಲಾಖೆ 'ಅಕ್ಕಪಡೆ'ಯನ್ನು ನಿರ್ವಹಿಸುತ್ತಿದೆ. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾರ್ಗದರ್ಶನದಲ್ಲಿ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್ ಇನ್ಸ್‌ಪೆಕ್ಟರ್ ಗೀತಾ ಮೇಲ್ವಿಚಾರಣೆಯಲ್ಲಿ ಅಕ್ಕಪಡೆ ಮಹಿಳೆಯರ ರಕ್ಷಣೆಗೆ ಮುಂದಾಗಿದೆ.



ಮಹಿಳೆಯರ ರಕ್ಷಣೆಗೆ 'ಅಕ್ಕಪಡೆ' ವಾಹನ.

ಪೀಡಕರಿಗೆ ಬೀಳಲಿದೆ ಒದೆ

ಶೀಘ್ರದಲ್ಲಿಯೇ ಅಕ್ಕಪಡೆ ಮಹಿಳೆಯರು, ವಿದ್ಯಾರ್ಥಿನಿಯರು, ಯುವತಿಯರನ್ನು ಪೀಡಿಸುವ ಚಾಳಿ ಹೊಂದಿರುವವರಿಗೆ ಅಕ್ಕಪಡೆ ತಕ್ಕ ಶಾಸ್ತಿ ನೀಡಲಿದೆ. ಜಿಲ್ಲೆಯಲ್ಲಿ ಸಂಚರಿಸುತ್ತಿರುವ 'ಅಕ್ಕಪಡೆ' ಈಗಷ್ಟೆ ಜನರಿಗೆ ಪರಿಚಯವಾಗುತ್ತಿದೆ. ನಿಗಧಿತ ವೇಳಾಪಟ್ಟಿಯಂತೆ ಅರಿವು ಕಾರ್ಯಕ್ರಮ ಪೂರ್ಣಗೊಂಡ ನಂತರ ಮಹಿಳಾ ಪೀಡಕರ ವಿರುದ್ಧ ಕಾರ್ಯಾಚರಣೆ ಮುಂದುವರೆಸಲಿದೆ.


ಮೊದಲ ಹಂತದಲ್ಲಿ ಅರಿವು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜ್ ಮಾತನಾಡಿ, ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಅಕ್ಕಪಡೆಯನ್ನು ಉದ್ಘಾಟಿಸಿದ್ದರು. ಇದೀಗ ಮೈಸೂರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನೆರವಿನಿಂದ ಅಕ್ಕಪಡೆ ಕಾರ್ಯಾಚರಣೆ ಆರಂಭಿಸಿದೆ. ಇಲಾಖೆ ವತಿಯಿಂದ ಜೀಪ್ ನೀಡಿ, ಅದಕ್ಕೆ ಬೇಕಾದ ಇಂಧನ ವೆಚ್ಚವನ್ನು ಸಹ ಭರಿಸುತ್ತಿದೆ. ಅಕ್ಕಪಡೆಯಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿ, ಇಬ್ಬರು ಮಹಿಳಾ ಹೋಮ್‌ಗಾರ್ಡ್, ಜೀಪ್ ಚಾಲನೆಗೆ ಕೆಎಸ್‌ಆರ್‌ಪಿ ಪೇದೆಯನ್ನು ನಿಯೋಜಿಸಲಾಗಿದೆ. ಎರಡು ಪಾಳಿಯಲ್ಲಿ ಈ ತಂಡ ಕಾರ್ಯನಿರ್ವಹಿಸುತ್ತಿದ್ದು, ಪ್ರಾಥಮಿಕ ಹಂತದಲ್ಲಿ ಮಹಿಳಾ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುತ್ತಿದೆ. ಮೈಸೂರು ನಗರ ಮಾತ್ರವಲ್ಲದೆ, ಜಿಲ್ಲೆಯ ವಿವಿಧೆಡೆಯಿರುವ ಮಹಿಳಾ ಕಾಲೇಜುಗಳು, ಬಾಲಕಿಯರ ಶಾಲೆಗಳಿಗೆ ತೆರಳಿ, ಸುರಕ್ಷತೆಯ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಪ್ರಮುಖವಾಗಿ ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ತಿಳಿ ಹೇಳಲಾಗುತ್ತಿದೆ. ಅಲ್ಲದೆ, ದಾರಿಯಲ್ಲಿ ಯಾರಾದರೂ ಪೀಡಿಸಿದರೆ ಏನು ಮಾಡಬೇಕು, ಪೊಲೀಸರ ಸಹಾಯವಾಣಿ, ಅಕ್ಕಪಡೆಯ ನೆರವು, ಸಾರ್ವಜನಿಕರ ಸಹಾಯ ಪಡೆದುಕೊಳ್ಳುವುದು ಸೇರಿದಂತೆ ಆತ್ಮ ರಕ್ಷಣೆಗೆ ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ತಿಳಿಸಲಾಗುತ್ತಿದೆ. ಎಲ್ಲಾ ತಾಲೂಕುಗಳಲ್ಲೂ ಜಾಗೃತಿ ಮೂಡಿಸಿದ ನಂತರ ಮಹಿಳಾ ರಕ್ಷಣಾ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಮುಂದುವರೆಸಲಿದೆ ಎಂದು ತಿಳಿಸಿದರು.

ಕೌಟುಂಬಿಕ ಕಲಹಕ್ಕೂ ಎಂಟ್ರಿ: ಜಿಲ್ಲೆಯ ವಿವಿಧೆಡೆ ನಡೆಯುವ ಕೌಟುಂಬಿಕ ಕಲಹದಲ್ಲೂ ಮಹಿಳೆಯರ ರಕ್ಷಣೆಗೆ ಅಕ್ಕಪಡೆ ಮುಂದಾಗಲಿದೆ. ದೂರು ಬಂದ ಸ್ಥಳಕ್ಕೆ ಹೋಗುವ ಅಕ್ಕಪಡೆ ಕೌಟುಂಬಿಕ ಕಲಹದಂತಹ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥ ಮಾಡುವ ಪ್ರಯತ್ನ ಮಾಡಲಿದೆ. ಸಮಾಧಾನ ಮಾಡುವ, ಆಪ್ತ ಸಮಾಲೋಚನೆ ಮೂಲಕ ವೈಮನಸ್ಸನ್ನು ತೊಡೆದು ಹಾಕುವ ಪ್ರಯತ್ನ ಮಾಡಲಿದೆ. ಆದರೆ, ಅದಕ್ಕೆ ಸ್ಪಂದನೆ ಸಿಗದಿದ್ದರೆ ಮಾತ್ರ, ಕಾನೂನಿನ ಚೌಕಟ್ಟಿನೊಳಗೆ ಕ್ರಮ ಕೈಗೊಂಡು ಸಂತ್ರಸ್ತ ಮಹಿಳೆಯರ ರಕ್ಷಣೆಗೆ ಮುಂದಾಗುತ್ತದೆ.

ಪುರುಷಾರ್ಥ, ಇದೆಂಥಾ ದೇಶ ಪ್ರೇಮ ರೀ!? ಕೃತಿಗಳ ಬಿಡುಗಡೆ

ಬಹುಮಾಧ್ಯಮಗಳಲ್ಲಿ ಅಶ್ಲೀಲದ ಮೆರವಣಿಗೆ; ಹಿರಿಯ ಸಾಹಿತಿ ಸಿಪಿಕೆ ವಿಷಾದ


ಮೈಸೂರಿನ ಗೋಪಾಲಸ್ವಾಮಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಂಕರನಾರಾಯಣ ಅವರ 'ಪುರುಷಾರ್ಥ' ಹಾಗೂ ಎಸ್.ಶಿಶಿರಂಜನ್ ಅವರ 'ಇದೆಂಥಾ ದೇಶಪ್ರೇಮ ರೀ?!' ಕೃತಿಗಳನ್ನು ವಿದ್ವಾಂಸ ಡಾ.ಕೆ. ಅನಂತರಾಮು ಬಿಡುಗಡೆ ಮಾಡಿದರು.

ಮೈಸೂರು,ಫೆ.2(ಎಂಟಿವೈ)–ಇತ್ತೀಚಿನ ದಿನಗಳಲ್ಲಿ ಬಹುಮಾಧ್ಯಮಗಳಲ್ಲಿ ಅಶ್ಲೀಲದ ಮೆರವಣಿಗೆ ಹೆಚ್ಚಾಗುತ್ತಿದ್ದು, ಇದರಿಂದ ಸಮಾಜದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ವಿಷಾದಿಸಿದ್ದಾರೆ.

ಮೈಸೂರಿನ ಗೋಪಾಲಸ್ವಾಮಿ ಪದವಿ ಪೂರ್ವ ಕಾಲೇಜಿನಲ್ಲಿ ಸ್ವಜನ್ಯ ಕಲಾ ವೇದಿಕೆ, ಭಾಗೀರಥಿ ಪ್ರಕಾಶನ, ಶ್ರೀ ಶಾರದಾ ಪ್ರಕಾಶನ ಆಯೋಜಿಸಿದ್ದ ಶಂಕರನಾರಾಯಣ 'ಪುರುಷಾರ್ಥ' ಕಾದಂಬರಿ ಹಾಗೂ ಎಸ್.ಶಿಶಿರಂಜನ್ 'ಇದೆಂಥಾ ದೇಶ ಪ್ರೇಮ ರೀ?!'– ನಾಟಕ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಸದಭಿರುಚಿ ಬರವಣಿಗೆ ಇಳಿಮುಖವಾಗುತ್ತಿದೆ. ದೇಶ ಪ್ರೇಮವೂ ಕ್ಷೀಣಿಸುತ್ತಿದೆ. ಆದರೆ ಇಂದು ಬಿಡುಗಡೆಯಾಗುತ್ತಿರುವ ಎರಡು ಪುಸ್ತಕಗಳು ಸಂಸ್ಕೃತಿ ಪೂರ್ಣ ಹಾಗೂ ಸದಭಿರುಚಿಯ, ಶೀಲಸಂಪದ ಕೃತಿಗಳಾಗಿವೆ. ಪ್ರಕೃತಿ, ಗ್ರಾಮೀಣ ಸಂಸ್ಕೃತಿ ಇದೆಯೇ ಹೊರತು ವಿಕೃತಿ ಇಲ್ಲ. ನಾಟಕ ಮತ್ತು ಕಾದಂಬರಿಯ ನಡುವೆ ನಿಕಟ ಸಂಬಂಧವಿದೆ. ಸಾಹಿತ್ಯ ಕೃತಿಗಳು ಸಂತೋಷ ಮತ್ತು ಸಂದೇಶ ಕೊಡುವಂತಿರಬೇಕು ಎಂದರು.

ಕೃತಿಗಳನ್ನು ಬಿಡುಗಡೆ ಮಾಡಿದ ಹಿರಿಯ ವಿದ್ವಾಂಸ ಡಾ.ಕೆ.ಅನಂತರಾಮು ಮಾತನಾಡಿ, ಕೆಲವು ಕೃತಿಗಳನ್ನು ಕೈತೊಳೆದು ಮುಟ್ಟಬೇಕು. ಇನ್ನೂ ಕೆಲವುಗಳನ್ನು ಮುಟ್ಟಿದ ನಂತರ ಕೈತೊಳೆಯಬೇಕು. ಇಂದು ಬಿಡುಗಡೆಯಾದ ಎರಡೂ ಕೃತಿಗಳು ಕೈತೊಳೆದು ಮುಟ್ಟುವಂಥವು. ಇವು ನವೋದಯ ಯುಗದ ಭಾವದಂತಿವೆ. ಪ್ರಸ್ತುತ ದೇಶ ಪ್ರೇಮದ ಕೊರತೆ ಕಾಡುತ್ತಿದೆ. ಎಲ್ಲಾ ಸಮಸ್ಯೆಗಳಿಗೂ ಇದೇ ಕಾರಣ. ದೇಹಕ್ಕೆ ವಿಟಮಿನ್‌ಗಳ ಕೊರತೆಯಿಂದ ರೋಗಗಳು ಬರುವಂತೆ ದೇಶಪ್ರೇಮ, ದೇಶಭಕ್ತಿಯ ವಿಟಮಿನ್ ಕೊರತೆ ಕಾಡುತ್ತಿದೆ ಎಂದು ತಿಳಿಸಿದರು.

ಪುರುಷಾರ್ಥ ಕಾದಂಬರಿ ಕುರಿತು ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮಾತನಾಡಿ, ಇತ್ತೀಚೆಗೆ ಮನೆಯವರೆಲ್ಲ ಒಟ್ಟಿಗೆ ಕುಳಿತು ಟಿವಿ ನೋಡಲಾಗದ ರೀತಿಯಲ್ಲಿ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಈ ಕಾದಂಬರಿಯ ಆಂತರಿಕ ಚೌಕಟ್ಟು ಚೆನ್ನಾಗಿದೆ. ಯಾವುದೇ ಗರ್ವಾಗರಂ ಮಸಾಲೆ ಹಾಕಿಲ್ಲ. ಟಿವಿ ಧಾರಾವಾಹಿಗಳಂತೆ ಖಳನಾಯಕ, ನಾಯಕಿಯರಿಲ್ಲ. ಇಡೀ ಕಾದಂಬರಿ ಮನಸ್ಸಿಗೆ ಮುದ ನೀಡುವಂತಿದೆ. ಶೃಂಗಾರವಿದೆ. ಆದರೆ ಅಶ್ಲೀಲತೆ ಇಲ್ಲ. ಪರಿಶುದ್ಧ ಪ್ರೀತಿಯ, ಸದಭಿರುಚಿಯ ಕಾದಂಬರಿ ಇದಾಗಿದೆ. ಸಾಹಿತ್ಯ ಜೀವನಕ್ಕೆ ಸಂಜೀವಿನಿ ಆಗಬೇಕು. 39 ಅಧ್ಯಾಯಗಳ, 50 ಪಾತ್ರಗಳ ಈ ಕಾದಂಬರಿ ಹಲವಾರು ರೋಚಕತೆಯಿಂದ ಕೂಡಿದೆ ಎಂದರು.

'ಇದೆಂಥಾ ದೇಶಪ್ರೇಮ ರೀ?!' ಕೃತಿ ಕುರಿತು ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು ಪರೀಕ್ಷಾ ನಿಯಂತ್ರಣಾಧಿಕಾರಿ ಹಾಗೂ ಸಹ ಪ್ರಾಧ್ಯಾಪಕ ಡಾ.ಪ್ರಭುಸ್ವಾಮಿ ಕಟ್ನವಾಡಿ ಮಾತನಾಡಿ, ಎಲ್ಲಾ ನಾಟಕ ಕೃತಿಗಳನ್ನು ರಂಗದ ಮೇಲೆ ತರಲು ಸಾಧ್ಯವಾಗುವುದಿಲ್ಲ. ಆದರೆ ಈ ನಾಟಕ ರಂಗಕ್ಕೆ ಹೇಳಿಮಾಡಿಸಿದಂತಿದೆ. ಇದರಿಂದಾಗಿಯೇ ಈಗಾಗಲೇ 50 ಪ್ರದರ್ಶನಗಳಾಗಿವೆ. ಹಿರಿಯರು ತ್ಯಾಗ– ಬಲಿದಾನದಿಂದ ಗಳಿಸಿಕೊಟ್ಟ ಸ್ವಾತಂತ್ರ್ಯ ಸ್ವೇಚ್ಛಾಚಾರವಲ್ಲ. ಮಕ್ಕಳಿಗೆ ಅದರ ಮೌಲ್ಯ ತಿಳಿಸಬೇಕು ಎಂದು ಸಲಹೆ ನೀಡಿದರು.

ಕಾದಂಬರಿಕಾರ ಶಂಕರನಾರಾಯಣ ಮಾತನಾಡಿ, 1974ರಲ್ಲಿ ಹೊಳೆದ ಈ ಕಾದಂಬರಿಯ ವಸ್ತುವನ್ನು ಕೋವಿಡ್ ಸಂದರ್ಭದಲ್ಲಿ ಪೂರ್ಣಗೊಳಿಸಿ, ಇದೀಗ ಬಿಡುಗಡೆಗೊಳಿಸುತ್ತಿರುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ವಹಿಸಿದ್ದರು. ಮಹಾರಾಜ ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಸ್.ಮುರುಳಿ ಮುಖ್ಯ ಅತಿಥಿಯಾಗಿದ್ದರು. ಕಾದಂಬರಿಕಾರ ಡಿ.ಎನ್. ಕೃಷ್ಣಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ನಿವೇದಿತಾ ಪ್ರಾರ್ಥಿಸಿದರು. ಡಾ.ಶ್ವೇತಾ ಸ್ವಾಗತಿಸಿದರು. ರಾಜೇಂದ್ರ ಪ್ರಸಾದ್ ಹೊನ್ನಲಗೆರೆ ಕಾರ್ಯಕ್ರಮ ನಿರೂಪಿಸಿದರು. ಎಸ್.ಶಿಶಿರಂಜನ್ ವಂದಿಸಿದರು.

ಲೈವ್ ಫೋನ್–ಇನ್ ಕಾರ್ಯಕ್ರಮ


ಮೈಸೂರು: ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಮುದಾಯ ಬಾನುಲಿ ಕೇಂದ್ರವಾದ ಜೆಎಸ್‌ಎಸ್ ರೇಡಿಯೋ 91.2 FM, ಆಧಾರ್ ನವೀಕರಣ ಕುರಿತು ಲೈವ್ ಫೋನ್ ಇನ್ ಸಂದರ್ಶನ ಕಾರ್ಯಕ್ರಮವನ್ನು ಆಯೋಜಿಸಿದೆ.



ಕಾರ್ಯಕ್ರಮವು ಫೆ.4 ಬೆಳಗ್ಗೆ 11:30 ರಿಂದ ಮಧ್ಯಾಹ್ನ 12:30ರವರೆಗೆ ನಡೆಯಲಿದೆ. ಸಂಪನ್ಮೂಲ ವ್ಯಕ್ತಿಯಾಗಿ ಕರ್ನಲ್ ಕೃಷ್ಣಪ್ರಸಾದ್ ಎನ್.ಜಿ. (ನಿವೃತ್ತ), ಕೇಂದ್ರ ವ್ಯವಸ್ಥಾಪಕರು, ASK ಮೈಸೂರು ಭಾಗವಹಿಸಲಿದ್ದಾರೆ.

ಸಾರ್ವಜನಿಕರು ನೇರವಾಗಿ ಕರೆ ಮಾಡಿ, ಆಧಾರ್ ಸಂಬಂಧಿತ ಸೇವೆಗಳಾದ ಆಧಾರ್ ನವೀಕರಣ, ತಿದ್ದುಪಡಿ, ವಿಳಾಸ ಬದಲಾವಣೆ ಹಾಗೂ ಇತರೆ ಸಮಸ್ಯೆಗಳ ಕುರಿತು ಸ್ಪಷ್ಟನೆ ಪಡೆಯಲು ಮತ್ತು ತಮ್ಮ ಸಲಹೆಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕರೆ ಮಾಡಲು ದೂ.ಸಂ: 8296725912 / 0821–2546563.

ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯ...


ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಚೇತನ್‌ವಿಷಕಂಠೇಗೌಡ, ಮಂಜುಗೌಡ, ಮಧುಚಂದ್ರ, ಲೋಕೇಶ್, ವಿನೋದ್, ಇನ್ನಿತರರು ಭಾರೀ ಹಾರ ಹಾಕಿ, ಅಭಿನಂದಿಸಿ ಶುಭಾಶಯ ಕೋರಿದರು.

ಚಬಹಾರ್ ಬಂದರಿಗೆ ಹಣ ಕೊಡದ ಕೇಂದ್ರ

ಅಮೆರಿಕದ ಒತ್ತಡಕ್ಕೆ ಭಾರತ ಶರಣಾಗತಿ: ಶಶಿ ತರೂರ್ ಕಿಡಿ!

ನವದೆಹಲಿ: ಕೇಂದ್ರ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಮಂಡಿಸಿರುವ 2026–27ನೇ ಸಾಲಿನ ಬಜೆಟ್ ನಲ್ಲಿ ಇರಾನ್ ನ ಚಬಹಾರ್ ಬಂದರು ಅಭಿವೃದ್ಧಿಗೆ ಯಾವುದೇ ಹಣ ಮೀಸಲಿಡದಿರುವುದು ತೀವ್ರ ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಅಮೆರಿಕದ ಒತ್ತಡಕ್ಕೆ ಶರಣಾಗತಿಯ ಸಂಕೇತ ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಸೋಮವಾರ ಹೇಳಿದ್ದಾರೆ.

ಇರಾನ್‌ನ ಮೇಲೆ ಕಠಿಣ ಅಮೆರಿಕ ನಿರ್ಬಂಧಗಳು ಮತ್ತು ಇರಾನ್ ಜೊತೆಗೆ ವ್ಯವಹಾರವನ್ನು ಮುಂದುವರೆಸುವ ದೇಶಗಳ ಮೇಲೆ ಹೆಚ್ಚುವರಿ ಸುಂಕಗಳ ಒತ್ತಡದಿಂದಾಗಿ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಚಬಹಾರ್ ಬಂದರು ಅಭಿವೃದ್ಧಿಗೆ ಯಾವುದೇ ಹಣ ಮೀಸಲಿಟ್ಟಿಲ್ಲ ಎಂದಿದ್ದಾರೆ.

ಈ ಹಿಂದೆ ಮಧ್ಯ ಏಷ್ಯಾದ ಕಾರ್ಯತಂತ್ರದ ಹೆಬ್ಬಾಗಿಲು ಮತ್ತು ಚೀನಾದ ಗ್ವಾದರ್ ಬಂದರಿಗೆ ಪ್ರತಿತಂತ್ರ ಎಂದು ಭಾರತವೇ ಹೇಳುತ್ತಿದ್ದ ಚಬಹಾರ್ ಬಂದರಿಗೆ ಕಳೆದ ವರ್ಷ ಪರಿಷ್ಕೃತ ಬಜೆಟ್‌ನಲ್ಲಿ 400 ಕೋಟಿ ರೂ. ಹಂಚಿಕೆ ಮಾಡಲಾಗಿತ್ತು. ಚಬಹಾರ್ ಬಂದರು ಅಭಿವೃದ್ಧಿ ಸಂಬಂಧ ಅಮೆರಿಕದೊಂದಿಗೆ ಮಾತುಕತೆಗಳು ನಡೆಯುತ್ತಿವೆ ಎಂದು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಆದರೆ, ಮೌನವು ಎಲ್ಲವನ್ನೂ ಹೇಳುತ್ತಿದೆ ಎಂದು ವಿಪಕ್ಷ ನಾಯಕರು ಹೇಳುತ್ತಿದ್ದಾರೆ.

ಜಾಗತಿಕ ಇಂಧನ ರಾಜಕೀಯ, ನಿರ್ಬಂಧಗಳು ಮತ್ತು ಆರ್ಥಿಕ ನಿರ್ಧಾರಗಳನ್ನು ಮರುರೂಪಿಸುವುದರಿಂದ, ಭಾರತ ಕೇವಲ ಯುದ್ಧತಂತ್ರದಿಂದ ಈ ರೀತಿ ಮಾಡುತ್ತಿದ್ದಂತೆಯೇ ಅಥವಾ ಪ್ರಮುಖ ಕಾರ್ಯತಂತ್ರದ ಬದ್ಧತೆಯಿಂದ ಹಿಂದೆ ಸರಿಯುತ್ತಿದೆಯೇ ಎಂಬ ಪ್ರಶ್ನೆಗಳು ಹೇಳುವಂತೆ ಮಾಡಿದೆ.

ಜನರಲ್ ನರವಾಣೆಯವರ ಅಪ್ರಕಟಿತ ಪುಸ್ತಕದ ವಿಚಾರ ಪ್ರಸ್ತಾಪ; ಲೋಕಸಭೆಯಲ್ಲಿ ಗದ್ದಲ

ನವದೆಹಲಿ: ಲಡಾಖ್ ಗಡಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಕುಂದ ನರವಾಣೆ ಅವರ ಅಪ್ರಕಟಿತ ಪುಸ್ತಕ ವಿಚಾರವನ್ನು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದು ಲೋಕಸಭೆಯಲ್ಲಿ ಭಾರೀ ಕೋಲಾಹಲವನ್ನೇ ಸೃಷ್ಟಿಸಿತು.

ಸಂಸತ್‌ನಲ್ಲಿ ಸೋಮವಾರ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ವೇಳೆ ರಾಹುಲ್ ಗಾಂಧಿ, ಮಾಜಿ ಸೇನಾ ಮುಖ್ಯಸ್ಥರ ಅಪ್ರಕಟಿತ ಪುಸ್ತಕವನ್ನು ಪ್ರದರ್ಶಿಸಿ, ಈ ಪುಸ್ತಕದಲ್ಲಿ ಗಲ್ವಾನ ಸಂಘರ್ಷದ ಬಗ್ಗೆ ಸ್ಫೋಟಕ ಮಾಹಿತಿ ಇದೆ ಎಂದು ವಿವರಿಸಲು ಮುಂದಾದರು. ಈ ವೇಳೆ ಮಧ್ಯಪ್ರವೇಶಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಅಪ್ರಕಟಿತ ವಿಷಯವನ್ನು ಸದನದಲ್ಲಿ ಉಲ್ಲೇಖಿಸುವುದು ಸರಿಯಲ್ಲ ಎಂದರು.

ಇದನ್ನು ಬೆಂಬಲಿಸಿದ ಗೃಹ ಸಚಿವ ಅಮಿತ್ ಶಾ ಆಕ್ಷೇಪ ವ್ಯಕ್ತಪಡಿಸಿ, ಔಪಚಾರಿಕವಾಗಿ ಪ್ರಕಟಿತ ವಿಷಯವನ್ನು ಪ್ರಸ್ತಾಪಿಸಬಾರದು. ಪತ್ರಿಕೆಗಳು ಮತ್ತು ಮ್ಯಾಗಜಿನ್‌ಗಳು ಏನು ಬೇಕಾದರೂ ಪ್ರಕಟಿಸಬಹುದು. ಅಧಿಕೃತವಾಗಿ ಪ್ರಕಟವಾಗದ ವಿಷಯಗಳನ್ನು ಸಂಸತ್ತಿನ ದಾಖಲೆಯ ಭಾಗವಾಗಿಸಲು ಅವಕಾಶ ಕೊಡಬಾರದು ಎಂದು ಆಗ್ರಹಿಸಿದರು.

ಇದರಿಂದ ಸದನದಲ್ಲಿ ಗದ್ದಲ ಹೆಚ್ಚಾಯಿತು. ಆಡಳಿತ ಪಕ್ಷವು ಉದ್ದೇಶಪೂರ್ವಕವಾಗಿ ಚರ್ಚೆಯನ್ನು ನಿಲ್ಲಿಸಲು ಯತ್ನಿಸುತ್ತಿದೆ ಎಂದು ವಿರೋಧ ಪಕ್ಷದ ಸದಸ್ಯರು ಆರೋಪಿಸಿ, ರಾಜನಾಥ್ ಸಿಂಗ್ ಮತ್ತು ಅಮಿತ್ ಶಾ ಅವರ ಮಧ್ಯಪ್ರವೇಶವನ್ನು ಖಂಡಿಸಿದರು.



ಸರ್ಕಾರದ ಆಕ್ಷೇಪಗಳಿಗೆ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ಜನರಲ್ ನರವಾಣೆ ಅವರ ಪುಸ್ತಕದ ಆಧಾರದ ಮೇಲೆ ಮ್ಯಾಗಜಿನ್‌ನಲ್ಲಿ ಪ್ರಕಟವಾದ ವರದಿಯನ್ನು ತಾವು ಉಲ್ಲೇಖಿಸಿದ್ದೇನೆ. ತಮ್ಮ ಉಲ್ಲೇಖ ನಂಬಿಕಸ್ಥ ಮೂಲದ ಮೇರೆಗೆ ಇದ್ದು, ಆಡಳಿತ ಪಕ್ಷದ ಒಬ್ಬ ಸಂಸದರು ಕಾಂಗ್ರೆಸ್ ವಿರುದ್ಧ ಆರೋಪ ಮಾಡಿದ ಕಾರಣಕ್ಕೆ ಈ ವಿಷಯವನ್ನು ಪ್ರಸ್ತಾಪಿಸಬೇಕಾಯಿತು ಎಂದು ಸಮರ್ಥಿಸಿಕೊಂಡರು.

ಈ ವೇಳೆ ಸಮಾಜವಾದಿ ಪಕ್ಷದ ಸಂಸದ ಅಖಿಲೇಶ್ ಯಾದವ್, ರಾಹುಲ್ ಗಾಂಧಿಗೆ ಬೆಂಬಲ ವ್ಯಕ್ತಪಡಿಸಿದರು. ಚೀನಾ ಸಂಬಂಧಿತ ವಿಷಯ ಅತ್ಯಂತ ಸೂಕ್ಷ್ಮವಾದದ್ದು. ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಪ್ರತಿಪಕ್ಷ ನಾಯಕನಿಗೆ ಸಂಪೂರ್ಣವಾಗಿ ಮಾತನಾಡಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಬಳಿಕ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವಿನ ವಾಗ್ವಾದ ತೀವ್ರಗೊಂಡು, ಘೋಷಣೆಗಳು ಮತ್ತು ಅಡ್ಡಿಪಡಿಸುವಿಕೆಗಳಿಂದ ಸದನದಲ್ಲಿ ಕೆಲಕಾಲ ಗದ್ದಲವುಂಟಾಯಿತು. ಈ ಎಲ್ಲದರ ನಡುವೆಯೂ ರಾಹುಲ್ ಗಾಂಧಿ ತಮ್ಮ ಭಾಷಣವನ್ನು ಮುಂದುವರಿಸಿದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ವಾಗ್ವಾದ ತಾರಕಕ್ಕೇರಿದ್ದರಿಂದ ಕಲಾಪವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಯಿತು.

ನರವಾಣೆ ಮತ್ತು ಆತ್ಮಚರಿತ್ರೆ: ಪುಣೆಯ ಮನೋಜ್ ಮುಕುಂದ್ ನರವಾಣೆ, ಭಾರತೀಯ ವಾಯುಪಡೆಯ ಮಾಜಿ ಅಧಿಕಾರಿಯ ಪುತ್ರ. ಜೂನ್ 1980ರಲ್ಲಿ ಸಿಖ್ ಲೈಟ್ ಇನ್‌ಫೆಂಟ್ರಿಯ 7ನೇ ಬೆಟಾಲಿಯನ್ ನಿಯೋಜನೆಯೊಂದಿಗೆ ನರವಾಣೆ ಸೇನಾ ಜೀವನ ಆರಂಭವಾಯಿತು. ಈಶಾನ್ಯ ರಾಜ್ಯಗಳಲ್ಲಿನ ದಂಗೆ ನಿಗ್ರಹಕ್ಕೆ ಕಾರ್ಯಾಚರಣೆ ನಡೆಸಿದ್ದ ಅಸ್ಸಾಂ ರೈಫಲ್ಸ್‌ನ ಕಮಾಂಡರ್ ಆಗಿದ್ದ ಇವರು, 2019ರ ಡಿ.31 ರಂದು ಭಾರತೀಯ ಸೇನೆಯ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿ, ಸೇವೆ ಸಲ್ಲಿಸಿದ ನಂತರ ನಿವೃತ್ತರಾದರು. ಇವರ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ' ಶೀರ್ಷಿಕೆಯ ಆತ್ಮಚರಿತ್ರೆ ಸದ್ಯ ಸದನದಲ್ಲಿ ಕೋಲಾಹಲ ಸೃಷ್ಟಿಸಿದೆ. ಸರ್ಕಾರದ ಅಂತಿಮ ಅನುಮತಿಗೆ ಕಾದಿರುವುದರಿಂದ ಪುಸ್ತಕದ ಪ್ರಕಟಣೆಯನ್ನು ತಡೆಹಿಡಿಯಲಾಗಿದೆ. ಆದರೆ ನರವಾಣೆ ಆತ್ಮಚರಿತ್ರೆಯ ಆಯ್ದ ಕೆಲ ಭಾಗಗಳನ್ನು 2023ರ ಡಿಸೆಂಬರ್‌ನಲ್ಲಿ ಹಲವು ಮಾಧ್ಯಮಗಳು ಪ್ರಕಟಿಸಿದ್ದು, ಸಿಕ್ಕಿಂನಲ್ಲಿ ಚೀನಿಯರೊಂದಿಗಿನ ಮೊದಲ ಭೇಟಿ, ಗಾಲ್ವಾನ್‌ನಲ್ಲಿ ಅವರೊಂದಿಗೆ ವ್ಯವಹರಿಸಿದ್ದು, ಎಲ್‌ಒಸಿಯಾದ್ಯಂತ ಗುಂಡಿನ ದಾಳಿ, ಪಾಕಿಸ್ತಾನದೊಂದಿಗೆ ಕದನ ವಿರಾಮ ಜಾರಿ ಸೇರಿದಂತೆ ಹಲವು ವಿಚಾರಗಳನ್ನು ಪುಸ್ತಕದಲ್ಲಿ ದಾಖಲಿಸಿದ್ದಾರೆ ಎನ್ನಲಾಗಿದೆ.



ಸಾರ್ವಜನಿಕ ಪ್ರಕಟಣೆ


ನನ್ನ ಕಕ್ಷಿದಾರರಾದ ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು, ಗೌಡಹಳ್ಳಿ, ವಡಗೆರೆ, ಒಕ್ಕಲಿಗರ ಬೀದಿಯಲ್ಲಿ ವಾಸವಾಗಿರುವ ಆಳ ಸಿಂಗ್ರಪ್ಪ ನವರ ಧರ್ಮಪತ್ನಿಯಾದ ಶ್ರೀಮತಿ ಪದ್ಮ ರವರ ಇರಾದೆ ಮೇರೆಗೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಕ್ರಮವೇನೆಂದರೆ, ಷೆಡ್ಯೂಲ್‌ನಲ್ಲಿ ನಮೂದಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಬೆಂಗಳೂರು ಸಿಟಿ, ಬೆಂಗಳೂರು ದಕ್ಷಿಣ, 8ನೇ ಫೇಸ್, ಜೆ.ಪಿ.ನಗರ, ಕೊತನೂರು ಮುಖ್ಯ ರಸ್ತೆ, 1ನೇ ಕ್ರಾಸ್, ಸಾಯಿ ಸುಮುಖ ಸಮೃದ್ಧಿ ಅಪಾರ್ಟ್ ಮೆಂಟ್, 1ನೇ ಮಹಡಿ, ನಂ. 102 ರಲ್ಲಿ ವಾಸವಾಗಿರುವ ಸುಮಾರು 80 ವರ್ಷ ವಯಸ್ಸಿನ ಲೇಟ್. ವಿ. ನಂಜಪ್ಪನವರ ಮಗನಾದ ಶ್ರೀ ಎನ್. ಅನಂತರಾಮು ರವರಿಂದ ಕ್ರಯಕ್ಕೆ ಪಡೆಯಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿಗೆ ಮಾಲೀಕರಲ್ಲದೇ, ಹಕ್ಕು ಹಿತಾಸಕ್ತಿಯುಳ್ಳವರು ಮತ್ತು ಭಾಗಾಂಶವುಳ್ಳವರು ಯಾರಾದರು ಇದ್ದಲ್ಲಿ, ನನಗಾಗಲೀ ಅಥವಾ ನನ್ನ ಕಕ್ಷಿದಾರರಿಗಾಗಲೀ ಖುದ್ದಾಗಿ ಅಥವಾ ಪತ್ರದ ಮೂಲಕ ದಾಖಲೆಗಳೊಡನೇ ಈ ಸಾರ್ವಜನಿಕ ಪ್ರಕಟಣೆ ಕಂಡ 7 ದಿನದೊಳಗೆ ತಿಳಿಸತಕ್ಕದ್ದು ಎಂದು ಈ ಮೂಲಕ ಪ್ರಕಟಣೆ, ನಂತರ ಬಂದ ಯಾವುದೇ ತಕರಾರುಗಳು ನನ್ನ ಕಕ್ಷಿದಾರರಿಗೆ ಬಾಧ್ಯವಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಶ್ರೀರಾಂಪುರ 2ನೇ ಹಂತ, 8ನೇ ಕ್ರಾಸ್, ಸ್ವತ್ತಿನ ಇ ಖಾತಾ ಸಂ.18–13–969–223, ಸ್ವತ್ತಿನ ಸಂ. 223, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ: 12.192024 ಮೀಟರ್, ಉತ್ತರ–ದಕ್ಷಿಣ: 18.288.37 ಮೀಟರ್ (ಒಟ್ಟು 222.9682 ಚದರ ಮೀಟರ್) ಇದಕ್ಕೆ ಚೆಕ್ಕುಬಂದಿ:– ಪೂರ್ವಕ್ಕೆ: 224ನೇ ನಂಬರಿನ ಸ್ವತ್ತು ; ಪಶ್ಚಿಮಕ್ಕೆ: 222ನೇ ನಂಬರಿನ ಸ್ವತ್ತು ; ಉತ್ತರಕ್ಕೆ ರಸ್ತೆ ; ದಕ್ಷಿಣಕ್ಕೆ :: 224ನೇ ನಂಬರಿನ ಸ್ವತ್ತು.

Sd/- B.C. Renuka Prasad, B.Sc., LL.B.
Advocate, Roll No. 1787/2009,
#816, 10th Cross, Ramanuja Road,
Mysuru-570 004.
Date: 2-2-2026

4ನೇ ವರ್ಷದ ಸವಿನೆನಪು



ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನಗಲಿ 4ನೇ ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಪತ್ನಿ ಲಲಿತಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಗಾಯತ್ರಿಪುರಂ, ಮೈಸೂರು
ಕೆ.ಬಾಲು(ಕೆಎಸ್‌ಆರ್‌ಟಿಸಿ)

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಎಸ್. ಕೆಂಪಮ್ಮ ನವರು

ಇವರು ದಿನಾಂಕ 25–01–2026 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 04–02–2026 ಬುಧವಾರ ಬೆಳಿಗ್ಗೆ 11–00 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಮಕ್ಕಳು, ಮಗಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ: ಮಧ್ಯಾಹ್ನ 12.30 ಗಂಟೆಗೆ
ಸ್ಥಳ; ಲಕ್ಷ್ಮಿ ವೆಂಕಟರಮಣ ಚಾರಿಟೇಬಲ್ ಟ್ರಸ್ಟ್, 2ನೇ ಹಂತ, ಗೋಕುಲಂ ರುದ್ರಭೂಮಿ ಪಕ್ಕ, ಮೈಸೂರು

ಸವಿನೆನಪು



ಶ್ರೀ ಹುಚ್ಚಯ್ಯರವರು

ಮೈಸೂರು ಮತ್ತು (ಆರೋಗ್ಯ ಇಲಾಖೆ)

ಇಂದಿಗೆ ನೀವು ನಮ್ಮನ್ನಗಲಿ 13 ವರ್ಷವಾಯಿತು ಇಂದಿಗೂ ಸದಾ ನಿಮ್ಮ ನೆನಪಿನಲ್ಲಿರುವ ನೀವು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಶ್ರೀಮತಿ ಮಂಜುಳ, ಹೆಚ್.ಹೇಮಂತ್ ಕುಮಾರ್, ಅನುಪಮ, ರಿಷಿಕ್ ನಿಹಾನ್, ರಿಯಾನ್ ಆರ್ಯ ಹೆಚ್.ಶಶಿಕುಮಾರ್ ಜ್ಯೋತಿ, ನಿಹಾನಿ, ರಾಮಾನುಜ ರಸ್ತೆ, ಬಡಗಲಹುಂಡಿ ಗ್ರಾಮಸ್ಥರು